
# ಪ್ರಮೀಳಾ ಗುಡೂರು

ಡಾ॥ ಮುರ್ತುಜಾ ಬ. ಒಂಟಿ



ಕರ್ನಾಟಕ ನಾಟಕ ಅಕಾಡೆಮಿ

ರಂಗಸಂಪನ್ನರು ಮಾಲಿಕೆ

# ಪ್ರಮೀಳಾ ಗುಡೂರು

ಡಾ|| ಮುರ್ತುಜಾ ಬ. ಒಂಟಿ

ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೦೨

**Prameela Guduru :**
A Monograph in Kannada by **Dr. Murtuja B. Onti**
Published by **Mr. Siddaraju,** Registrar, Karnataka Nataka Academy, Kannada Bhavana, J.C.Road, Bengaluru- 560002 . Phone: 080-22237484

ಹಕ್ಕುಗಳು : ಕರ್ನಾಟಕ ನಾಟಕ ಅಕಾಡೆಮಿ
ಮೊದಲ ಮುದ್ರಣ : ೨೦೧೬
ಪ್ರತಿಗಳು : ೧,೦೦೦
ಪುಟಗಳು : ೯೬
ಬೆಲೆ : ರೂ. ೭೦/-

**ಪ್ರಕಾಶಕರು**
ಸಿದ್ಧರಾಜು, ರಿಜಿಸ್ಟ್ರಾರ್,
ಕರ್ನಾಟಕ ನಾಟಕ ಅಕಾಡೆಮಿ,
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨
ದೂರವಾಣಿ: ೦೮೦ ೨೨೨೩೭೪೮೪

ಮುಖಪುಟ ವಿನ್ಯಾಸ :
ಕೃಷ್ಣ ರಾಯಚೂರು

ಮುದ್ರಣ :
ರೀಗಲ್ ಪ್ರಿಂಟ್ ಸರ್ವೀಸ್
ಬೆಂಗಳೂರು - ೫೬೦ ೦೨೬
ಮೊ. : ೯೯೬೪೩೫೧೬೫೫

# ಪ್ರಧಾನ ಸಂಪಾದಕರ ನುಡಿ

ಕರ್ನಾಟಕ ನಾಟಕ ಅಕಾಡೆಮಿಯ ನಮ್ಮ ಅವಧಿ ಎರಡು ವರ್ಷ ಕಳೆದಿದೆ. ಮೊದಲ ವರ್ಷ ಜಿಲ್ಲೆಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಿಗಳಿಗೆ ಹೊಸ ನಾಟಕ ಬರೆಸುವ ಯೋಜನೆ, ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಮುಂಬಯಿಯಲ್ಲಿ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮ ನಡೆಸಿದೆವು.

ವಿಜಯಪುರದಲ್ಲಿ ೨೦೧೫ ಸೆ.೨೪ ರಿಂದ ೩೦ ರ ವರೆಗೆ ನಡೆದ ರಾಜ್ಯ ವೃತ್ತಿರಂಗ ಸಮ್ಮೇಳನದಲ್ಲಿ ಎಲ್ಲ ಕಂಪನಿಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಿಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆ ರಂಗ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ.ಆರ್.ಅರಿಷಿಣಗೋಡಿ ಅವರಿಗೆ ಇಳಕಲ್‌ನಲ್ಲಿ, ಎಲ್.ಬಿ.ಕೆ.ಆಲ್ದಾಳ ಅವರಿಗೆ ಕಲಬುರಗಿಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿ ಜಿಲ್ಲೆಯ ಶೇಷಗಿರಿಯಲ್ಲಿ ೨೧ ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕ ರಚನಾ ಶಿಬಿರ, ಶಿರಸಿಯಲ್ಲಿ ನಡೆದ ರಂಗವಿಮರ್ಶಾ ಕಮ್ಮಟ, ದೆಹಲಿಯಲ್ಲಿ ನಡೆದ ವೃತ್ತಿ ಕಂಪನಿ ನಾಟಕೋತ್ಸವ ಕೆಲವು ಮೈಲುಗಲ್ಲುಗಳು. ವಿಶೇಷ ಘಟಕ ಯೋಜನೆಯಡಿ ಬಹುತೇಕ ಜಿಲ್ಲೆಗಳಲ್ಲಿ ರಂಗಶಿಬಿರ, ನಾಟಕ ಪ್ರದರ್ಶನ ನಡೆದಿವೆ. ಫೆಲೋಶಿಪ್ ಯೋಜನೆ ಮುಂದುವರಿದಿದೆ. ಕರ್ನಾಟಕ ನಾಟಕ ಅಕಾಡೆಮಿಯ ಮುಖವಾಣಿ 'ಸಂವಾದ' ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ.

ಪುಸ್ತಕಗಳ ಪ್ರಕಟನೆ ನಾಟಕ ಅಕಾಡೆಮಿಯ ಮಹಾತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವ ಸದಸ್ಯರ ಸಭೆಯಲ್ಲಿ ಪ್ರಕಟನಾ ಸಮಿತಿ ರಚಿಸಿ ಕಾರ್ಯಪ್ರವೃತ್ತರಾಗಿದ್ದೆವು. ಪುಸ್ತಕಗಳ ಪ್ರಕಟನೆ ಮುಖಾಂತರ ಅಂದು ಕಂಡ ಕನಸು ಇಂದು ನನಸಾಗುತ್ತಿದೆ. ಹಿಂದಿನ ವರ್ಷ ಹಾಗೂ ಈ ವರ್ಷದ ಪ್ರಕಟನಾ ಸಮಿತಿ ಮತ್ತು ಈ ಕನಸು ಸಾಕಾರಗೊಳ್ಳಲು ಶ್ರಮಿಸಿದ ಸದಸ್ಯ ಗುಡಿಹಳ್ಳಿ ನಾಗರಾಜ ಹಾಗೂ ಪುಸ್ತಕ ಬರೆದುಕೊಟ್ಟ ಎಲ್ಲ ಲೇಖಕರಿಗೂ ಕೃತಜ್ಞತೆಗಳು.

ಎಲ್.ಬಿ.ಶೇಖ (ಮಾಸ್ತರ)
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

# ರಂಗಸಂಪನ್ನರು

**ಕ**ರ್ನಾಟಕ ನಾಟಕ ಅಕಾಡೆಮಿ ಪ್ರಕಟನೆಗೆ ಆದ್ಯತೆ ಇರುವ ಅಕಾಡೆಮಿಯಲ್ಲ, ಇದು ಪ್ರಯೋಗ ಪ್ರಧಾನವಾದುದು. ಆದರೂ ರಂಗಭೂಮಿ ಚಟುವಟಿಕೆ, ಅಧ್ಯಯನಕ್ಕೆ ಪೂರಕವಾಗಬಲ್ಲ ಆಕರಗಳು ಅಕಾಡೆಮಿಯಲ್ಲಿ ದೊರೆಯುವಂತಾಗಬೇಕು ಎಂದು ಈ ಹಿಂದೆ ತಕ್ಕಮಟ್ಟಿನ ಪ್ರಕಟನೆ ಕಾರ್ಯಗಳು ನಡೆದಿವೆ. ಮಧ್ಯೆ ಕ್ಷೀಣಿಸಿದ್ದ ಪ್ರಕಟನಾ ವಿಭಾಗವನ್ನು ಚುರುಕುಗೊಳಿಸಿ ಮತ್ತಷ್ಟು ಪುಸ್ತಕಗಳನ್ನು ಹೊರತರಬೇಕು ಎಂದು ಅಧ್ಯಕ್ಷರಾದ ಎಲ್.ಬಿ.ಶೇಖ ಮಾಸ್ತರ ಅವರ ಅಧ್ಯಕ್ಷತೆಯಲ್ಲಿ 23 ಜುಲೈ 2014 ರಂದು ನಡೆದ ಪ್ರಕಟನಾ ಸಮಿತಿ ಸಭೆಯಲ್ಲಿ ನಿರ್ಧರಿಸಲಾಯಿತು. ಸಮಿತಿ ಸದಸ್ಯರಾದ ಪಿ.ತಿಪ್ಪೇಸ್ವಾಮಿ, ವಿ.ಎನ್.ಅಕ್ಕಿ, ಗುಡಿಹಳ್ಳಿ ನಾಗರಾಜ ಹಾಗೂ ರಿಜಿಸ್ಟ್ರಾರ್ ಸಿದ್ದರಾಜು ಭಾಗವಹಿಸಿದ್ದರು.

ಪ್ರಕಟನೆಗೆ ಇದ್ದ ಬೇಡಿಕೆಗಳು ಹಲವಾರು. ಆದರೆ ಸೀಮಿತ ಅವಕಾಶದಲ್ಲಿ ತೀರಾ ಅಗತ್ಯವಾದ ಪುಸ್ತಕಗಳನ್ನು ಮಾತ್ರ ಪ್ರಕಟಿಸಲು ಸಾಧ್ಯವಿತ್ತು. ಕನ್ನಡ ರಂಗಭೂಮಿಗೆ ಅಸಾಧಾರಣ ಕೊಡುಗೆ ನೀಡಿದ ಪ್ರತಿಭಾವಂತರ ಕುರಿತ ಪುಸ್ತಕಗಳನ್ನು ಹೊರತರುವ 'ರಂಗಸಂಪನ್ನರು' ಮಾಲಿಕೆಯನ್ನು ಸಿಜಿಕೆಯವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಆರಂಭಿಸಿ ಕೆಲವು ಪುಸ್ತಕಗಳನ್ನು ಹೊರತರಲಾಗಿತ್ತು. ನಂತರದ ಅವಧಿಯಲ್ಲೂ ಕೆಲವು ಪುಸ್ತಕಗಳು ಹೊರಬಂದವು. ಆ ಮಾಲಿಕೆಯನ್ನು ಮುಂದುವರಿಸಲು ತೀರ್ಮಾನಿಸಿದೆವು.

ಬಿ.ವಿ.ರಾಜಾರಾಂ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಪ್ರತಿ ಜಿಲ್ಲೆಯ ರಂಗಮಾಹಿತಿ ಹೊರತರುವ ಯೋಜನೆ ರೂಪಿಸಿ ಸದಸ್ಯರಿಗೇ ಆ ಹೊಣೆ ವಹಿಸಲಾಗಿತ್ತು. 5–6 ಜಿಲ್ಲೆಗಳ ರಂಗಮಾಹಿತಿ ಬರಹವೂ ಪೂರ್ಣಗೊಂಡಿತ್ತು. ಆದರೆ ಪುಸ್ತಕಗಳು ಪ್ರಕಟನೆಯಾಗಲಿಲ್ಲ. ಉಳಿದಿರುವ ಇತರ ಜಿಲ್ಲೆಗಳನ್ನೂ ಸೇರಿಸಿಕೊಂಡು ಜಿಲ್ಲೆಗೊಂದು ರಂಗಮಾಹಿತಿ ಪುಸ್ತಕಗಳನ್ನು ಹೊರತರುವ ಯೋಜನೆ ಹಮ್ಮಿಕೊಂಡೆವು. ಆಯಾ ಜಿಲ್ಲೆಗಳ ರಂಗ ಚಟುವಟಿಕೆಯಲ್ಲಿ ಪಾಲ್ಗೊಂಡ ಲೇಖಕರಿಗೆ ಈ ಕೆಲಸವನ್ನು ಒಪ್ಪಿಸಿದೆವು. ಜಿಲ್ಲಾ ರಂಗಮಾಹಿತಿ ಕಲೆಹಾಕುವುದು ಗುರುತರ ಕೆಲಸ. ದಾಖಲೆಗಳು ಸರಿಯಾಗಿ ಲಭ್ಯವಿಲ್ಲದ ಕಾರಣ ಲೇಖಕರು ತಮ್ಮ ಶಕ್ತ್ಯಾನುಸಾರ ಸಂಗ್ರಹಿಸಿ ಬರೆದಿದ್ದಾರೆ. ಆದ್ದರಿಂದ ಇದನ್ನು ಯಾರೂ ಸಂಪೂರ್ಣ ಮಾಹಿತಿ ಎಂದು ಭಾವಿಸಬಾರದು. ಇದೊಂದು ಆರಂಭ. ಇದನ್ನು ಮುಂದುವರಿಸಲು ಸಂಘ ಸಂಸ್ಥೆ, ವಿಶ್ವವಿದ್ಯಾಲಯಗಳಿಗೆ ಅವಕಾಶವಿದೆ.

ರಂಗಸಂಪನ್ನರು ಮಾಲಿಕೆಗೆ ಪುಸ್ತಕ ಬರೆಯಲು ಕಲಾವಿದರ ಬಳಿ ಕುಳಿತಾಗಲೂ

ಲೇಖಕರಿಗೆ ಮಾಹಿತಿ ಹಾಗೂ ಚಿತ್ರಗಳ ಕೊರತೆ ಕಾಡಿದೆ. ಆದರೂ ತಾವು ಕಣ್ಣಾರೆ ಕಂಡಿದ್ದ ಕಲಾವಿದರ ಪ್ರತಿಭಾ ಸಂಪನ್ನತೆಯನ್ನು ಆಪ್ತವಾಗಿ ಚಿತ್ರಿಸಿಕೊಟ್ಟಿದ್ದಾರೆ.

2015ರಲ್ಲಿ ಪ್ರಕಟನಾ ಸಮಿತಿ ಬದಲಾದಾಗಲೂ ಈ ಮಾಲಿಕೆಗಳ ಪುಸ್ತಕಗಳನ್ನು ಸಂಪಾದಿಸುವ ಹೊಣೆಯನ್ನು ನನಗೇ ವಹಿಸಲಾಯಿತು. ಸದಸ್ಯರು ಇಟ್ಟ ವಿಶ್ವಾಸ ಹಾಗೂ ಅಧ್ಯಕ್ಷರಾದ ಶ್ರೀ ಶೇಖ್ ಮಾಸ್ತರ್ ಅವರು ಪುಸ್ತಕದ ಕೆಲಸ ಎಲ್ಲಿಗೆ ಬಂತು ಎಂದು ಸದಾ ನೆನಪಿಸುತ್ತ, ಈ ಪ್ರಕಟನೆಗಳ ಕುರಿತು ತಾಳಿದ ಆಸಕ್ತಿಯ ಫಲವಾಗಿ ಈ ಪುಸ್ತಕಗಳು ಇದೀಗ ಹೊರಬರುತ್ತಿವೆ.

**ಅಭಿಜಾತ ಕಲಾವಿದೆ ಪ್ರಮೀಳಾ ಗುಡೂರು**

ಕಲಾವಿದೆಯಾಗಲೆಂದೇ ಜನ್ಮ ತಾಳಿದರೇನೋ ಎನ್ನುವ ಅಭಿಜಾತ ಪ್ರತಿಭೆ ಪ್ರಮೀಳಾ ಗುಡೂರು ಅವರದು. ಪ್ರತಿಷ್ಠಿತ ನಾಟಕ ಕಂಪನಿಗಳಲ್ಲಿ ನಾಲ್ಕು ದಶಕಗಳ ಸೇವೆ, ತದನಂತರ ಗ್ರಾಮೀಣ ನಾಟಕಗಳಲ್ಲಿ ಎಲ್ಲ ಬಗೆಯ ಪಾತ್ರಗಳಲ್ಲಿ ನಟಿಸಿ ತಮ್ಮ ಬಹುಮುಖಿ ಪ್ರತಿಭೆಯನ್ನು ರಂಗಾಸಕ್ತರಲ್ಲಿ ಅಚ್ಚೊತ್ತಿದ್ದಾರೆ. ಪುರುಷರನ್ನು ಮೀರಿಸುವಂತೆ ಆ ಪಾತ್ರಗಳಲ್ಲಿ ಅವರು ನಟಿಸಿದ್ದಾರೆ.

ಈ ದೈತ್ಯ ಪ್ರತಿಭೆಯನ್ನು ಅಕ್ಷರಗಳಲ್ಲಿ ಹಿಡಿದಿಡುವ ಪ್ರಾಮಾಣಿಕ ಪ್ರಯತ್ನವನ್ನು ರಂಗಲೇಖಕ ಮುರ್ತುಜಾ ಒಂಟಿ ಇಲ್ಲಿ ಮಾಡಿದ್ದಾರೆ. ಕಲಾವಿದರನ್ನು ತಯಾರಿಸುವ ಕಾರ್ಖಾನೆ, ಉತ್ತರ ಕರ್ನಾಟಕದ ಗುಬ್ಬಿ ಕಂಪನಿ ಎಂದೆಲ್ಲಾ ಖ್ಯಾತಿ ಪಡೆದ ಗೋಕಾಕ ಶ್ರೀ ಶಾರದಾ ಸಂಗೀತ ನಾಟಕ ಮಂಡಳಿ ಕುರಿತು ಮಹಾಪ್ರಬಂಧ ರಚಿಸಿರುವ ಮುರ್ತುಜಾ ಅವರು, ಪ್ರಮೀಳಾ ಅವರಿಗೆ ದೊರೆತ ಪ್ರತಿಯೊಂದು ಪುರಸ್ಕಾರ, ಪ್ರಶಸ್ತಿಗಳನ್ನು ವಿಶದೀಕರಿಸಿರುವ ಕ್ರಮ ಅನನ್ಯವಾಗಿದೆ.

**–ಗುಡಿಹಳ್ಳಿ ನಾಗರಾಜ**

ಪ್ರಕಟಣಾ ಸಮಿತಿ ಸದಸ್ಯರು :

**ಕೆ. ಜಗುಚಂದ್ರ**

**ಉಮೇಶ್ ಸಾಲಿಯಾನ್**

**ಹಾಲ್ಕುರಿಕೆ ಶಿವಶಂಕರ್**

# ಕರ್ನಾಟಕ ನಾಟಕ ಅಕಾಡೆಮಿ


ಎಲ್.ಬಿ.ಶೇಖ (ಮಾಸ್ತರ)
ಅಧ್ಯಕ್ಷರು

ಸದಸ್ಯರು

| | |
|---|---|
| ರಾಜಪ್ಪ ಕಿರಗಸೂರು | ಉಮೇಶ ಸಾಲಿಯಾನ್ |
| ಕಲ್ಪನಾ ನಾಗನಾಥ್ | ವಿ.ಎನ್.ಅಕ್ಕಿ |
| ಪಿ.ತಿಪ್ಪೇಸ್ವಾಮಿ | ಬಿ.ಎಂ.ರಾಮಚಂದ್ರ |
| ಎಂ.ಎಸ್.ಗುಣಶೀಲನ್ | ಎನ್.ಕೆ.ರಾಮಕೃಷ್ಣ |
| ಮುದ್ದಣ್ಣ ರಟ್ಟಿಹಳ್ಳಿ | ಎ.ವರಲಕ್ಷ್ಮಿ |
| ಅನ್ನಪೂರ್ಣ ಸಾಗರ | ಎಸ್.ಕೆ.ಕೊನೆಸಾಗರ |
| ಗುಡಿಹಳ್ಳಿ ನಾಗರಾಜ | ಹಾಲ್ಕುರಿಕೆ ಶಿವಶಂಕರ್ |
| ಎಚ್.ಷಡಾಕ್ಷರಪ್ಪ ಹೊಸಮನಿ | ಎಲ್.ಎಚ್.ರಂಗನಾಥಪ್ಪ |
| ಶ್ರೀಪಾದ ಭಟ್ | ಕೆ.ಜಗುಚಂದ್ರ |

ರಿಜಿಸ್ಟ್ರಾರ್:
ಸಿದ್ದರಾಜು

ಪ್ರಥಮದರ್ಜೆ ಸಹಾಯಕರು:
ಕೆ.ರೇವಣ್ಣ

ಕಚೇರಿ ಸಿಬ್ಬಂದಿ:
ಸೌಭಾಗ್ಯಲಕ್ಷ್ಮೀ, ಎಂ.ಭೋಜಣ್ಣ, ಸುಶೀಲಮ್ಮ

# ಅಂತರಾಳದ ನುಡಿ

**ಕ**ರ್ನಾಟಕ ರಂಗಭೂಮಿಯ ಚರಿತ್ರೆಯಲ್ಲಿ ಆರುವರೆ ದಶಕಗಳ ಕಾಲ 'ಆಲ್‌ರೌಂಡರ್ ಕಲಾವಿದೆ'ಯಾಗಿ 'ರಂಗ ಸಾಮ್ರಾಜ್ಞಿಯಾಗಿ ವೈಭವದಿಂದ ಮೆರೆದವರು ಗುಡೂರು ಪ್ರಮೀಳಮ್ಮ. ಕೇವಲ ರಂಗಭೂಮಿಯಲ್ಲಿ ಮಾತ್ರವಲ್ಲದೆ, ಚಲನಚಿತ್ರ, ಕಿರುತೆರೆಗಳಲ್ಲಿಯೂ ತಮ್ಮ ಮನೋಜ್ಞ ಅಭಿನಯದಿಂದಾಗಿ ಹೆಸರಾದವರು. ವೈವಿಧ್ಯಮಯ, ಹೃದಯಸ್ಪರ್ಶಿ ನಟನೆಯ ಮೂಲಕ 'ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ'ಯನ್ನು, ಪ್ರತಿಷ್ಠಿತ 'ಡಾ॥ ಗುಬ್ಬಿ ವೀರಣ್ಣ ಪ್ರಶಸ್ತಿ'ಯನ್ನು ಪಡೆದ ಹಿರಿಮೆ ಅವರದು. ಈ ಮಹಾನ್ ಕಲಾವಿದೆಯ ಮಹೋನ್ನತ ಸಾಧನೆ, ಕೊಡುಗೆಗಳನ್ನು ಗಮನಿಸಿ ಕರ್ನಾಟಕ ನಾಟಕ ಅಕಾಡೆಮಿಯು 'ರಂಗಸಂಪನ್ನರು' ಪುಸ್ತಕ ಮಾಲಿಕೆಯಲ್ಲಿ ಅವರ ರಂಗಸಾಧನೆ, ಕೊಡುಗೆಗಳನ್ನು ಸ್ಥೂಲವಾಗಿ ಪರಿಚಯಿಸಿಕೊಡುವ ಪುಸ್ತಕವೊಂದನ್ನು ಪ್ರಕಟಿಸುವ ಕಾರ್ಯಕ್ಕೆ ಮುಂದಾಗಿರುವುದು ಸ್ತುತ್ಯಾರ್ಹ. ಅದಕ್ಕಾಗಿ ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಎಲ್. ಬಿ. ಶೇಖ್ ಮಾಸ್ತರ ಅವರಿಗೂ ರಿಜಿಸ್ಟ್ರಾರ್ ಶ್ರೀ ಸಿದ್ದರಾಜು ಅವರಿಗೂ ನಾಟಕ ಅಕಾಡೆಮಿಯ ಸರ್ವಸದಸ್ಯರಿಗೂ ವಿಶೇಷವಾಗಿ ಎಸ್.ಕೆ. ಕೊನೆಸಾಗರ ಅವರಿಗೂ ಕೃತಜ್ಞತೆಗಳು.

ಪುಸ್ತಕ ಪ್ರಕಟಣಾ ಸಮಿತಿಯ ಸದಸ್ಯರಾದ ಶ್ರೀ ಗುಡಿಹಳ್ಳಿ ನಾಗರಾಜ, ಚಳಕೆರೆಯ ಶ್ರೀ ತಿಪ್ಪೇಸ್ವಾಮಿ, ಹಾಗೂ ಶ್ರೀ ವ್ಹಿ.ಎನ್. ಅಕ್ಕಿ ಇವರೆಲ್ಲರಿಗೂ ಧನ್ಯವಾದಗಳನ್ನು ಹೇಳುವೆ.

ನನಗೆ ನಾಟಕ ಅಕಾಡೆಮಿಯು ಪ್ರಮೀಳಮ್ಮನವರ ಬಣ್ಣದ ಬದುಕಿನ ಬಗ್ಗೆ ವಿಷಯ ಸಂಗ್ರಹಿಸಿ, ಪುಸ್ತಕವೊಂದನ್ನು ರಚಿಸಿ ಕಳಿಸಿಕೊಡಿ ಎಂದು ಕೇಳಿಕೊಂಡಾಗ, ನಾನು ಪ್ರಮೀಳಮ್ಮನವರನ್ನು ಏಳೆಂಟು ಸಾರಿ ಭೇಟಿಯಾಗಿ ಮಾಹಿತಿ ಕಲೆಹಾಕಿದೆ. ಆ ಸಂದರ್ಭದಲ್ಲಿ ಪ್ರಮೀಳಮ್ಮ, ಅವರ ಮಗಳು ಅಮೀನಾ, ಅಳಿಯ ಮಹಮ್ಮದ ಅಲ್ಲದೆ ಮೊಮ್ಮಕ್ಕಳು ಮೊದಲಾದವರು ತೋರಿಸಿದ ಪ್ರೀತಿ, ಗೌರವ, ನೀಡಿದ ಆತಿಥ್ಯ ಮರೆಯುವಂತಿಲ್ಲ. ಅದಕ್ಕಾಗಿ ನಾನು ಅವರಿಗೂ ಆಭಾರಿಯಾಗಿದ್ದೇನೆ.

ಪ್ರಮೀಳಮ್ಮನವರ ಅಭಿನಯ ಪ್ರತಿಭೆಗೆ ಮನಸೋತು, ಅವರ ಬಗೆಗೆ ಗೌರವಾಭಿಮಾನವಿಟ್ಟುಕೊಂಡು ಕೆಲವು ಮಾಹಿತಿ ನೀಡಿದ ಹುನಗುಂದ ತಾಲ್ಲೂಕು

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಹಿರಿಯ ಸ್ನೇಹಿತ ಶ್ರೀ ಮಹಾಂತೇಶ ಗಜೇಂದ್ರಗಡ ಅವರಿಗೂ ಈ ಸಂದರ್ಭದಲ್ಲಿ ವಂದನೆಗಳನ್ನು ಸಲ್ಲಿಸುವೆ.

ಕಲಾವಿದೆ ಪ್ರಮೀಳಮ್ಮನವರ ಬಣ್ಣದ ಬದುಕಿನ ಪರಿಚಯವನ್ನು ನಾನು ಆರು ದೃಶ್ಯಗಳಲ್ಲಿ ಅಡಕಗೊಳಿಸಿರುವೆ. ನಾಟಕ–ರಂಗಭೂಮಿಯ ಪರಿಭಾಷೆಯಲ್ಲಿ ಮೊದಲ ದೃಶ್ಯವನ್ನು ನಾಂದಿ (ಪೀಠಿಕೆ) ಎಂದು, ಎರಡು, ಮೂರು, ನಾಲ್ಕು ಹಾಗೂ ಐದನೆಯ ಅಧ್ಯಾಯಗಳನ್ನು ದೃಶ್ಯ ಎಂದು, ಕೊನೆಯದಾದ ಆರನೆಯ ದೃಶ್ಯವನ್ನು ಮಂಗಳ (ಸಮಾರೋಪ) ಎಂದೂ ಕರೆಯಲಾಗಿದೆ.

ಈ ಪುಸ್ತಕವನ್ನು ಅಕ್ಷರ ದೋಷವಿಲ್ಲದೆ ಅಂದವಾಗಿ ಮುದ್ರಿಸಿದ ರೀಗಲ್ ಪ್ರಿಂಟ್ ಸರ್ವೀಸ್ ಅವರಿಗೂ ನನ್ನ ಅನಂತಾನಂತ ನಮನಗಳು.

**– ಡಾ. ಮುರ್ತುಜಾ ಬ. ಒಂಟಿ**

## ಪ್ರಮೀಳಮ್ಮನವರ ಬಣ್ಣದ ಬದುಕು

## ರಂಗಪರದೆ ಸರಿದಾಗ


| | | ಪುಟಸಂಖ್ಯೆ |
|---|---|---|
| | ಅಂತರಾಳದ ನುಡಿ | ೭–೮ |
| ದೃಶ್ಯ – ೧ | ನಾಂದಿ (ಪೀಠಿಕೆ) | ೧೧–೧೮ |
| ದೃಶ್ಯ –೨ | ಪ್ರಮೀಳಮ್ಮನವರ ಜೀವನ | ೧೯–೨೮ |
| ದೃಶ್ಯ – ೩ | ಪ್ರಮೀಳಮ್ಮನವರ ಬಣ್ಣದ ಬದುಕು | ೨೯–೩೪ |
| ದೃಶ್ಯ – ೪ | ಪ್ರಶಸ್ತಿ–ಸನ್ಮಾನ–ಪ್ರಶಂಸೆ | ೩೫–೭೮ |
| ದೃಶ್ಯ – ೫ | ಪ್ರಮೀಳಮ್ಮನವರ ವ್ಯಕ್ತಿತ್ವ | ೭೯–೮೨ |
| ದೃಶ್ಯ – ೬ | ಮಂಗಳ (ಸಮಾರೋಪ) | ೮೩–೮೫ |

**ಅನುಬಂದ ೧** – ಪ್ರಮೀಳಮ್ಮ ಗುಡೂರು ಅವರ ಜೀವನದ ಕಾಲಘಟ್ಟಗಳು ೮೬–೮೭

**ಅನುಬಂಧ ೨** – ಪ್ರಮೀಳಮ್ಮನವರ ಭಾವಚಿತ್ರಗಳು. ೮೯–೯೬

# ದೃಶ್ಯ – ೧
# ನಾಂದಿ (ಪೀಠಿಕೆ)

ಸೌಂದರ್ಯಪ್ರಿಯನೂ ಕಲಾಪ್ರೇಮಿಯೂ ಆದ ಮಾನವನು ತನ್ನ ಸಂತೋಷಕ್ಕಾಗಿ ಹಲವಾರು ಕಲೆಗಳನ್ನು ಸೃಷ್ಟಿಸಿಕೊಂಡಿದ್ದಾನೆ. ಅವನಿಂದ ಹುಟ್ಟಿಕೊಂಡ ಅರವತ್ನಾಲ್ಕು ಕಲೆಗಳಲ್ಲಿ 'ನಾಟಕ'ವೂ ಒಂದು. ಸಾಹಿತ್ಯದ ಪ್ರಕಾರಗಳಲ್ಲಿ ಒಂದಾದ ನಾಟಕವು ಇತರ ಸಾಹಿತ್ಯ ರೂಪಗಳಿಗಿಂತ ಭಿನ್ನವೂ ಜನಪ್ರಿಯವೂ ಆದುದು. ನಾಟಕ ಅತ್ಯಂತ ಪ್ರಭಾವಶಾಲಿಯಾದ, ಪರಿಣಾಮಕಾರಿಯಾದ ಸಂಕೀರ್ಣ ಕಲೆ ಎನಿಸಿದೆ. ನಟನೆ, ಸಂಭಾಷಣೆ, ಸಂಗೀತ, ನೃತ್ಯ, ಸಾಹಿತ್ಯ, ಹಾಸ್ಯ, ದೃಶ್ಯ ಮೊದಲಾದವನ್ನೊಳಗೊಂಡು ನಾಟಕಾಭಿಮಾನಿಗಳನ್ನು, ಸಂಗೀತಪ್ರಿಯರನ್ನು, ನೃತ್ಯಾಸಕ್ತರನ್ನು ಸಾಹಿತ್ಯ ಪ್ರೇಮಿಗಳನ್ನು ಹಾಗೂ ಇತರೆ ಮನೋಭಾವದ ಕಲಾರಸಿಕರನ್ನು ತಣಿಸುವ ವಿಶಿಷ್ಟ ಶಕ್ತಿಯುಳ್ಳದ್ದು. ಕಲಾಪ್ರೇಮಿಗಳನ್ನು ಏಕಕಾಲದಲ್ಲಿಯೇ ಸಂತೋಷಗೊಳಿಸುವ ಸಾಮರ್ಥ್ಯವನ್ನು ನಾಟಕ ಹೊಂದಿದೆ. ಅಂತೆಯೇ ಮಹಾಕವಿ ಕಾಳಿದಾಸನು "ನಾಟ್ಯಂ ಭಿನ್ನರುಚೇರ್ಜನಸ್ಯ ಬಹುಧ್ಯಾಪೇಕಂ ಸಮಾರಾಧನಂ" ಎಂದು ಹೇಳಿದ್ದಾನೆ. ಹೀಗೆ ಭಿನ್ನ ಭಿನ್ನ ಆಸಕ್ತಿಗಳನ್ನು ಹೊಂದಿದ ಜನತೆಯನ್ನು ಆಹ್ಲಾದಗೊಳಿಸುತ್ತದೆ ಎಂಬ ಕಾರಣಕ್ಕಾಗಿ ನಾಟಕ ಇತರ ಸಾಹಿತ್ಯ ರೂಪಗಳಿಗಿಂತ, ಕಲಾಪ್ರಕಾರಗಳಿಗಿಂತ ಹೆಚ್ಚು ಜನಪ್ರಿಯವಾಗಿದೆ. ಅದಕ್ಕಾಗಿ ಕಾಳಿದಾಸನು ತನ್ನ "ಮಾಲವಿಕಾಗ್ನಿಮಿತ್ರ ನಾಟಕದಲ್ಲಿ" ಕಾವ್ಯೇಷು ನಾಟಕಂ ರಮ್ಯಂ" ಎಂದು ಹೇಳಿರುವುದು.

ಜೀವಂತ ಕಲೆಯಾದ ನಾಟಕವನ್ನು ಪ್ರದರ್ಶಿಸುವ ರಂಗಭೂಮಿಗೆ ಜಾಗತಿಕ ಪರಂಪರೆಯುಂಟು. ರಂಗಭೂಮಿ ಕೂಡ ಹಲವು ಲಲಿತಕಲೆಗಳ ಸಂಗಮ ಕ್ಷೇತ್ರ, ನಾಟಕ, ರಂಗಭೂಮಿಯ ಜೀವಾಳ. ನಾಟಕ ಹಾಗೂ ರಂಗಭೂಮಿ ಇವೆರಡು ಒಂದಕ್ಕೊಂದು ಅನ್ಯೋನ್ಯ ಸಂಬಂಧ ಹೊಂದಿದವುಗಳು. ಜಾಗತಿಕ ಪರಂಪರೆಯುಳ್ಳ ಇವು ಅತ್ಯಂತ ಪ್ರಾಚೀನವಾದವುಗಳು.

ಸಮಾಜದ ಪ್ರತಿಬಿಂಬವಾದ ನಾಟಕ, ಅದನ್ನು ಪ್ರಯೋಗಕ್ಕೊಳಪಡಿಸುವ ರಂಗಭೂಮಿ ಇವೆರಡೂ ವ್ಯಕ್ತಿ, ಸಮಾಜ ವ್ಯವಸ್ಥೆಯನ್ನು ಸುಧಾರಿಸುವಲ್ಲಿ ಪ್ರಮುಖ ಪಾತ್ರವನ್ನಾಡುತ್ತವೆ. ವ್ಯಕ್ತಿತ್ವ ವಿಕಸನದೊಂದಿಗೆ ಸಮಾಜದ ಪರಿವರ್ತನೆ, ಪ್ರಗತಿಗೆ ಇವು

ಕಾರಣವಾಗಿವೆ. ಕಲೆ, ಸಾಹಿತ್ಯ, ಸಂಸ್ಕೃತಿ, ಸಮಾಜದಲ್ಲಿ ಇವುಗಳ ಸ್ಥಾನಮಾನ, ಮಹತ್ವ ಏನೆಂಬುದನ್ನು ಕುರಿತು ವಿದ್ವಾಂಸರು ಗುರುತಿಸಿದ್ದಾರೆ. ಪಾಶ್ಚಾತ್ಯ ವಿದ್ವಾಂಸನಾದ ಸಿಸಿರೋ "Drama is a copy of life, a mirror of custom, a reflection of truth" ಎಂದಿದ್ದಾನೆ.

ರಂಗಭೂಮಿ ತಜ್ಞ, ವಿಮರ್ಶಕನಾದ ಅಲಾರ್ಡಿಸ್ ನಿಕಲ್‌ನು "ಸಾಹಿತ್ಯದ ಪ್ರಕಾರಗಳಲ್ಲಿ ನಾಟಕ ಅತ್ಯಂತ ವಿಚಿತ್ರವೂ ಗಹನವೂ ಆದುದು. ನಾಟಕದಲ್ಲಿ ಸಾಮೂಹಿಕ ರಂಜನಾ ಸಾಮರ್ಥ್ಯವಿದೆ. ಒಂದು ನಾಡಿನ ಬಾಹ್ಯಜೀವನ ಹಾಗೂ ಅಂತಃಸತ್ವದ ಚಿತ್ರವಿದೆ. ಸಮಾಜ ಧರ್ಮದ ವಿವೇಚನೆ ಇದೆ. ಸಮಾಜದಲ್ಲಿನ ವಿಷಮತೆಗಳನ್ನು ನಿವಾರಿಸುವ ಮಾರ್ಗದ ನಿರೂಪಣೆ ಇದೆ. ಹಾಸ್ಯ-ವ್ಯಂಗ್ಯಗಳ ಆಳದಲ್ಲಿ, ಅದು ನೋಟಕನನ್ನು ಮುಳುಗಿಸುವಂತೆ, ಕಾವ್ಯಾನುಭವದಿಂದ ಶಿಖರಕ್ಕೆ ಹತ್ತಿಸಲೂ ಶಕ್ತವಾಗಿದೆ. ಅದರಿಂದ ಮಾನವನ ಬೌದ್ಧಿಕ ಸೃಷ್ಟಿಯಲ್ಲಿ ನಾಟಕ ಅತ್ಯಂತ ಸ್ವಾರಸ್ಯವಾದುದು" ಎಂದು ತನ್ನ 'ದಿ ಥಿಯರಿ ಆಫ್ ಡ್ರಾಮಾ' ಪುಸ್ತಕದಲ್ಲಿ ಹೇಳಿದ್ದಾನೆ.

"ಒಂದು ಪುಸ್ತಕ ಮಾಡುವುದಕ್ಕಿಂತ ನೂರುಪಾಲು ಹೆಚ್ಚಿನ ಸಾಧನೆಯನ್ನು ನಾಟಕ ಮಾಡಬಲ್ಲದಾಗಿದೆ. ವಿದ್ಯಾವಂತನಿಗೆ ಬದುಕಿನ ರಹಸ್ಯವನ್ನು, ಸಾಮಾನ್ಯನಿಗೆ ಜೀವನತತ್ವವನ್ನು, ಕಲಾವಿದನಿಗೆ ಕಲ್ಪನಾ ಸೃಷ್ಟಿಯ ವೈಭವವನ್ನು ತಾಮಸಿಗೆ ಭಾಷೆಯ ಬೆಳಕು ಬೆಡಗುಗಳನ್ನು, ಅರಸಿಕನಿಗೆ ಬಾಳಿನ ವಿನೋದವನ್ನು ಅದು ವಾಡಿಸುತ್ತದೆ" ಎಂದು ಹೇಳಿದ ಹೆನ್ರಿ ಅರ್ವಿಂಗ್‌ನ ಮಾತು ಇಲ್ಲಿ ತುಂಬಾ ಗಮನಾರ್ಹವಾದುದು.

ವಾಲ್ಟರ್ ಸ್ಕಾಟ್ ಹೇಳುವಂತೆ "ರಂಗಭೂಮಿಯು ಒಂದು ಸಮಾಜದ ನಡೆಯಾಗಿದ್ದು, ಕಲೆ ಹಾಗೂ ಸಾಹಿತ್ಯದ ನಡೆಯೊಂದಿಗೇ ಹೆಜ್ಜೆ ಹಾಕುತ್ತದೆ. ಅನೇಕ ವೇಳೆ ಅದು ಸಮಾಜವನ್ನು ಸರಿಯಾದ ದಾರಿಯಲ್ಲಿ ನಡೆಸುವ ಕೈದೀವಿಗೆಯೂ ಆಗಿದೆ. ಒಂದು ಕಾಲಖಂಡದ ಜನಜೀವನ ಹಾಗೂ ಕಲಾಭಿರುಚಿಯ ಕೈಗನ್ನಡಿ ಅದು. ಇಂದಿನ ಅಭಿರುಚಿಯನ್ನು ಮುಂದಿನವರಿಗೆ ಪರಿಚಯಮಾಡಿಕೊಡುವ ಸಾಧನ."

ಜನಪ್ರಿಯ ರಂಗಚಿಂತಕ ಹೆನ್ರಿ ಅರ್ಥರ್ ಜೋನ್ಸ್‌ನು "ರಂಗಭೂಮಿಯಷ್ಟು ಪ್ರಭಾವಶಾಲಿಯಾಗಿ ಜೀವನಸತ್ಯವನ್ನು ಯಾವ ಪುಸ್ತಕವೂ ಯಾವ ಬೇರೊಂದು ಕಲೆಯೂ ಯಾವ ಭಾಷಣವೂ ಯಾವ ವಿದ್ಯಾ ವಿಧಾನವೂ ತಿಳಿಸಿಕೊಡಲಾರದು. ಸಾಮಾಜಿಕ ಸದ್ಭಾವನೆಗಳನ್ನು ಪ್ರಚೋದಿಸಿ, ಜನಜೀವನವನ್ನು ಸುಸಂಸ್ಕೃತಗೊಳಿಸುವಲ್ಲಿ ರಂಗಭೂಮಿಗೆ ಇರುವ ಶಕ್ತಿ ತತ್ತ್ವಗಳು ಮತ್ತಾವ ಸಾಹಿತ್ಯ ಕಲೆಗಳಿಗೂ ಮೈಗೂಡಿ ಬರಲಿಲ್ಲ" ಎಂದು ರಂಗಭೂಮಿಯ ಪ್ರಾಮುಖ್ಯತೆಯನ್ನು ಎತ್ತಿ ಹೇಳಿದ್ದಾರೆ.

ರಂಗವಿದ್ವಾಂಸರ ಈ ಎಲ್ಲ ಅಭಿಪ್ರಾಯಗಳನ್ನು ಗಮನಿಸಿದಾಗ ನಾಟಕ-ರಂಗಭೂಮಿಗಳು ವ್ಯಕ್ತಿಯ ಮಹೋನ್ನತ ವ್ಯಕ್ತಿತ್ವವನ್ನು ರೂಪಿಸುವಲ್ಲಿ, ಸುಂದರ ಹಾಗೂ ಆದರ್ಶ ಸಮಾಜ ನಿರ್ಮಾಣದಲ್ಲಿ ಮಹತ್ವದ ಪಾತ್ರವನ್ನಾಡುತ್ತವೆ ಎಂಬ ಸಂಗತಿ ತಿಳಿದುಬರುತ್ತದೆ.

ಭಾರತೀಯ ನಾಟಕ, ರಂಗಭೂಮಿಗೆ ಕರ್ನಾಟಕದ ಕೊಡುಗೆಯೂ ಅಪಾರ. ಸಂಸ್ಕೃತ ನಾಟಕದಷ್ಟು ಪ್ರಾಚೀನತೆ, ಸಮೃದ್ಧತೆ ಕನ್ನಡಕ್ಕಿಲ್ಲ. ಹೀಗೆಂದಾಕ್ಷಣ ಕನ್ನಡದಲ್ಲಿ ನಾಟಕಗಳು ಇರಲಿಲ್ಲವೆಂದಲ್ಲ. ಅವು ಸಾಹಿತ್ಯದ ಗದ್ದುಗೆಯನ್ನು ತಡವಾಗಿ ಏರಿದವು. ಮೈಸೂರಿನ ಅರಸ ಚಿಕ್ಕದೇವರಾಜರ [೧೬೭೩-೧೭೦೪] ಆಸ್ಥಾನಕವಿಯಾಗಿದ್ದ ಸಿಂಗಾರಾರ್ಯ ರಚಿಸಿದ 'ಮಿತ್ರವಿಂದಾ ಗೋವಿಂದ' ಎಂಬ ಕೃತಿಯೇ ಕನ್ನಡದ ಮೊಟ್ಟಮೊದಲ ನಾಟಕ ಎನ್ನುವ ಅಭಿಧಾನವನ್ನು ಈವರೆಗೆ ಹೊಂದಿದೆ. ಇದು ಶ್ರೀಹರ್ಷನ 'ರತ್ನಾವಳಿ' ಎನ್ನುವ ಸಂಸ್ಕೃತ ನಾಟಕದ ಕನ್ನಡ ರೂಪ. ಶಾಂತಕವಿ [ಸಕ್ಕರಿ ಬಾಳಚಾರ್ಯ]ಗಳು ಕ್ರಿ.ಶ. ೧೮೭೭ರಲ್ಲಿ ಗದಗಿನಲ್ಲಿ ಸ್ಥಾಪಿಸಿದ 'ಶ್ರೀ ವೀರ ನಾರಾಯಣ ಪ್ರಾಸಾದಿಕ ಕೃತಪುರ' ಎಂಬ ಹೆಸರಿನ ನಾಟಕ ಮಂಡಳಿಯನ್ನು ಸ್ಥಾಪಿಸಿದರು. ಇದುವೇ ಉತ್ತರ ಕರ್ನಾಟಕದ ಪ್ರಪ್ರಥಮ ವೃತ್ತಿನಾಟಕ ಕಂಪನಿ ಎಂಬ ಹೆಸರಿಗೆ ಪಾತ್ರವಾಯಿತು. ಈ ಕಾರಣಕ್ಕಾಗಿ ಶಾಂತಕವಿಗಳನ್ನು 'ಕರ್ನಾಟಕ ನಾಟಕ ಪಿತಾಮಹ' ಎಂದು ಕರೆಯಲಾಗುತ್ತದೆ.

೧೭ನೆಯ ಶತಮಾನದ ಕೊನೆಯ ಭಾಗ [ಕ್ರಿ.ಶ.ಸು. ೧೬೮೦]ದಲ್ಲಿ ರಚಿತವಾದುದೆಂದು ಹೇಳಲಾಗುತ್ತಿರುವ 'ಮಿತ್ರವಿಂದಾ ಗೋವಿಂದ' ನಾಟಕ, ೧೯ನೆಯ ಶತಮಾನದ ಅಂತ್ಯ [ಕ್ರಿ.ಶ. ೧೮೭೭]ದಲ್ಲಿ ಸ್ಥಾಪನೆಗೊಂಡದ್ದು ಎನ್ನುವ "(ಶ್ರೀ ವೀರನಾರಾಯಣ ಪ್ರಸಾದಿಕ ಕೃತಪುರ ನಾಟಕ ಮಂಡಳಿ)" ಇವುಗಳು ಇತ್ತೀಚಿನವುಗಳು ಎಂಬ ಕಾರಣಕ್ಕಾಗಿ ಕನ್ನಡದಲ್ಲಿ ಇವಕ್ಕೂ ಮೊದಲು ನಾಟಕ, ರಂಭೂಮಿ ಇರಲಿಲ್ಲ ಎಂದು ಹೇಳಲಾಗದು. ಕನ್ನಡದ ಪ್ರಾಚೀನ ಶಾಸನಗಳಲ್ಲಿ, ಕವಿಗಳ ಕಾವ್ಯಗಳಲ್ಲಿ ಅಲ್ಲಲ್ಲಿ ಪ್ರಾಸಂಗಿಕವಾಗಿ ಉಲ್ಲೇಖಿವಾಗಿರುವ 'ನಾಟಕ', 'ನಾಟಕಶಾಲೆ' [ಪ್ರದರ್ಶನ ಮಂದಿರ- ರಂಗಭೂಮಿ] ಎಂಬ ಪದಗಳು ಇವುಗಳ ಪ್ರಾಚೀನತೆಯನ್ನು ಸಾರಿ ಹೇಳುತ್ತವೆ. ಬಹುಜನ ವಿದ್ವಾಂಸರ ಅಭಿಪ್ರಾಯದಂತೆ ಕನ್ನಡದ ನಾಟಕ, ರಂಗಭೂಮಿಗೆ ಸುಮಾರು ಒಂದು ಸಾವಿರ ವರ್ಷಗಳ ಚರಿತ್ರೆ ಇದೆಯೆಂದು ಹೇಳಲಾಗುತ್ತದೆ.

ಗೋವಿಂದ ವೈದ್ಯನ 'ಕಂಠೀರವ ನರಸರಾಜ ವಿಜಯ', ಭಟ್ಟಾಕಳಂಕನ 'ಶಬ್ದಾನುಶಾಸನ', ರತ್ನಾಕರವರ್ಣಿಯ 'ಭರತೇಶ ವೈಭವ', ಕುಮಾರವ್ಯಾಸನ 'ಕರ್ಣಾಟ ಭಾರತ ಕಥಾಮಂಜರಿ', ಭೀಮಕವಿಯ 'ಬಸವಪುರಾಣ' ನಾಗಚಂದ್ರನ

'ಮಲ್ಲಿನಾಥ ಪುರಾಣ', ದುರ್ಗಸಿಂಹನ 'ಪಂಚತಂತ್ರ', ಪೊನ್ನನ 'ಶಾಂತಿಪುರಾಣ', ರನ್ನನ 'ಅಜಿತ ತೀರ್ಥಂಕರ ಪುರಾಣ', ಆದಿಕವಿ ಪಂಪನ 'ಆದಿಪುರಾಣ' ಗ್ರಂಥಗಳಲ್ಲಿ 'ನಾಟಕ' ಎಂಬ ಶಬ್ಧವನ್ನು ಸಂದರ್ಭೋಚಿತವಾಗಿ ಬಳಸಲಾಗಿದೆ. ಅಲ್ಲದೆ. ಕನ್ನಡದ ಮೊಟ್ಟಮೊದಲ ಗ್ರಂಥವಾದ ಶ್ರೀ ವಿಜಯ ವಿರಚಿತ 'ಕವಿರಾಜ ಮಾರ್ಗ'ದ ಮೊದಲನೆಯ ಆಶ್ವಾಸದ ಆರನೆಯ ಪದ್ಯದಲ್ಲಿ ನಾಟಕದ ಕುರಿತು ಬಂದ ಉಲ್ಲೇಖ ಹೀಗಿದೆ.

> **"ವ್ಯಾಕರಣ ಕಾವ್ಯ ನಾಟಕ**
> **ಲೋಕ ಕಳಾಸಮಯಮಾದಳಂ ಕೃತಿಗಳೊಳಂ**
> **ವ್ಯಾಕುಳಸಲ್ಲದನೇಕ ವಿ**
> **ವೇಕ ಬೃಹಸ್ಪತಿಯ ನಗರಮಂ ಪುಗುತರ್ಪ್ಪಂ"**

ಈ ಸಂದರ್ಭದಲ್ಲಿ ಕನ್ನಡದ ಹೆಸರಂತ ವಿಮರ್ಶಕರಾದ ಕೀರ್ತಿನಾಥ ಕುರ್ತುಕೋಟಿ ಅವರ ಅಭಿಪ್ರಾಯ ಕೂಡ ಪ್ರಸ್ತುತವೆನಿಸುತ್ತದೆ. "Ancient literature did not have drama. Some of the major poets like Pampa, Ranna, Raghavanka are powerfully dramatic. But none of the attempted drama." "this fact is all the more puzzling when we examine it in the light of many references to dramatic performances in poetry".

ಮೇಲೆ ಪ್ರಸ್ತಾಪಿಸಿದ ಕನ್ನಡದ ಕಾವ್ಯಗಳಲ್ಲಿ ಬಂದಿರುವ 'ನಾಟಕ' ಎಂಬ ಪದವನ್ನು, ಕೀರ್ತಿನಾಥ ಕುರ್ತುಕೋಟಿಯವರು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಗಮನಿಸಿದಾಗ ಕನ್ನಡದ ಪ್ರಾಚೀನ ಕವಿಗಳು ತಮ್ಮ ಕಾವ್ಯಗಳಲ್ಲಿ ಬಳಸಿದ ಉತ್ತಮ ನಾಟಕೀಯ ಶೈಲಿ, ಸಂಭಾಷಣೆಯನ್ನು ನೋಡಿದಾಗ ನಾಟಕಗಳು ಕವಿರಾಜಮಾರ್ಗಕ್ಕಿಂತ ಪೂರ್ವದಲ್ಲಿ ರಚನೆಯಾಗಿದ್ದಿರಬಹುದೆಂದು ಊಹಿಸಬಹುದಾಗಿದೆ. ಆದರೆ ಅವು ಕಾಲಗರ್ಭದಲ್ಲಿ ಅಡಗಿ ಹೋಗಿರಬಹುದಾಗಿವೆ.

ನಾಟಕವನ್ನು ಪ್ರದರ್ಶಿಸುವ ರಂಗಭೂಮಿ ಕೂಡ ಪ್ರಾಚೀನವಾಗಿದ್ದಿತ್ತೆಂದು ಹೇಳಲು ಅನೇಕ ಉದಾಹರಣೆಗಳು ಇವೆ. ಈಗೀನ ರಂಗಭೂಮಿಯನ್ನು ಹಿಂದೆ 'ನಾಟಕಶಾಲೆ' ಎಂದು ಕರೆಯಲಾಗುತ್ತಿತ್ತು. ಮೈಸೂರಿನ ದೊರೆ ಕಂಠೀರವ ನರಸರಾಜರ (೧೬೩೮-೧೬೫೯) ಅರಮನೆಯಲ್ಲಿ ನಯನ ಮನೋಹರವಾದ 'ನಾಟಕಶಾಲೆ' ಇದ್ದ ವಿಷಯವನ್ನು ಆಸ್ಥಾನಕವಿ ಗೋವಿಂದ ವೈದ್ಯನು ತಿಳಿಸಿದ್ದಾನೆ. ಕೆಳದಿಯ ವೆಂಕಟಪ್ಪನಾಯಕನು (೧೫೮೧-೧೬೨೯) ತನ್ನ 'ಇಕ್ಕೇರಿಯರಮನೆಯೊಳ್ ಚಿತ್ರತರ ರಚನಾ ಕೌಶಲ್ಯದಿಂ ನಾಟಕ ಶಾಲೆಯಂ

ನಿರ್ಮಾಣಗೆಯ್ಸಿದನ್' ಎಂದು ಲಿಂಗಣ್ಣ ಕವಿಯು ತಾನು ರಚಿಸಿದ 'ಕೆಳದಿ ನೃಪವಿಜಯ'ದಲ್ಲಿ ಉಲ್ಲೇಖಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಸಾಂಗತ್ಯ ಸಾಹಿತ್ಯದ ಮೇರು ಕವಿ ರತ್ನಾಕರ ವರ್ಣಿಯ 'ಭರತೇಶ ವೈಭವ'ದ ಪೂರ್ವನಾಟಕ ಸಂಧಿ ಮತ್ತು ಉತ್ತರ ನಾಟಕ ಸಂಧಿಗಳಲ್ಲಿ ಅತ್ಯಾಕರ್ಷಕವಾದ ನಾಟಕಶಾಲೆಯ ವಿವರಣೆಯನ್ನು ಕೊಟ್ಟಿದ್ದಾನೆ. ಅಲ್ಲದೆ ಸಂಶೋಧಕರಾದ ಬಿ.ಎ. ಸಾಲತೊರೆಯವರು ತಮ್ಮ 'social and Political History of Vijayanagar' ಎಂಬ ಗ್ರಂಥದ ಎರಡನೆಯ ಭಾಗದಲ್ಲಿ ವಿಜಯನಗರದ ಕೃಷ್ಣದೇವರಾಯನ ಅರಮನೆಯಲ್ಲಿದ್ದ 'ಪಟ್ಟದ ನಾಟಕ ಶಾಲೆ'ಯನ್ನು, ಹಾಗೂ ಇಕ್ಕೇರಿ, ತಂಜಾವೂರಿನ ಸಾಮಂತರ ಅರಮನೆಗಳಲ್ಲಿ ಇದ್ದ ರತ್ನಖಚಿತ ನಾಟಕ ಶಾಲೆಗಳನ್ನು ಸಂಶೋಧನೆಯ ಮೂಲಕ ಉಲ್ಲೇಖಿಸಿದ್ದಾರೆ.

ಕ್ರಿ.ಶ.ಸು. ೧೦೪೫ರಲ್ಲಿ ನಿಲ್ಲಿಸಿದ ಧಾರವಾಡ ಪಕ್ಕದ ಮುಗದ ಗ್ರಾಮದ ಶಿಲಾಫಲಕವು "ಶ್ರೀ ಮನ್ಮಹಾಸಾಮನ್ತಂ ಮಾರ್ತಾಣ್ಡಯ್ಯಂ ತಮ್ಮ ಮುತ್ತಯಂ ಮಾಡಿಸಿದ ಬಸದಿಯಂ ಪಡಿಸಲಿಸಿ, ನಾಟಕ ಶಾಲೆಯಂ ಮಾಡಿಸಿ ತನ್ನ ಕೀರ್ತಿಶಿಲಾಸ್ತಂಭಮಂ ಆಚಂದ್ರಾರ್ಕತಾರಂಬರಂ ನಿಲಿಸಿದಂ" ಎಂದು ಹೇಳುತ್ತ ಆ ಕಾಲದಲ್ಲಿದ್ದ ನಾಟಕ ಶಾಲೆಯ ವಿಷಯವನ್ನು ಪ್ರತಿಪಾದಿಸುತ್ತದೆ.

ಹೀಗೆ ನಾಟಕಶಾಲೆಯ ಬಗೆಗೆ ಹಲವಾರು ಉಲ್ಲೇಖಗಳು ಸಿಕ್ಕರೂ ನಾಟಕಶಾಲೆಗಳ ರಚನೆ, ರೂಪರೇಷೆಗಳು ಹೇಗಿದ್ದವೆಂಬುದನ್ನು ಹೇಳುವದು ಕಷ್ಟ. ಜೊತೆಗೆ ಅವು ಎಂಥ ರಂಗಪ್ರದರ್ಶನಗಳ ಮೂಲಕ ಪ್ರೇಕ್ಷಕರನ್ನು ರಂಜಿಸಿದವು ಎಂದು ಹೇಳುವುದು ಸಾಧ್ಯವಿಲ್ಲ.

ಆದರೆ ಒಟ್ಟಾರೆಯಾಗಿ ಇಲ್ಲಿ ಪ್ರಸ್ತಾಪಿಸಿದ ಎಲ್ಲ ಸಾಹಿತ್ಯ ಕೃತಿಗಳಲ್ಲಿ, ಶಾಸನಗಳಲ್ಲಿ ವ್ಯಕ್ತಗೊಂಡಿರುವ ವಿಷಯದ ಆಧಾರದ ಮೇಲೆ ಕನ್ನಡ ನಾಟಕ, ರಂಗಭೂಮಿಗಳು ಒಂದು ಸಾವಿರ ವರ್ಷದ ಚರಿತ್ರೆಯನ್ನೊಳಗೊಂಡವು ಎಂದು ಹೇಳಬಹುದಾಗಿದೆ.

ಕರ್ನಾಟಕ ಸಂಸ್ಕೃತಿಯ ಅವಿಭಾಜ್ಯ ಸಂಪತ್ತಿನಲ್ಲಿರುವ ರಂಗಭೂಮಿಯು ಬಹಳಷ್ಟು ವೈವಿಧ್ಯಮಯವಾಗಿ ಬೆಳೆದುಬಂದಿದೆ. ಜನಪದ ರಂಗಭೂಮಿ, ವೃತ್ತಿರಂಗಭೂಮಿ ಹಾಗೂ ಹವ್ಯಾಸಿ (ವಿಲಾಸಿ)ರಂಗಭೂಮಿ ಎನ್ನುವ ಕವಲು ಮಾರ್ಗಗಳಲ್ಲಿ ಸಾಗಿ ಬಂದ ಬಗೆಯನ್ನು ಕಾಣುತ್ತೇವೆ. ಇವುಗಳಲ್ಲಿ ವೃತ್ತಿರಂಗಭೂಮಿಗೆ ವಿಶಿಷ್ಟ ಸ್ಥಾನ, ವಿಶೇಷ ಮನ್ನಣೆಯಿದೆ. ರಂಗಭೂಮಿ ಎಂದರೆ ವೃತ್ತಿರಂಗಭೂಮಿ ಎಂದೇ, ರಂಗಭೂಮಿಯ ಇತಿಹಾಸ ಎಂದರೆ ವೃತ್ತಿರಂಗಭೂಮಿ ಚರಿತ್ರೆ ಎಂದೇ ಅರ್ಥೈಸುವ ಮಟ್ಟಿಗೆ ಇದು ಬೆಳೆದಿದೆ. ಇಪ್ಪತ್ತನೆಯ ಶತಮಾನವನ್ನು ವೃತ್ತಿರಂಗಭೂಮಿಯ ಸುವರ್ಣಯುಗ ಎಂದು ಕರೆದರೆ ಉತ್ಪ್ರೇಕ್ಷೆಯಾಗಲಾರದು.

ಯಾಕೆಂದರೆ ಆ ಶತಮಾನದಲ್ಲಿ ಉತ್ತರ ಕರ್ನಾಟಕ ಹಾಗೂ ಮೈಸೂರು ಭಾಗಗಳಲ್ಲಿ ನೂರಾರು ಹೆಸರಾಂತ ವೃತ್ತಿಕಂಪನಿಗಳು ಹುಟ್ಟಿಕೊಂಡು ಜನಪ್ರಿಯ ವೃತ್ತಿ ನಾಟಕಕಾರರ ನಾಟಕಗಳನ್ನು ವೈವಿಧ್ಯತೆಗಳೊಂದಿಗೆ ವೈಭವಯುತವಾಗಿ ಅದ್ದೂರಿಯಾಗಿ ಪ್ರದರ್ಶಿಸುವ ಮೂಲಕ ರಂಗಭೂಮಿಯನ್ನು ಜೀವಂತ ಗೊಳಿಸಿದವು. ಬರೀ ನಾಟಕಕಂಪನಿಗಳು, ನಾಟಕಗಳು ರಂಗಭೂಮಿಯ ಜೀವಂತಿಕೆಗೆ ಕಾರಣವಲ್ಲ. ಪ್ರತಿಭಾವಂತ ನಟ-ನಟಿಯರು, ಸಮರ್ಥ ನಿರ್ದೇಶನ, ಸಂಗೀತ, ಸಾಹಿತ್ಯ, ನೃತ್ಯ ಮೊದಲಾದವುಗಳು ಕಾರಣ ಎನ್ನಬೇಕು. ಇವೆಲ್ಲವುಗಳಿಂದಾಗಿ ವೃತ್ತಿರಂಗಭೂಮಿಯು ಅತ್ಯಂತ ಶ್ರೀಮಂತವಾಗಿ ಘನತೆಯನ್ನು ಹೊಂದಿತು.

ರಂಗಭೂಮಿಯ ಸಂಪತ್ತು, ರಂಗಭೂಮಿಯ ಸಾಮ್ರಾಟರು ಎಂದರೆ ನಟರು. ತಮ್ಮ ಬುದ್ಧಿವಂತಿಕೆ, ಜಾಣ್ಮೆ, ಕೌಶಲ್ಯ, ಶಕ್ತಿ ಸಾಮರ್ಥ್ಯಗಳಿಂದ ಪಾತ್ರಗಳಿಗೆ ಜೀವತುಂಬಿ ಅಮೋಘವಾಗಿ ಅಭಿನಯಿಸುವ ನಟ-ನಟಿಯರು ನಿಜಕ್ಕೂ ರಂಗಭೂಮಿಯ ಸಂಪತ್ತು ಹೌದು, ರಂಗಸಾಮ್ರಾಟರು ಹೌದು. ಅವರು ತಮ್ಮಲ್ಲಿದ್ದ ವಿಶಿಷ್ಟವಾದ ಅಭಿನಯ ಕಲೆಯಿಂದಾಗಿ ಮನೋಜ್ಞವಾಗಿ ನಟಿಸುವ ಮೂಲಕ ನಾಟಕ, ಕಂಪನಿಗಳ ಹಿರಿಮೆ, ಶ್ರೇಯಸ್ಸಿಗೆ ಕಾರಣರಾದುದಲ್ಲದೆ ನಾಟಕ ಮಂಡಳಿಗಳ ಶ್ರೀಮಂತಿಕೆ, ಜನಪ್ರಿಯತೆ ಮೂಲಕಾರಣರಾಗುತ್ತಾರೆ. ಆ ಮೂಲಕ ತಮ್ಮ ಹೆಸರನ್ನು ನಾಟಕ- ರಂಗಭೂಮಿ ಕ್ಷೇತ್ರದಲ್ಲಿ ಚಿರಸ್ಥಾಯಿಯಾಗಿಸಿಕೊಳ್ಳುತ್ತಾರೆ.

ನಮ್ಮ ಕನ್ನಡ ನಾಟಕ ರಂಗಭೂಮಿಯ ಶ್ರೀಮಂತಿಕೆಗೆ ಮುನ್ನುಡಿ ಬರೆದ ಕೆಲವು ಪ್ರಮುಖ ನಟ-ನಟಿಯರನ್ನು ಇಲ್ಲಿ ಹೆಸರಿಸುವುದು ಸ್ತುತ್ಯಾರ್ಹವಾದುದೆನಿಸುತ್ತದೆ. ಗುಡಿ ರಾಘವೇಂದ್ರಾಚಾರ್ಯ, ಕೊಣ್ಣೂರು ಜೀವುಬಾಳಪ್ಪ, ಡಂಬಳ ಹುಚ್ಚಾಚಾರ್ಯ, ಕೆರೆಮನೆ ಸೀತಾರಾಮಶಾಸ್ತ್ರಿ, ಶಿರಹಟ್ಟಿ ವೆಂಕೋಬರಾಯ, ವಾಮನರಾವ ಮಾಸ್ತರ, ಹೊಂಬಳ ವಾಸುದೇವಾಚಾರ್ಯ, ಲಕ್ಷ್ಮಣರಾವ ಪುರಿ, ಶಿವಮೂರ್ತಿಸ್ವಾಮಿ ಕಣಬರ್ಗಿ, ಮುರುಗೋಡು ಗಂಗಾಧರಪ್ಪ, ಗರುಡ ಸದಾಶಿವರಾಯರು, ಮಲ್ಲಿಕಾರ್ಜುನ ಮನ್ಸೂರ, ಬಸವರಾಜ ಮನ್ಸೂರ, ತುಕಾರಾಂ ಹೊಸಮನಿ, ಬಸವರಾಜ ಹೊಸಮನಿ, ಹುಲಿಮನಿ ಸೀತಾರಾಮಶಾಸ್ತ್ರಿ, ಹಂದಿಗನೂರ ಸಿದ್ರಾಮಪ್ಪ, ಏಣಗಿ ಬಾಳಪ್ಪ, ಗುಬ್ಬಿ ವೀರಣ್ಣ, ಗುಬ್ಬಿ ಚನ್ನಬಸಪ್ಪ, ಎಂ.ವಿ. ಸುಬ್ಬಯ್ಯ ನಾಯ್ಡು, ಮುತ್ತುರಾಜು (ಡಾ॥ ರಾಜಕುಮಾರ), ಬಾಲಕೃಷ್ಣ, ನರಸಿಂಹರಾಜು, ಜಿ.ವಿ. ಅಯ್ಯರ್, ಹೊನ್ನಪ್ಪ ಭಗವತರ್, ಎ.ವಿ. ವರದಾಚಾರ್ಯ, ಕೃಷ್ಣಮೂರ್ತಿರಾಯ, ಆರ್. ನಾಗೇದ್ರರಾವ್, ಮಹಮ್ಮದ್ ಪೀರ್, ಟಿ. ರಾಘವ, ಜೋಳದರಾಶಿ ದೊಡ್ಡನಗೌಡ, ರಾಮಚಂದ್ರ ಶಾಸ್ತ್ರಿ, ಸಿ. ಆರ್. ಸಿಂಹ, ಬಿ. ಆರ್. ಪಂತಲು, ಮಧ್ವರಾಜ ಉಮರ್ಜಿ, ಬೆಳ್ಳೂರು ನಂಜುಂಡಯ್ಯ, ಕೆ. ಹಿರಣ್ಣಯ್ಯ, ಮಾಸ್ಟರ್ ಹಿರಣ್ಣಯ್ಯ,

ನಾಗೇಂದ್ರರಾಯ, ಗಂಗಾಧರರಾಯ, ಎಂ.ಡಿ. ಸುಬ್ಬಣ್ಣ, ಮುಸುರಿ ಕೃಷ್ಣಮೂರ್ತಿ, ಸಿ.ಬಿ. ಮಲ್ಲಪ್ಪ, ಮುನಿರಂಗಪ್ಪ, ಶ್ರೀ ಕಂಠಮೂರ್ತಿ, ಶೇಷಾಚಾರ್ಯ, ಪಾರ್ಥಸಾರಥಿ, ಬೆಳವಿ ರಾಚಯ್ಯ ಸ್ವಾಮಿ, ಮಲ್ಲಯ್ಯಸ್ವಾಮಿ ಹಣ್ಣಿಕೇರಿ, ರಾಮದುರ್ಗದ ಕೃಷ್ಣಪ್ಪ, ರಾಜಾರಾಮ ಕಿತ್ತೂರು, ಅದೃಶ್ಯಪ್ಪ ಮಾನವಿ, ದತ್ತಂಭಟ್ಟ ಒಡೆಯರು, ಡಿ. ದುರ್ಗಾದಾಸ, ಚನ್ನಬಸಯ್ಯ ನರೇಗಲ್ಲ, ಮಲ್ಲೇಶಪ್ಪ ಅಸುಂಡಿ, ನಾಕೋಡ ಸಹೋದರರು, ಎಂ. ಕೊಟ್ರೇಶ, ಗುಡಿಗೇರಿ ಬಸವರಾಜ, ಶ್ರೀ ಪಾದರಾವ ಗರುಡ, ಹಮ್ಮಿಗಿ ನೀಲಕಂಠಪ್ಪ, ನೀಲಕಂಠ ಬುವಾ ಗಾಡಗೋಳಿ, ಫಕೀರಯ್ಯ ವರವಿ, ಎಲಿವಾಳ ಸಿದ್ದಯ್ಯಸ್ವಾಮಿ, ಸುಧೀರ, ಧಿರೇಂದ್ರಗೋಪಾಲ್, ಹಳ್ಳಿಗುಡಿ ಸದಾಶಿವಪ್ಪ, ಬೆಟ್ಟದೂರ ಶಂಕ್ರಯ್ಯ, ಹಲಗೇರಿ ಜಟ್ಟೆಪ್ಪ ಸಹೋದರರು, ಎಂ. ಶಾಂತಕುಮಾರ, ಚಿಂದೋಡಿ ವೀರಪ್ಪ, ಮಂಕಣಿ ಮಾನಪ್ಪ, ಲಾಠಿ ಗುಂಡಪ್ಪ, ಅಮೀನಗಡ ಲಾಡಸಾಹೇಬ, ಚಿತ್ತರಗಿ ಗಂಗಾಧರ ಶಾಸ್ತ್ರಿ, ಮೃಡದೇವ ಗವಾಯಿ, ಬಿ. ಓಬಳೇಶ್ವರ, ಅಪ್ಪುರಾಜ ಮುಧೋಳ, ವೀರಣ್ಣ ಜಾಲಿಹಾಳ, ಮಂಗಳೂರ ಈರಣ್ಣ, ಕೃಷ್ಣಚಂದ್ರ ಬಳ್ಳಾರಿ, ಎಚ್. ಟಿ. ಅರಸು, ಗಂಗಾಧರ ರಟ್ಟಿಹಳ್ಳಿ, ಅಬ್ಬಾಸ ಅಲಿ ಅಳವಂಡಿ, ಕವಲಿ ಚನ್ನಬಸಪ್ಪ, ಡಂಬಳ ಶಾಂತಪ್ಪ, ಡಂಬಳ ಸಂಕಣ್ಣ, ಹನಗುಂದ ಬಾಬಣ್ಣ, ಮೊದಲಾದವರಲ್ಲದೆ ಇನ್ನೂ ಸಾವಿರಾರು ಕಲಾವಿದರು ತಮ್ಮ ಬಹುಮುಖಿ ಪ್ರತಿಭೆಯಿಂದ ವೈವಿಧ್ಯಮಯವಾಗಿ ಅಭಿನಯಿಸಿ ರಂಗಭೂಮಿಯ ಹಿರಿಮೆಯನ್ನು ಹೆಚ್ಚಿಸಿದ್ದಾರೆ.

ಕಲಾವಿರೊಂದಿಗೆ ಕಲಾವಿದೆಯರ ಕೊಡುಗೆ ಕೂಡ ಸ್ಮರಣೀಯ, ಎಲ್ಲಮ್ಮ ಗುಳೇದಗುಡ್ಡ, ಗಂಗೂಬಾಯಿ ಗುಳೇದಗುಡ್ಡ, ಗೋರಜಾನ ಕರ್ನಾಟಕಿ, ಅಮೀರಜಾನ ಕರ್ನಾಟಕಿ, ಸೋನುಬಾಯಿ ದೊಡ್ಡಬಾಯಿ, ವಜೀರಾಬಾಯಿ, ಮರ್ದಾನಬಾಯಿ, ಜಿ. ಸುಂದರಮ್ಮ, ಬಿ. ಜಯಮ್ಮ, ಮಳವಳ್ಳಿ ಸುಂದರಮ್ಮ, ಕೆರೂರು ಶಾಂತಮ್ಮ, ಮುರುಗೋಡ ರೇಣುಕಾ, ಚಿಂದೋಡಿ ಲೀಲಾ, ಶಿರಹಟ್ಟಿ ರೇಣವ್ವ, ಪರ್ವತಾಸಾನಿ, ಶೇಷಾಸಾನಿ, ಬ್ಯಾಡಗಿ ಸಾವಿತ್ರಮ್ಮ, ಸುಭದ್ರಮ್ಮ ಮನ್ಸೂರ, ಸುಮಿತ್ರಮ್ಮ ಕುಂದಾಪುರ, ಕಾಶೀಬಾಯಿ ನಲತವಾಡ, ಶಿರಹಟ್ಟಿ ಇಮ್ಮಾಸಾನಿ, ಲಕ್ಷ್ಮೇಶ್ವರದ ಬಚ್ಚಾಸಾನಿ, ಪ್ಲೋರಿನಾ ಲಕ್ಕೂಂಡಿ, ಜುಬೇದಾ ಸವಣೂರ, ಸಾಗರತ್ನಮ್ಮ ಹೊಸಮನಿ, ಅಂಬುಜಮ್ಮ ಹೊಸಮನಿ, ಗೌರಜಾನ ಹುಬ್ಬಳ್ಳಿ, ರಹಿಮಾನವ್ವ ಕುಕನೂರ, ಭಾರತಿ ಶಿರಹಟ್ಟಿ, ಸಿ. ಸಾವಿತ್ರಮ್ಮ, ಮಾಲತಿ ಮೈಸೂರು, ಮಾಲತಿ ಸುಧೀರ, ಬಳ್ಳಾರಿ ಲಲಿತಮ್ಮ, ಸರೋಜಮ್ಮ ಧುತ್ತರಗಿ, ಅನ್ನಪೂರ್ಣ ಸಾಗರ, ಶಾಂತಮ್ಮ ಪತ್ತಾರ, ಜಯಲಕ್ಷ್ಮಿ ಪಾಟೀಲ, ಲೀಲಾ ಸಾಗರ, ಪ್ರೇಮಾ ಗುಳೇದಗುಡ್ಡ, ಮಮತಾ ಗುಡೂರ ಮೊದಲಾದ ಖ್ಯಾತನಾಮ ನಟಿಯರ ಸಾಲಿಗೆ ಸೇರಿದ ಮತ್ತೋರ್ವ ಹೆಸರಾಂತ ಕಲಾವಿದೆಯೆಂದರೆ ಪ್ರಮೀಳಮ್ಮ ಗುಡೂರು.

ಸುಮಾರು ಆರುವರೆ ದಶಕಗಳ ಕಾಲ ರಂಗಭೂಮಿಗೆ ನಿಸ್ವಾರ್ಥ ಸೇವೆಗೈದ ಪ್ರಮೀಳಮ್ಮ ಗುಡೂರು ಅವರ ಬಣ್ಣದ ಬದುಕಿನ ಸಾರ್ಥಕ ಕ್ಷಣಗಳನ್ನು ಅವಿಸ್ಮರಣೀಯ ಸಂದರ್ಭಗಳನ್ನು, ರೋಮಾಂಚನಕಾರಿಯಾದ ಸನ್ನಿವೇಶಗಳನ್ನು ಕನ್ನಡ ರಂಗಭೂಮಿಗೆ ಅವರು ಕೊಟ್ಟ ಕೊಡುಗೆ-ಕಾಣಿಕೆಗಳನ್ನು ಸಾಧನೆಗಳನ್ನು ತಿಳಿಸಿಕೊಡುವ ಘನ ಉದ್ದೇಶ ಈ ಕೃತಿಯದು.

■

## ದೃಶ್ಯ –೨

# ಪ್ರಮೀಳಮ್ಮನವರ ಜೀವನ

**ಕ**ನ್ನಡ ನಾಡಿನ ಸಾಂಸ್ಕೃತಿಕ ಕಲೆಗಳಲ್ಲಿ ನಾಟಕವೂ ಒಂದು. ಅದಕ್ಕೆ ಒಂದು ಘನ ಪರಂಪರೆಯನ್ನು ನಿರ್ಮಿಸಿದ, ಶ್ರೀಮಂತಿಕೆಯನ್ನು ತಂದು ಕೊಟ್ಟ ಹಿರಿಮೆ ನಾಡಿನ ಅನೇಕ ಪ್ರತಿಭಾ ಕಿರಣಗಳಿಗೆ ಸಲ್ಲಬೇಕು. ಅಂಥ ಪ್ರತಿಭಾ ಕಿರಣಗಳಲ್ಲಿ ಗುಡೂರು ಪ್ರಮೀಳಮ್ಮನವರು ಒಬ್ಬರು. ಗಂಧದ ಕೊರಡು ತನ್ನನ್ನು ತಾನು ತಿಕ್ಕಿಸಿಕೊಂಡು ಸುವಾಸನೆ ಬಿಡುವಂತೆ, ಪ್ರಮೀಳಮ್ಮ ತಮ್ಮ ಅದ್ಭುತ ಕಲಾಭಿನಯದಿಂದ ರಂಗಭೂಮಿಯಲ್ಲಿ ಪರಿಮಳ ಪಸರಿಸಿದವರು. ಕನ್ನಡ ರಂಗಭೂಮಿಯನ್ನು ಬೆಳಗಿದ ಮಿನುಗುತಾರೆಯಾದ ಪ್ರಮೀಳಮ್ಮ ನಾಟಕಲೋಕದ ಅನರ್ಘ್ಯ ರತ್ನ ಎನಿಸಿದ್ದಾರೆ.

ಸುಮಾರು ಆರುವರೆ ದಶಕಗಳ ಕಾಲ ರಂಗಭೂಮಿಯಲ್ಲಿ ಮಹೋಜ್ವಲವಾಗಿ ಮಿನುಗಿದ ಧ್ರುವತಾರೆ. ಇಷ್ಟೊಂದು ಸುದೀರ್ಘಾವಧಿಯಲ್ಲಿ ರಂಗಭೂಮಿಯ ಹಲವು ಭೂಮಿಕೆಗಳಲ್ಲಿ ತಮ್ಮ ಅಮೋಘಾಭಿನಯ, ಅದ್ಭುತ ನಟನೆಯಿಂದಾಗಿ ಅಪ್ರತಿಮವಾಗಿ ಮೆರೆದ ಶ್ರೇಷ್ಠ ರಂಗ ಕಲಾವಿದೆ. ಈ ಕಾಲಾವಧಿ (೧೯೪೯–೨೦೧೨)ಯಲ್ಲಿ ಪ್ರಮೀಳಮ್ಮನವರು ಕರ್ನಾಟಕ ರಂಭೂಮಿಗೆ ಸಲ್ಲಿಸಿದ ಸೇವೆ, ನೀಡಿದ ಅನನ್ಯ ಕೊಡುಗೆಗಳಿಂದಾಗಿ ಸ್ಮರಣಾರ್ಹ ಸಾಧಕರ ಸಾಲಿಗೆ ಸೇರಿದ್ದಾರೆ. ಅವರ ರಂಗಸಾಧನೆ, ಕೊಡುಗೆ ಇತರ ಕಲಾವಿದೆಯರಿಗೆ ಮಾದರಿಯಾಗಿದೆ, ಅನುಕರಣೀಯವಾಗಿದೆ.

ಮಹಾನಟಿ ಪ್ರಮೀಳಮ್ಮನವರ ರಂಗಬದುಕಿನ ಸಾಧನೆ ಸಿದ್ಧಿಗಳನ್ನು, ಕೊಡುಗೆಗಳನ್ನು ಪರಿಚಯಿಸಿಕೊಳ್ಳುವ ಮೊದಲು ಅವರ ವೈಯಕ್ತಿಕ ಜೀವನದ ವಿಷಯವನ್ನು ತಿಳಿದುಕೊಳ್ಳುವುದು ಸೂಕ್ತವಾದುದು.

ಪ್ರಮೀಳಮ್ಮ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಗುಡೂರು ಗ್ರಾಮದವರು. ಒಂದು ಕಾಲದಲ್ಲಿ ಈ ಹಳ್ಳಿ ಬಳೆಗಳಿಂದಾಗಿ ಖ್ಯಾತಿಯನ್ನು ಹೊಂದಿತ್ತು. ಈಗ ಪ್ರಮೀಳಮ್ಮ, ಅವರ ಸಹೋದರಿ ಮಮತಾ ಅವರ ರಂಗಾಭಿನಯದಿಂದಾಗಿ ನಾಡಿನಾದ್ಯಂತ ಹೆಸರುವಾಸಿಯಾಗಿದೆ. ಅಲ್ಲಿ ನೇಕಾರಿಕೆ ವೃತ್ತಿಯನ್ನು ಕೈಗೊಂಡು ಬದುಕಿನ ಬಂಡಿಯನ್ನು ಸಾಗಿಸುತ್ತಿದ್ದ ಮುಸ್ಲಿಂ ಧರ್ಮಕ್ಕೆ ಸೇರಿದ ಬಡ ಕುಟುಂಬವೊಂದಿದೆ. ಫಕ್ರುದ್ದೀನ್ ಹಾಗೂ ಇಮಾಮಬು ಆ ಕುಟುಂಬದ

ಯಜಮಾನರು. ಮನೆತನದ ಅಡ್ಡ ಹೆಸರು ಇಟಗಿ ಎಂಬುದು. ಫಕ್ರುದ್ದೀನ್ ಮತ್ತು ಇಮಾಮಬಿ ದಂಪತಿಗಳಿಗೆ ಒಟ್ಟು ಏಳು ಮಕ್ಕಳು. ಅವರಲ್ಲಿ ಇಬ್ಬರು ಗಂಡು, ಐವರು ಹೆಣ್ಣುಮಕ್ಕಳು. ಏಳು ಜನ ಮಕ್ಕಳಲ್ಲಿ ಪ್ರಮೀಳಮ್ಮ ಹಿರಿಯರು. ಇವರಲ್ಲಿ ಒಂದು ಗಂಡು ಮಗು ಹಾಗೂ ಒಂದು ಹೆಣ್ಣು ಮಗು ತೀರಿಹೋಗಿವೆ. ಬದುಕಿದ ಐವರೆಂದರೆ–ಫಾತಿಮಾ(ಪ್ರಮೀಳಮ್ಮ), ಅಮೀನಸಾಬ, ಮಮತಾಜ, ರಜಿಯಾಬೇಗಂ ಹಾಗೂ ಅಮೀನಾ. ಸದ್ಯ ಇವರೆಲ್ಲರೂ ಗುಡೂರಿನಲ್ಲಿ ನೆಲಸಿದ್ದಾರೆ.

ಮನೆತನದ ಮೂಲ ಕಸುಬು ನೇಕಾರಿಕೆ. ಫಾತಿಮಾಳ ತಂದೆ–ತಾಯಿಗಳು ಸೀರೆಯನ್ನು ನೇಯುತ್ತಿದ್ದರು. ಆರ್ಥಿಕವಾಗಿ ಬಡವರಾದರೂ ಹೃದಯ ಶ್ರೀಮಂತಿಕೆ ಅವರಲ್ಲಿತ್ತು. ಎಲ್ಲ ಕೋಮಿನವರೊಂದಿಗೆ ಸೌಹಾರ್ದಯುತವಾಗಿ ನಡೆದುಕೊಂಡವರು. ಮೊದಲು ಪ್ರಮೀಳಮ್ಮನವರ [ಫಾತಿಮಾ] ತಂದೆ–ತಾಯಿಗಳು ಒಕ್ಕಲಿಗರ ಓಣಿಯಲ್ಲಿ ವಾಸವಾಗಿದ್ದರಂತೆ. ಆ ಓಣಿಯ ಬಹಳಷ್ಟು ಹಿಂದೂಗಳಿಗೆ ಮುಸ್ಲಿಮರ ಹೆಸರು ಹೇಳುವುದು ಕಷ್ಟವಾದಾಗ ಫಾತಿಮಾಳನ್ನು ಪ್ರಮೀಳಮ್ಮ ಎಂದು, ಮಮತಾಜಳನ್ನು ಮಮತಾ ಎಂದು ಕರೆದರಂತೆ. ಸಹೋದರಿಯರಿಬ್ಬರೂ ಒಂದು ಪ್ರಮೀಳಮ್ಮ, ಮಮತಾ ಎಂದೇ ಚಿರಪರಿಚಿತರಾಗಿದ್ದಾರೆ.

ಪ್ರಮೀಳಮ್ಮ [ಫಾತಿಮಾ] ದಿನಾಂಕ ೦೧–೦೧–೧೯೩೬ರಂದು ಗುಡೂರಿನಲ್ಲಿ ಜನಿಸಿದರು. ಇಟಗಿ ದಂಪತಿಗಳ ಹಿರಿಯ ಮಗಳಾದ ಪ್ರಮೀಳಮ್ಮ ಓದಿದ್ದು ಕೇವಲ ಮೂರನೆಯ ತರಗತಿಯವರೆಗೆ. ಕನ್ನಡ ಭಾಷೆಯಲ್ಲಿಯೇ ಓದಿದ ಅವರಿಗೆ ಅದುವೇ ಬದುಕಿನ ಭಾಷೆಯಾಯಿತು. ಮಾತೃಭಾಷೆಯಾದ ಉರ್ದು ಮಾತನಾಡಲು ಬರುವುದು ಅಲ್ಪ–ಸ್ವಲ್ಪ. ಆ ಮನೆತನದ ಆರ್ಥಿಕ ಸ್ಥಿತಿ ಅಷ್ಟಾಗಿ ಚೆನ್ನಾಗಿರದ ಕಾರಣ ಹೆಚ್ಚು ವಿದ್ಯಾಭ್ಯಾಸ ಮಾಡಲು ಆಗಿರಲಿಕ್ಕಿಲ್ಲ. ಸ್ವತಃ ತಂದೆ–ತಾಯಿಗಳೆ ಅನಕ್ಷರಸ್ಥರು. ಆದರೆ ಅವರು ಮಕ್ಕಳಿಗೆ ಕಲಿಸಲು ಉತ್ಸಾಹ ತೋರಿದರು. ಮಕ್ಕಳು ಮಾತ್ರ ಕಲಿತಿದ್ದು ತೀರ ಕಡಿಮೆ.

ಪ್ರಮೀಳಮ್ಮ ಬಾಗಲಕೋಟೆಯಲ್ಲಿದ್ದ ತಮ್ಮ ಸೋದರತ್ತೆಯರಾದ ತಾರಮ್ಮ ಮತ್ತು ಸುಶೀಲಮ್ಮ ಅವರ ಹತ್ತಿರವಿದ್ದು, ಮೂರನೆಯ ತರಗತಿಯವರೆಗೆ ಕನ್ನಡ ಭಾಷಾ ಮಾಧ್ಯಮದಲ್ಲಿ ಕಲಿತರು. ಚಿಕ್ಕ ವಯಸ್ಸಿನಲ್ಲಿಯೇ ಪ್ರಮೀಳಮ್ಮನವರಿಗೆ ಸೀರೆ ನೇಯುವುದನ್ನು ಹೊರತುಪಡಿಸಿ ಅಂಟು ಹಾಕಿ ಒಣಗಿಸುವ, ಎಳೆಗೆ ರಾಣ ಹಾಕುವ, ಹಣಿಗೆ ಕೆಚ್ಚುವ, ಕರಿನೂಲು ತೋಡುವ, ಕಟ್ ಮಾಡಿ ಕರಿ, ಕೆಂಪು ಬಣ್ಣ ಹಾಕುವ ಇತ್ಯಾದಿ ಕೆಲಸಗಳನ್ನು ಮಾಡುತ್ತಿದ್ದರು.

ಸೋದರತ್ತೆಯವರ ಹತ್ತಿರವೇ ಬೆಳೆದ ಪ್ರಮೀಳಮ್ಮ, ಅವರ ಸಹಾಯ, ಅವರ ಪ್ರೀತಿ, ಪ್ರೇರಣೆಯಿಂದಾಗಿ ಬಾಗಲಕೋಟೆಯ ಮ್ಯಾಗೇರಿ ಮಾಸ್ತರ ಹತ್ತಿರ ನೃತ್ಯವನ್ನು

ಕಲಿತರು. ನೃತ್ಯ ಶಿಕ್ಷಣವನ್ನು ಪಡೆಯುತ್ತಿದ್ದ ಸಂದರ್ಭದಲ್ಲಿಯೇ ಬಾಗಲಕೋಟೆ ನಗರದಲ್ಲಿ ಬೆಳವಣಿಕಿ ಸಂಗಪ್ಪನವರ ವೃತ್ತಿ ಕಂಪನಿಯು ಕ್ಯಾಂಪ್ ಮಾಡಿತ್ತು. ಅವರು ಪ್ರದರ್ಶಿಸುತ್ತಿದ್ದ 'ಸುವರ್ಣ' ನಾಟಕವನ್ನು ನೋಡಲು ಪ್ರಮೀಳಮ್ಮ ಅತ್ತೆಯವರೊಂದಿಗೆ ಹೋಗಿದ್ದರು. ಆ ನಾಟಕದ ಪಾತ್ರಧಾರಿಗಳ ಅಮೋಘ ಅಭಿನಯವನ್ನು ಕಂಡು, ಜೊತೆಗೆ ಅಜ್ಜಿ[ದಾದಿ] ಶಕುಂತಲಮ್ಮ ಹೇಳಿದ ರಂಗವೈಭವವನ್ನು ಕೇಳಿ ನಟಿಯಾಗುವ ಹೆಬ್ಬಯಕೆ ಚಿಗುರಿತು. ತಮ್ಮ ೯-೧೦ನೆಯ ಚಿಕ್ಕ ವಯಸ್ಸಿನಲ್ಲಿಯೇ ಬಣ್ಣ ಹಚ್ಚಿ ಕಂಪನಿಗಳಲ್ಲಿ ನೃತ್ಯ ಮಾಡಿದ ಅವರು ೧೨ನೆಯ ವಯಸ್ಸಿಗೆ ಬಣ್ಣದ ಬದುಕಿಗೆ ಪಾದಾರ್ಪಣೆ ಮಾಡಿದರು. ಹವ್ಯಾಸಿ ಕಲಾಸಂಘದ ಮೂಲಕ ರಂಗ ಪ್ರವೇಶ ಮಾಡಿದ ಪ್ರಮೀಳಮ್ಮನವರು ೧೯೬೦ರಲ್ಲಿ ವಸಂತ ಸಾ ನಾಕೋಡ ಅವರ 'ವಸಂತ ಕಲಾ ನಾಟ್ಯ ಸಂಘ'ದ ಮೂಲಕ ವೃತ್ತಿರಂಗದ ಪ್ರವೇಶ ಮಾಡಿದರು. ಆ ಮಂಡಳಿಯ ಪ್ರಮುಖ ನಾಟಕಗಳಲ್ಲಿ ನಟಿಸಿ, ನಂತರ ಪಡೇಸೂರ ಬಸವರಾಜಪ್ಪನವರ 'ಎಡೆಯೂರು ಸಿದ್ಧಲಿಂಗೇಶ್ವರ ನಾಟಕ ಮಂಡಳಿ', ವಿರೂಪಾಕ್ಷಪ್ಪನವರ 'ಬಸವೇಶ್ವರ ನಾಟ್ಯ ಸಂಘ' ಮೈದರಗಿ, ಕಮತಗಿಯ ಬಿ. ಆರ್. ಅರಿಷಣಗೋಡಿಯವರ 'ಶ್ರೀ ಹುಚ್ಚೇಶ್ವರ ನಾಟ್ಯ ಸಂಘ'. ಸುಳ್ಯದ ಮಲ್ಲನಗೌಡ ದೇಸಾಯಿ ಅವರ ' ಶ್ರೀ ಶೈಲಮಲ್ಲಿಕಾರ್ಜುನ ನಾಟ್ಯ ಸಂಘ', ಎನ್. ಬಸವರಾಜು ಮಾಲೀಕರ 'ಶ್ರೀ ಸಂಗಮೇಶ್ವರ ನಾಟ್ಯ ಸಂಘ' ಗುಡಗೇರಿ ಹೀಗೆ ಇನ್ನೂ ಹಲವಾರು ನಾಟಕ ಕಂಪನಿಗಳಲ್ಲಿ ನಟಿಸಿದ್ದಾರೆ . ಎಲ್ಲ ಪ್ರಕಾರದ ನಾಟಕಗಳಲ್ಲಿ ಪಾಲಿಗೆ ಬಂದ ಪ್ರತಿಯೊಂದು ಪಾತ್ರವನ್ನು ತುಂಬಾ ಸಮರ್ಥವಾಗಿ ನಟಿಸಿ ಯಶಸ್ವಿಯಾಗಿದ್ದಾರೆ. ಸ್ತ್ರೀ ಪಾತ್ರಗಳಲ್ಲಿ ಮಾತ್ರವಲ್ಲದೆ, ಪುರುಷ ಪಾತ್ರಗಳಾದ ಗೌಡ, ದುರ್ಯೋಧನ, ಅಶ್ವತ್ಥಾಮ ಮೊದಲಾದ ಭೂಮಿಕೆಗಳನ್ನು ಸವಾಲಾಗಿ ಸ್ವೀಕರಿಸಿ, ಅಮೋಘವಾಗಿ ಅಭಿನಯಿಸಿ ಪುರುಷ ಕಲಾವಿದರು ಹುಬ್ಬೇರಿಸುವಂತೆ ಮಾಡಿದ್ದರು.

ಕೇವಲ ವೃತ್ತಿಕಂಪನಿಗಳಲ್ಲಿ ಮಾತ್ರವಲ್ಲದೆ ಹವ್ಯಾಸಿ ನಾಟಕಗಳಲ್ಲೂ ಮನೋಜ್ಞ ಅಭಿನಯಕ್ಕೆ ಹೆಸರಾದವರು. ಸ್ವಂತ ನಾಟಕ ಮಂಡಳಿಯನ್ನು ಕಟ್ಟಿ, ಸುಮಾರು ಆರು ತಿಂಗಳ ಕಾಲ ಕಂಪನಿಯ ಮಾಲೀಕರೆನಿಸಿಕೊಂಡಿದ್ದಾರೆ. ಒಂದು ನಾಟಕ ಸಂಸ್ಥೆಯನ್ನು ಸ್ಥಾಪಿಸಿ ಅದರ ಮೂಲಕ ಒಳ್ಳೊಳ್ಳೆಯ ನಾಟಕಗಳನ್ನು ಪ್ರದರ್ಶಿಸಿ ಜನಾನುರಾಗಿಯಾದ್ದಾರೆ. ನಾಡಿನ ಬೇರೆ ಬೇರೆ ಕಡೆಗಳಲ್ಲಿ ಕ್ಯಾಂಪ್ ಮಾಡಿ ಉತ್ತಮ ನಾಟಕಗಳ ಪ್ರಯೋಗದ ಮೂಲಕವು ರಂಗಭೂಮಿಯ ಸೇವೆಗೈದವರು. ಒಬ್ಬ ಸಮರ್ಥ ನಾಟಕ ನಿರ್ದೇಶಕಿಯಾಗಿ ಹಲವಾರು ನಾಟಕಗಳನ್ನು ಪ್ರಭಾವಶಾಲಿಯಾಗಿ, ಪರಿಣಾಮಕಾರಿಯಾಗಿ ನಿರ್ದೇಶಿಸಿದ ಹಿರಿಮೆ ಪ್ರಮೀಳಮ್ಮನವರದು

ಅವರ ಅಭಿನಯ ಪ್ರತಿಭೆ, ನಟನಾ ಖ್ಯಾತಿ ಬರೀ ವೃತ್ತಿರಂಗಭೂಮಿ, ಹವ್ಯಾಸಿ

ರಂಗಭೂಮಿಗೆ ಸೀಮಿತವಾಗಲಿಲ್ಲ. ಅದು ಕಿರುತೆರೆ (ದೂರದರ್ಶನ) ಹಾಗೂ ಕನ್ನಡ ಚಲನಚಿತ್ರ ರಂಗದವರೆಗೂ ಹಬ್ಬಿತು. ಮೂರು ಧಾರಾವಾಹಿಗಳಲ್ಲಿ, ಎರಡು ಚಲನಚಿತ್ರಗಳಲ್ಲಿ ವಿಭಿನ್ನ ಪಾತ್ರಗಳಲ್ಲಿ ನಟಿಸುವ ಮೂಲಕ ಅಲ್ಲಿಯೂ ತಮ್ಮ ಕಲಾ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ. ಕಲಾಪ್ರಪಂಚಕ್ಕೆ ಅವರು ಕೊಟ್ಟ ಕೊಡುಗೆಗಳು, ರಂಗಭೂಮಿ ಕ್ಷೇತ್ರದಲ್ಲಿ ಗೈದ ಸಾಧನೆಗಳು, ನಿರ್ಮಿಸಿದ ದಾಖಲೆಗಳು, ನಿಲ್ಲಿಸಿದ ಮೈಲುಗಳು ಇಂದಿನ ಕಲಾವಿದರಿಗೆ ಅನುಕರಣೀಯವಾದವುಗಳಾಗಿವೆ. ರಂಗಭೂಮಿಗೆ ನಿಃಸ್ವಾರ್ಥದಿಂದ ಸೇವೆ ಸಲ್ಲಿಸಿದ ಪ್ರಮೀಳಮ್ಮನವರಿಗೆ ಸಂದ ಪ್ರಶಸ್ತಿಗಳು, ಮಾನ-ಸನ್ಮಾನಗಳು ಅನುಪಮವಾದವುಗಳು

ದಾರಿದ್ರ್ಯ ಕುಟುಂಬದಲ್ಲಿ ಜನಿಸಿದ ಈ ಕಲಾವಿದೆ ಬಡತನವನ್ನೇ ಉಂಡು, ಅದನ್ನೇ ಹಾಸಿ-ಹೊದ್ದಿಕೊಂಡು ಬೆಳೆದರೂ ಹೃದಯ ಶ್ರೀಮಂತಿಕೆಯಿಂದ, ಪ್ರತಿಭಾ ಸಂಪತ್ತಿನಿಂದ ಕನ್ನಡ ನಾಡಿನ ರಂಗಪ್ರೇಮಿಗಳ ಮನೆಮಾತಾದವರು. ನಾಟಕ ಕಲೆಯೇ ಅವರ ಜೀವನವನ್ನು ರೂಪಿಸಿತು. ಸಹೋದರ, ಸಹೋದರಿಯರೊಂದಿಗೆ ಪ್ರೀತಿ-ವಾತ್ಸಲ್ಯದಿಂದ ಇದ್ದ ಅವರು ತಂದೆ-ತಾಯಿಗಳನ್ನು ತುಂಬಾ ಗೌರವಾದರಗಳಿಂದ ಕಂಡವರು. ಜೊತೆಗೆ ಅಜ್ಜಿ, ಅತ್ತೆಯರೊಂದಿಗೆ ಒಳ್ಳೆಯ ಒಡನಾಟ ಹೊಂದಿದ್ದರು. ಅವರ ಪ್ರೇರಣೆ, ಸಹಾಯದಿಂದಾಗಿ ಪ್ರಮೀಳಮ್ಮನವರು ರಂಗಭೂಮಿಗೆ ಬರುವಂತಾಯಿತು.

ಅಜ್ಜಿ(ದಾದಿ) ಶಕೀಲಾಗೆ ಮೊಮ್ಮಗಳ ಮೇಲೆ ಅತಿಯಾದ ಪ್ರೀತಿ. ಆಕೆಯೊಂದಿಗೆ ಕಂಪನಿಯಲ್ಲಿಯೇ ಇರುತ್ತಿದ್ದಳು. ಅಜ್ಜಿಯನ್ನು ಬಿಟ್ಟು ಮೊಮ್ಮಗಳಾಗಲಿ, ಮೊಮ್ಮಗಳನ್ನು ಬಿಟ್ಟು ಅಜ್ಜಿ ಇರುತ್ತಿರಲಿಲ್ಲ. ಇಬ್ಬರೂ ಬಹುದಿನಗಳ ಕಾಲ ಜೊತೆಜೊತೆಯಲ್ಲಿ ಇದ್ದ ಕಾರಣ ಅವರಿಬ್ಬರಲ್ಲಿ ಬಹು ಅನ್ಯೋನ್ಯತೆಯಿತ್ತು. ಇದಕ್ಕಾಗಿಯೇ ಪ್ರಮೀಳಾ ಅವರಿಗೆ ಜನ್ಮ ಕೊಟ್ಟ ತಂದೆ-ತಾಯಿಗಳಿಗಿಂತಲೂ ಅಜ್ಜಿಯ ಮೇಲೆ ಹೆಚ್ಚು ಪ್ರೀತಿ. ಅಜ್ಜಿ-ಮೊಮ್ಮಗಳ ಒಡನಾಟವನ್ನು ನೋಡಿದ್ದ ಅರಿಷಿಣಗೋಡಿಯವರು ಅಜ್ಜಿಗೆ ಮೈಯಲ್ಲಿ ಹುಷಾರ ಇಲ್ಲದ ವೇಳೆಯಲ್ಲಿ ಪ್ರಮೀಳಾ ಅವರಿಗೆ ಇವರು ಹದಿನೈದು ದಿನ ರಜೆ ನೀಡಿದ್ದರಂತೆ.

ಪ್ರಮೀಳಾ ಅವರ ಸಹೋದರಿ ಮಮತಾ ಕೂಡ ಅಕ್ಕನಂತೆ ರಂಗಭೂಮಿಯ ಮೇರು ನಟಿ, ಜೊತೆಗೆ ಶ್ರೇಷ್ಠ ಚಿತ್ರತಾರೆ. ಗುಡೂರು ಸಹೋದರಿಯರೆಂದೇ ರಂಗಭೂಮಿಯ ಚರಿತ್ರೆಯಲ್ಲಿ ಖ್ಯಾತರಾದ ಈರ್ವರು ಹಲವು ಸಾಧನೆಗಳ ಮೈಲುಗಲ್ಲು ನಿರ್ಮಿಸಿದ್ದಾರೆ. ಅಕ್ಕಳ ಸಾಧನೆಯನ್ನು ಕಂಡು ತಂಗಿ, ತಂಗಿಯ ಯಶಸ್ಸನ್ನು ನೋಡಿ ಅಕ್ಕ ಸಂತೋಷಪಡುವ, ಅಭಿಮಾನ ವ್ಯಕ್ತಪಡಿಸುವ ಆದರ್ಶ ಇತರ ಸಹೋದರ-ಸಹೋದರಿಯರಿಗೆ ಮಾದರಿಯಾಗಿದೆ. ಆ ಅಕ್ಕ-ತಂಗಿಯರ

ತ್ಯಾಗ ಮನೋಭಾವ ಕೂಡ ಸ್ತುತ್ಯಾರ್ಹವಾದುದು. ಪ್ರಮೀಳಮ್ಮ ತಾವು ಎರಡು ದಶಕಗಳ ಕಾಲ ನಟಿಸಿದ ಬಿ. ಆರ್. ಅರಿಷಿಣಗೋಡಿಯವರ ಶ್ರೀ ಹುಚ್ಚೇಶ್ವರ ನಾಟಕ ಕಂಪನಿಯನ್ನು ಬಿಟ್ಟಿದ್ದು, ತಮ್ಮ ಸಹೋದರಿ ಮಮತಾಗೆ ಸರಿಯಾದ ಪಾತ್ರಗಳು ಹೆಚ್ಚಾಗಿ ಸಿಗದ ಕಾರಣಕ್ಕಾಗಿ ಯಜಮಾನರೊಂದಿಗೆ ಮನಸ್ತಾಪ ಮಾಡಿಕೊಂಡಿದ್ದರು. ಮಮತಾಳು ಸಹ ಸೂಡಿಯ ಬಸವಂತಪ್ಪ ಪಟ್ಟಣಶೆಟ್ಟಿ ಅವರ 'ಶ್ರೀ ಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ'ದಲ್ಲಿ ಪ್ರಮುಖ ನಟಿಯಾಗಿ ಹೆಸರು ವಾಸಿಯಾಗಿದ್ದ ಸಂದರ್ಭದಲ್ಲಿ ತನ್ನ ಅಕ್ಕಳಿಗೆ ಕಂಪನಿಯಲ್ಲಿ ನಟಿಸಲು ಅವಕಾಶ ನೀಡಿದರೆ ಮಾತ್ರ ತಾನು ಮಂಡಳಿಯಲ್ಲಿ ಮುಂದೆ ಅಭಿನಯಿಸುವುದಾಗಿ, ಇಲ್ಲದಿದ್ದರೆ ಇಲ್ಲವೆಂದು ಹೇಳಿ, ಅಕ್ಕಳಿಗೆ ಅಲ್ಲಿ ಪಾತ್ರ ಕೊಡಿಸಿದ್ದು.

ಪ್ರಮೀಳಾ ತನ್ನ ತಂಗಿ ಮಮತಾಳನ್ನು ತನಗಿಂತಲೂ ಶ್ರೇಷ್ಠ ನಟಿ ಎಂದು ಹೊಗಳುತ್ತಿದ್ದುದು, ಮಮತಾ ಅಕ್ಕಳನ್ನು ಬೆಂಗಳೂರಿಗೆ ಚಿತ್ರೀಕರಣಕ್ಕಾಗಿ ಕರೆದುಕೊಂಡು ಹೋಗಿದ್ದು ಅವರಲ್ಲಿನ ಔದಾರ್ಯತನವನ್ನು ಎತ್ತಿತೋರುತ್ತದೆ. ಆ ಸಹೋದರಿಯರಿಬ್ಬರು ಈಗಲೂ ಅನ್ಯೋನ್ಯತೆಯಿಂದ ಇದ್ದಾರೆ.

ಮಹಾನ್ ಕಲಾವಿದೆಯಾದ ಪ್ರಮೀಳಮ್ಮನವರಿಗೆ ಇಬ್ಬರು ಹೆಣ್ಣುಮಕ್ಕಳು, ಅಮೀನಾ(ಮೀನಮ್ಮ) ಹಿರಿಯಳು, ಎಸ್.ಎಸ್.ಎಲ್.ಸಿ.ಯವರೆಗೆ ಓದಿದ ಇವರು ಸದ್ಯ ಆಶಾ ಕಾರ್ಯಕರ್ತೆಯಾಗಿ ಸಮಾಜ ಸೇವೆ ಮಾಡುತ್ತಿದ್ದಾರೆ. ಅಮೀನಾ ಅವರ ಗಂಡ ಮಹಮ್ಮದ. ಈ ದಂಪತಿಗಳಿಗೆ ಕಬೂಲಸಾಬ, ರಿಯಾಜ್, ಮತ್ತು ಶಕೀಲ ಎನ್ನುವ ಮೂರು ಗಂಡು ಮಕ್ಕಳು. ಇವರೆಲ್ಲರೂ ಈಗ ಗುಡೂರನಲ್ಲಿ ನೆಲೆಸಿದ್ದಾರೆ. ರಂಗಸಾಮ್ರಾಜ್ಞಿಯಾಗಿ ಮೆರೆದು ನಾಡಿನ ರಂಗಪ್ರೇಮಿಗಳ ಹೃದಯ ಸಿಂಹಾಸನದಲ್ಲಿ ವಿರಾಜಿಸಿದ ಪ್ರಮೀಳಮ್ಮನವರು ಸ್ವಂತ ಸೂರಿಲ್ಲದೆ ಮಗಳು–ಅಳಿಯರ ಮನೆಯಲ್ಲಿ ನೆಲಸಿರುವ ನತದೃಷ್ಟ ಕಲಾವಿದೆ. ಸರ್ಕಾರ ಅವರಿಗೆ ಮೂಲಭೂತ ಸೌಲಭ್ಯವನ್ನು ಒದಗಿಸದೆ ಇದ್ದುದು ದುರದೃಷ್ಟಕರ. ಆದರೆ ಅಳಿಯನ ಮನೆಯಲ್ಲಿ ಅವರು ಅತ್ಯಂತ ಸುಖಿಗಳಾಗಿದ್ದಾರೆ. ಯಾಕೆಂದರೆ ಆ ಕುಟುಂಬದ ಸರ್ವಸದಸ್ಯರು ಅಂದರೆ, ಮಗಳು, ಅಳಿಯ, ಮೊಮ್ಮಕ್ಕಳು ಇವೆಲ್ಲರ ಪ್ರೀತಿ, ಆರೈಕೆಯಿಂದಾಗಿ ಆನಂದಮಯವಾಗಿದ್ದಾರೆ. ಪಾರ್ಶ್ವವಾಯುವಿನ ಹೊಡೆತಕ್ಕೆ ಕಾಲುಗಳ ಸ್ವಾಸ್ಥ್ಯ ಕಳೆದುಕೊಂಡು ನಡೆಯಲೂ ಮೇಲೇಳಲೂ ಆಗದಂಥ ಸ್ಥಿತಿಯಲ್ಲಿರುವ ಪ್ರಮೀಳಮ್ಮನವರಿಗೆ ಯಾವ ತೊಂದರೆ ಆಗದಂತೆ, ಸಂತೋಷದಿಂದ ಇರುವಂತೆ ಮಾಡಿದ ಅವರ ಸೇವೆ ಮಾನವೀಯವಾದುದು. ಜೊತೆಗೆ ಅದು ಸ್ತುತ್ಯಾರ್ಹವಾದುದು. ಅವರೆಲ್ಲರ ಪ್ರೀತಿಯ ಆರೈಕೆಗೆ ಚಿರಋಣಿಯಾಗಿರುವ ಪ್ರಮೀಳಮ್ಮ "ನಾನು ನಿಜಕ್ಕೂ ಪುಣ್ಯವಂತೆ, ಇಂತ ಮಗಳು, ಅಳಿಯ, ಮೊಮ್ಮಕ್ಕಳನ್ನು ಪಡೆದಿದ್ದು ನನ್ನ ಪೂರ್ವಜನ್ಮದ ಪುಣ್ಯ" ಎಂದು ಅಭಿಮಾನದಿಂದ ಹೇಳುತ್ತಾ ಭಾವುಕರಾಗುತ್ತಾರೆ.

ಶಕೀಲಾ(ಶಕುಂತಲಾ) ಪ್ರಮೀಳಮ್ಮನವರ ಇನ್ನೊಬ್ಬ ಮಗಳು. ವೃತ್ತಿಯಿಂದ ಶಿಕ್ಷಕಿಯಾದ ಇವರು ತಿಮ್ಮರೆಡ್ಡಿ ಎಂಬುವವರೊಂದಿಗೆ ಅಂತರ್‌ಜಾತಿಯ ವಿವಾಹವಾಗಿದ್ದಾರೆ. ವೃಷಾಂಕ ಈ ದಂಪತಿಗಳ ಮಗ. ಸದ್ಯ ಈ ಕುಟುಂಬ ಕುಷ್ಟಗಿಯಲ್ಲಿ ನೆಲಸಿದೆ. ಈ ದಂಪತಿಗಳು ಸಹ ಪ್ರಮೀಳಾ ಅವರ ಬಗ್ಗೆ ಪ್ರೀತಿ, ಗೌರವ ಭಾವ ತಾಳಿದ್ದಾರೆ. ಆಗಾಗ ಗುಡೂರಿಗೆ ಬಂದು ಅವರ ಆರೋಗ್ಯ ವಿಚಾರಿಸಿಕೊಂಡು ಹೋಗುತ್ತಿದ್ದಾರೆ. ತಾಯಿ ಪ್ರಮೀಳಮ್ಮ ಕೂಡ ಕುಷ್ಟಗಿಯ ಮಗಳ ಮನೆಗೆ ಹೋಗಿ ಅಲ್ಲಿ ಕೆಲಕಾಲ ಇದ್ದು ಬರುತ್ತಾಳೆ.

ಬಡತನ ಭೂತ ಈ ಕಲಾವಿದೆಗೆ ಹೆಚ್ಚು ಓದಲು ಅವಕಾಶ ನೀಡಲಿಲ್ಲ. ಅಂತೆಯೇ ಅವರಿಗೆ ಕೇವಲ ಮೂರನೆಯ ತರಗತಿಯವರೆಗೆ ಓದಲು ಸಾಧ್ಯವಾಯಿತು. ಅಷ್ಟು ಕಲಿತ ಹುಡುಗಿಯೊಬ್ಬಳು ರಂಗಭೂಮಿ, ಕಿರುತೆರೆ, ಚಲನಚಿತ್ರಗಳಲ್ಲಿ ನಟಿಸಲು ಹೇಗೆ ಸಾಧ್ಯವಾಯಿತು!, ಇಷ್ಟು ಓದಿನಿಂದ ನಾಡಿನ ತುಂಬೆಲ್ಲಾ ಜನಪ್ರಿಯವಾದುದು ಹೀಗೆಂದು ಬಹುಜನರು ಹುಬ್ಬೇರಿಸಬಹುದಾಗಿದೆ. ಮುಂದೆ ಬರಬೇಕು ಎನ್ನುವ ಮನೋಭಾವ, ಏನನ್ನಾದರೂ ಸಾಧಿಸಬೇಕು ಎನ್ನುವ ಛಲವಿದ್ದರೆ ಸಾಧನೆ-ಸಿದ್ಧಿ ಸಾಧ್ಯವಾಗುತ್ತದೆ. ಅಂಥ ಮನೋಭಾದ ಪ್ರಮೀಳಮ್ಮನವರು ಪಡೇಸೂರು ಕಂಪನಿಯಲ್ಲಿದ್ದಾಲೇ ಶ್ರದ್ಧೆಯಿಂದ ಒಂದೊಂದೇ ಅಕ್ಷರಗಳನ್ನು ಕೂಡಿಸಿ, ಕೂಡಿಸಿ ಓದುವುದನ್ನು ಕಲಿತರು. ಅವರ ಈ ಪ್ರಯತ್ನಕ್ಕೆ ಸಹಕರಿಸಿದವನು ಆ ನಾಟಕ ಮಂಡಳಿಯ ಕಲಾವಿದ ಚನ್ನಪ್ಪಣ್ಣನು.

ಅಭಿನಯ ವೃತ್ತಿಯೊಂದಿಗೆ ಕಥೆ, ಕಾದಂಬರಿ, ದಿನಪತ್ರಿಕೆಗಳನ್ನು ಓದುವ ಉತ್ತಮ ಹವ್ಯಾಸವನ್ನು ಪ್ರಮೀಳಾ ಅವರು ಬೆಳಸಿಕೊಂಡಿದ್ದರು. ಅವರೊಂದಿಗೆ ರಂಗಭೂಮಿಯ ಹಿರಿಯ ಕಲಾವಿದೆಯರಾದ ಜಯಲಕ್ಷ್ಮಿ ಪಾಟೀಲ, ಶಶಿಪ್ರಭಾ ಅವರು ಸಹ ಓದುವುದನ್ನು ರೂಢಿಸಿಕೊಂಡರು. ಈ ಮೂವರು ಓದಲು ಕಲಿತ ಆರಂಭದ ದಿನಗಳಲ್ಲಿ ಚಂದಮಾಮ, ಕಸ್ತೂರಿ, ಮಲ್ಲಿಗೆ, ಮಯೂರ ಮೊದಲಾದ ಪತ್ರಿಕೆಗಳನ್ನು ಓದಿದರು. ಕನ್ನಡದ ಶ್ರೇಷ್ಠ ಕಾಂದಬರಿಕಾರರೆಂದು ಹೆಸರಾದ ಅ.ನ.ಕೃ, ಎಸ್. ಎಲ್. ಭೈರಪ್ಪ, ಅನುಪಮ ನಿರಂಜನ, ತ್ರಿವೇಣಿ, ಎಂ.ಕೆ. ಇಂದಿರಾ, ಕೃಷ್ಣಮೂರ್ತಿ ಪುರಾಣಿಕ, ಯು. ಆರ್. ಅನಂತಮೂರ್ತಿಯವರ ಕಾದಂಬರಿಗಳನ್ನು ಅಧ್ಯಯನ ಮಾಡಿದ್ದಾರೆ. ಪ್ರಮೀಳಮ್ಮನವರು ತ್ರಿವೇಣಿಯವರ ಎಲ್ಲಾ ಕಾದಂಬರಿಗಳನ್ನು ಓದಿದ್ದಾರಂತೆ. ಅವರ ಅಚ್ಚುಮೆಚ್ಚಿನ ಜನಪ್ರಿಯ ಕಾದಂಬರಿಕಾರರೆಂದರೆ ಡಾ॥ ಎಸ್.ಎಲ್. ಭೈರಪ್ಪನವರು. ಅವರ ಬಹಳಷ್ಟು ಕಾದಂಬರಿಗಳನ್ನು ಓದಿದ್ದನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ನಾನು ಪ್ರಮೀಳಮ್ಮನವರ ಮನೆಗೆ ವಿಷಯ ಸಂಗ್ರಹಿಸಿ ಹೋದಾಗ ಭೈರಪ್ಪನವರ 'ಪರ್ವ' ಕಾದಂಬರಿ ಇದ್ದುದನ್ನು ಕಂಡೆ.

ಕುತೂಹಲದಿಂದ ನಾನು ಈ ಕಾದಂಬರಿ ಇಲ್ಲಿಗೆ ಏಕೆ ಬಂತು? ಇದು ಯಾರ ಪುಸ್ತಕ? ಇದನ್ನು ಯಾರು ಓದುತ್ತೀರಿ? ಎನ್ನುವ ಪ್ರಶ್ನೆಗಳನ್ನು ಕೇಳಿದಾಗ ಪ್ರಮೀಳಮ್ಮನವರು ಓದುವ ಪ್ರವೃತ್ತಿಯನ್ನು ಬೆಳೆಸಿಕೊಂಡು ಬಂದ ವಿಷಯವನ್ನು ವಿವರಿಸಿದರು.

ಈ ಬಡಕಲಾವಿದೆಯರು ಇಷ್ಟೊಂದು ಸಾಹಿತಿಗಳ ಗ್ರಂಥಗಳನ್ನು ಓದಲು ಹೇಗೆ ಸಾಧ್ಯವಾಯಿತೆಂದರೆ- ಅವರ ಮನೋಜ್ಞ ಅಭಿನಯವನ್ನು ಕಂಡು ಮೆಚ್ಚಿಕೊಂಡ ಆಯಾ ನಗರದ ಪುಸ್ತಕ ಅಂಗಡಿಯ ಮಾಲೀಕರು ಅವರಿಗೆ ಪುಕ್ಕಟೆಯಾಗಿ ಪುಸ್ತಕವನ್ನು ಓದಲು ಕೊಡುತ್ತಿದ್ದರಂತೆ. ಪ್ರಮೀಳಾ, ಜಯಲಕ್ಷ್ಮಿ, ಶಶಿಪ್ರಭಾ ಮೂವರು ತಮ್ಮ, ತಮ್ಮ ಹೆಸರಿಗೆ ಒಂದೊಂದು ಪುಸ್ತಕವನ್ನು ಹಚ್ಚಿಕೊಂಡು ಬೇಗಬೇಗನೆ ಅವನ್ನು ಓದಿಮುಗಿಸಿ, ತಮ್ಮಲ್ಲಿಯೇ ಅದಲು-ಬದಲು ಮಾಡಿಕೊಳ್ಳುತ್ತದ್ದರಂತೆ. ಅವರು ಪುಸ್ತಕಗಳನ್ನು ಓದುವ ಹುಚ್ಚನ್ನು ಕಂಡು ಸಹಕಲಾವಿದರು, ಜನರು 'ಇವರು ಬಿ.ಎ. ಮಾಡಕ ಹತ್ಯಾರ್ರೀ, ಅದ್ಕ ಇಷ್ಟ ಓದತಾರ್ರೀ ..... ಎಂದು ನಗೆಯಾಡುತ್ತಿದ್ದರಂತೆ.

ಜಾತಿ-ಧರ್ಮದಿಂದ ಪ್ರಮೀಳಮ್ಮ ಮುಸ್ಲಿಮರಾದರೂ ಅವರ ಹೆಸರು (ಪ್ರಮೀಳಾ), ಭಾಷೆ, ಆಚಾರ-ವಿಚಾರಗಳು, ಉಡುಗೆ-ತೊಡುಗೆಗಳು ಅವರು ಮುಸ್ಲಿಮೇತರರು ಎನ್ನುವಂತಿದ್ದವು. ಅವರು ಹುಟ್ಟಿದ ಮತ್ತು ಬೆಳೆದ ಪರಿಸರಗಳು ಇದಕ್ಕೆ ಸಾಕ್ಷಿಯಾಗಿವೆ. ಫಾತೀಮಾ, ಪ್ರಮೀಳಾ ಎಂದೇ ಚಿರಪರಿಚಿತವಾದುದು. ಜಾತ್ಯಾತೀತ ಮನೋಭಾವದ ಅವರು ಎಲ್ಲ ಜಾತಿಗಳನ್ನು, ಸಮಸ್ತ ದೇವರುಗಳನ್ನು ಸಮಾನವಾಗಿ ಕಂಡು ಪ್ರೀತಿಸಿ, ಗೌರವಿಸಿದವರು. ದೇವರು ಧರ್ಮಗಳಲ್ಲಿ ಅತಿಯಾದ ನಂಬಿಕೆಯುಳ್ಳ ದೈವಭಕ್ತೆಯಾಗಿದ್ದರು. ಇದಕ್ಕೆ ಒಂದು ದೃಷ್ಟಾಂತವನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ.

ಸುಮಾರು ಹತ್ತು ವರ್ಷಗಳ ಹಿಂದೆ ಇರಬಹುದು. ಆಗ ಪ್ರಮೀಳಾ ಅವರಿಗೆ ಯಾವುದೇ ವೃತ್ತಿ ಕಂಪನಿಯಿಂದಾಗಲಿ, ಹವ್ಯಾಸಿ ಸಂಸ್ಥೆಯಿಂದಾಗಲಿ ಅಭಿನಯಿಸಲು ಕರೆ (ಆಹ್ವಾನ) ಬರಲಿಲ್ಲ. 'ಕಲೆಯನ್ನೇ ಜೀವನ' ಎಂದು ನಂಬಿಕೊಂಡಿದ್ದ ಅವರಿಗೆ ಬರಸಿಡಿಲೆರಗಿದಂತಾಯಿತು. ಅದಕ್ಕಾಗಿ ಬಹುನೊಂದು ಬೆಂದು ಕರಗಿ ಹೋಗಿದ್ದ ಪ್ರಮೀಳಮ್ಮನವರು 'ಮಾರಮ್ಮದೇವಿ'ಯ ದರ್ಶನಕ್ಕೆ ಮುಂದಾದರು. ಗುಡೂರಿನ ಸಮೀಪದ ಹೊಲವೊಂದರಲ್ಲಿ ಮಾರಮ್ಮನ ಮೂರ್ತಿಯಿದೆ. ಅದರ ಮಹಿಮೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಪ್ರಚಾರದಲ್ಲಿದೆ. ಆ ದೇವಿಯ ದರ್ಶನದಿಂದ ಅನೇಕರ ಸಮಸ್ಯೆಗಳು ಇಲ್ಲವಾಗಿ ಸುಖ-ಸಂತೋಷಗಳು ಲಭಿಸಿದ್ದವು. ತಮ್ಮ ಸಮಸ್ಯೆಗೆ ಪರಿಹಾರ ಸಿಗಬಹುದೆಂಬ ವಿಶ್ವಾಸದಿಂದ ಪ್ರಮೀಳಮ್ಮ ಒಂದು ದಿನ ಬಸಪ್ಪ ಎನ್ನುವ ಪರಿಚಿತ ವ್ಯಕ್ತಿಯೊಂದಿಗೆ ಮಾರಮ್ಮನ ಸನ್ನಿಧಿಗೆ ಹೋಗಿ "ತಾಯಿ ಮಾರಮ್ಮ ನನಗೆ ಇಷ್ಟು ಕಷ್ಟ ಏಕೆ ತಂದಿರುವೆ. ಪಾತ್ರಗಳು ಸಿಗದೆ ಮನೆಯಲ್ಲಿ ಹೇಗೆ ಕುಳಿತುಕೊಳ್ಳುವುದು.

ನನಗೆ ಪಾತ್ರಗಳು ಸಿಗುವಂತೆ ಆಶೀರ್ವದಿಸು. ಇಲ್ಲದಿದ್ದರೆ ಸಾವನ್ನಾದರೂ ತಂದುಬಿಡು" ಎಂದು ಬೇಡಿಕೊಂಡಳಂತೆ. ದೇವಿಯ ದರ್ಶನ ಪಡೆದುಕೊಂಡು ಬಂದ ಕೆಲವೇ ದಿನಗಳಲ್ಲಿ ಅಭಿನಯಿಸಲು ಪಾರ್ಟುಗಳು ಲಭಿಸಿದವು. ಅಲ್ಲದೆ, ತಂಗಿ ಮಮತಾಳೊಂದಿಗೆ ಬೆಂಗಳೂರಿಗೆ ಹೋಗಿ ಅಭಿನಯಿಸುವ ಅವಕಾಶಗಳು ಒದಗಿಬಂದವು.

ಸಿನೇಮಾ ನೋಡುವ ಹುಚ್ಚು ಹವ್ಯಾಸ ಹೆಚ್ಚಿತ್ತು. ಒಳ್ಳೆಯ ಕಥಾ ವಸ್ತುವನ್ನುಳ್ಳ ಕನ್ನಡ, ಹಿಂದಿ ಚಲನಚಿತ್ರಗಳನ್ನು ನೋಡಿಕೊಂಡು ಹೋಗಿ ತಮ್ಮ ಪಾತ್ರಗಳನ್ನು ಮಾಡುತ್ತಿದ್ದರು. ಬಿಡುವಿನ ಸಮಯದಲ್ಲೂ ಸಿನೇಮಾ ನೋಡುತ್ತಿದ್ದರು. ಪ್ರಮೀಳಮ್ಮನವರು ದಿಲೀಪಕುಮಾರ, ವಹೀದಾ ರೆಹಮಾನ್ ಅಭಿನಯದ 'ದಿಲ್ ದಿಯಾ ದರ್ದ್ ಲಿಯಾ' ಎನ್ನುವ ಹಿಂದಿ ಚಲನಚಿತ್ರವನ್ನು ಇಪ್ಪತ್ತೂ್ಮರು ಬಾರಿ ನೋಡಿದರಂತೆ. ಅವರು ಅದನ್ನು ಅಷ್ಟು ಸಾರಿ ನೋಡಲು ಒಂದು ಅದ್ಭುತತನ ಕಾರಣವಾಗಿತ್ತು. ಅದೇನೆಂದರೆ, ಚಿತ್ರದ ನಾಯಕ ದಿಲೀಪಕುಮಾರ ಅವರ ಸಂಭಾಷಣೆಗೆ ತಕ್ಕಂತೆ ನಾಯಕಿ ವಹೀದಾ ಮುಖದ ಭಾವನೆಗಳನ್ನು ವ್ಯಕ್ತಪಡಿಸುತ್ತಿದ್ದಳಂತೆ. ಒಬ್ಬರ ಡೈಲಾಗ್‌ಗೆ ಮತ್ತೊಬ್ಬರು ಹೇಗೆ ತಮ್ಮ ಮುಖಭಾವನೆಗಳನ್ನು ಪ್ರಕಟಿಸಬೇಕೆಂಬುದಕ್ಕೆ ಉತ್ತಮ ನಿದರ್ಶನವಾಗಿತ್ತು ಆ ಚಿತ್ರ, ಅದನ್ನು ವೀಕ್ಷಿಸಿದ ಗದುಗಿನ ಎಚ್.ಟಿ. ಮಹಾಂತೇಶಶಾಸ್ತ್ರಿಗಳು ತಮ್ಮ ಶಿಷ್ಯ ಕಲಾವಿದರಿಗೆ ಈ ಚಿತ್ರವನ್ನು ನೋಡಿಕೊಂಡು ಬಂದು ಅಭಿನಯಿಸಿರಿ ಎಂದು ಹೇಳುತ್ತಿದ್ದರಂತೆ. ಅಂತೆಯೇ ಅವರ ಪ್ರಿಯ ಶಿಷ್ಯಳಾದ ಪ್ರಮೀಳಮ್ಮ ಆ ಚಿತ್ರವನ್ನು ಇಪ್ಪತ್ತೂ್ಮರು ಸಲ ನೋಡಿದರಂತೆ, ಅದರಿಂದ ತಮ್ಮ ನಟನೆಗೆ ತುಂಬಾ ಸಹಾಯವಾಯಿತೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಜೊತೆಗೆ ದಿಲೀಪಕುಮಾರ, ಮನೋಜಕುಮಾರ ಹಾಗೂ ವಹೀದಾ ನಟಿಸಿದ 'ಆದ್ಮಿ' ಸಿನೇಮಾವನ್ನು ಹತ್ತೊಂಬತ್ತು ಸಲ ನೋಡಿ ಪ್ರಭಾವಿತರಾದರಂತೆ. ತಾವು ಒಳ್ಳೆಯ ನಟಿಯಾಗಿ ಹೊರಹೊಮ್ಮಲು ಪ್ರೇರಣೆ ನೀಡಿದ ದಿಲೀಪಕುಮಾರ್, ವಹೀದಾ ಅವರ ಸಿನೇಮಾದ ಪಾತ್ರಗಳನ್ನು ನೆನಪಿಸಿಕೊಳ್ಳುತ್ತಾರೆ.

ಕನ್ನಡ ಚಿತ್ರರಂಗದ ದಿಗ್ಗಜ ತಾರೆಯರಾದ ಕಲ್ಪನಾ, ಜಯಂತಿ ಅವರ ಪಾತ್ರಗಳು ಪ್ರಮೀಳಾ ಅವರಿಗೆ ಸ್ಫೂರ್ತಿ ನೀಡಿದವಂತೆ. ಬೆಳ್ಳಿಮೋಡ, ಶರಪಂಜರ, ಚಿತ್ರಗಳ ಕಲ್ಪನಾ ಅವರ ಮನಮೋಹಕ ನಟನೆ ಇವರ 'ಸತಿಪತಿ' ನಾಟಕದ 'ಸುಶೀಲಾ' ಪಾತ್ರಕ್ಕೆ ಸ್ಫೂರ್ತಿಯಾಗಿತ್ತು. ಸುಶೀಲಾ ಪಾತ್ರದಲ್ಲಿ ಕಾಣಿಸಿಕೊಂಡ ಪ್ರಮೀಳಮ್ಮನವರ ನಟನೆ ಚಿತ್ರತಾರೆ ಕಲ್ಪನಾ ಅವರ ಅಭಿನಯದಂತಿತ್ತು. ಅದಕ್ಕಾಗಿ ಪ್ರೇಕ್ಷಕರು ಪ್ರಮೀಳಾ ಅವರನ್ನು ಕಲ್ಪನಾ, ಕಲ್ಪನಾ. . . ಎಂದು ಕೂಗಿ ಚಪ್ಪಳೆ, ಸಿಳ್ಳೆ ಹಾಕುತ್ತಿದ್ದರಂತೆ. ಕಲ್ಪನಾ

ಅಲ್ಲದೆ ಜಯಂತಿ ಅವರ 'ಎರಡುಮುಖ' ಚಿತ್ರದ ಪಾತ್ರಾಭಿನಯವು ಪ್ರಮೀಳಮ್ಮನವರ ಮೇಲೆ ಗಾಢವಾದ ಪ್ರಭಾವ ಬೀರಿದೆ.

ಇಲ್ಲಿ ಹೆಸರಿಸಿದ ಕನ್ನಡ ಮತ್ತು ಹಿಂದಿ ಚಿತ್ರರಂಗದ ಮೇರುನಟಿಯರ ಅಭಿನಯವನ್ನು ಕಂಡು ಮೆಚ್ಚಿ, ಅವರ ಹಾವಭಾವ, ಆಂಗಿಕಾಭಿನಯವನ್ನು ತಮ್ಮ ನಟನೆಯಲ್ಲಿ ಅನುಸರಿಸಿಕೊಂಡು ಅವರಂತೆ ನಟಿಸಿ ಹೆಸರಾದವರು.

ಕಲಾವಿದೆಯಾಗಿ ರಂಗಸೇವೆಗೈಯುವುದರ ಮೂಲಕ ಕನ್ನಡ ನಾಡಿನ ಸಾಂಸ್ಕೃತಿಕ ಲೋಕಕ್ಕೆ ಅವಿಸ್ಮರಣೀಯ ಕೊಡುಗೆಗಳನ್ನು ನೀಡಿದ ಪ್ರಮೀಳಮ್ಮನವರು 'ಜಲಜಾಥಾ' ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಸಸಿಗಳನ್ನು ನೆಟ್ಟು ಪರಿಸರ ಪ್ರೇಮವನ್ನು ಮೆರೆಯುವದರೊಂದಿಗೆ ಸಮಾಜ ಸೇವೆ ಮಾಡಿದ್ದಾರೆ. ಇಳಿವಯಸ್ಸಿನಲ್ಲೂ ಅವರ ಸಮಾಜಸೇವಾ ಕೈಂಕರ್ಯ ಮೆಚ್ಚಬೇಕಾದುದು, ಇಂದಿನ ಯುವ ಪೀಳಿಗೆಗೆ ಅದು ಅನುಕರಣೀಯವಾಗುವಂಥದ್ದು.

ಬಾಗಲಕೋಟೆ ಜಿಲ್ಲಾ ಆಡಳಿತವು ಕೇಂದ್ರನಗರಾಭಿವೃದ್ಧಿ ಕೋಶ, ನಿರ್ಮಿತಿ ಕೇಂದ್ರ ಮತ್ತು ನಿರಂತರ ಫೌಂಡೇಶನ್ ಮೈಸೂರು ಇವುಗಳ ಸಂಯುಕ್ತಾಶ್ರಯದಲ್ಲಿ ಬಾಗಲಕೋಟೆಯಲ್ಲಿ ದಿ.೧೬-೦೬-೨೦೦೫ರಿಂದ ೨೭-೦೬-೨೦೦೫ರವರೆಗೆ 'ಮಳೆನೀರು ಸಂಗ್ರಹಣೆ ಮತ್ತು ಅದರ ಸದ್ಬಳಕೆ' ಕುರಿತು 'ಜಲಜಾಥಾ' ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಆಗ ಬಾಗಲಕೋಟೆ ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಕೆ. ಎಸ್. ಪ್ರಭಾಕರ ಅವರು ಮಳೆ ನೀರಿನ ಸಂಗ್ರಹಣೆ ಮತ್ತು ಅದರ ಸದ್ಬಳಕೆಯ ಕುರಿತು ಬೀದಿನಾಟಕಗಳನ್ನು ಬರೆಯಿಸಿ, ಅವುಗಳನ್ನು ರಬಕವಿ, ಬನಹಟ್ಟಿ, ಜಮಖಂಡಿ, ಬಾಗಲಕೋಟೆ ಮೊದಲಾದ ಕಡೆಗಳಲ್ಲಿ ಪ್ರದರ್ಶಿಸಿದರಂತೆ. ಆ ಸಂದರ್ಭದಲ್ಲಿ ಪ್ರಮೀಳಮ್ಮನವರಿಗೆ ಯಾವ ಕಂಪನಿಯಲ್ಲೂ ಅವಕಾಶ ಸಿಗದೆ ಮನೆಯಲ್ಲಿಯೇ ಇದ್ದರು. ತುತ್ತಿನಚೀಲ ತುಂಬಿಸಿಕೊಳ್ಳುವುದಕ್ಕಾಗಿ ಬಾಗಲಕೋಟೆಗೆ ಬಂದು ಆ ಜಾಗೃತಿಜಾಥಾದಡಿಯಲ್ಲಿ ಸಸಿಗಳನ್ನು ನೆಡುತ್ತಿದ್ದರು. ಒಂದು ದಿನ ಜಿಲ್ಲಾಧಿಕಾರಿಗಳಾದ ಶ್ರೀ ಕೆ. ಎಸ್. ಪ್ರಭಾಕರ ಅವರು ವೃದ್ಧೆ ಪ್ರಮೀಳಮ್ಮ ಸಸಿ ಹಚ್ಚುವುದನ್ನು ಕಂಡು ಹತ್ತಿರ ಬಂದು ಯಾಕಮ್ಮ ಈ ವಯಸ್ಸಿನಲ್ಲಿ ಗಿಡ ಹಚ್ಚಲು ಬಂದಿರುವೆ ಎಂದು ಪ್ರಶ್ನಿಸಿದರಂತೆ. ಆಗ ಪ್ರಮೀಳಮ್ಮನವರು 'ನನಗೆ ದುಡಿದು ಹಾಕುವ ಗಂಡಸು ಮಕ್ಕಳಿಲ್ಲ. ಕೇವಲ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. ಅವರಿಬ್ಬರ ವಿವಾಹವಾಗಿದೆ. ಅದಕ್ಕಾಗಿ ಈಗ ನನ್ನ ಹೊಟ್ಟೆಯನ್ನು ನಾನೇ ದುಡಿದು ತುಂಬಿಸಿಕೊಳ್ಳಬೇಕಾಗಿದೆ. ವಯಸ್ಸು ಆದ ಕಾರಣ ನನಗೆ ಅಭಿನಯಿಸಲು ಯಾರೂ ಅವಕಾಶ ಕೊಡುತ್ತಿಲ್ಲ. ಅದಕ್ಕಾಗಿ ಈ ಕೆಲಸ. ಎರಡು ಹೊತ್ತಿನ ಊಟ ಸಿಕ್ಕರೆ ಸಾಕು' ಎಂದು ಉತ್ತರಿಸಿದರಂತೆ.

ಅವರ ದುರಂತ ಕಥೆಯನ್ನು ಕೇಳಿದ ಜಿಲ್ಲಾಧಿಕಾರಿಗಳು ಬೀದಿನಾಟಕಗಳಲ್ಲಿ ಅಭಿನಯಿಸಲು ಅವಕಾಶ ನೀಡಿದರಂತೆ. ಪರಿಣಾಮವಾಗಿ ಪ್ರಮೀಳಮ್ಮನವರು ಬೀದಿನಾಟಕಗಳ್ಲಲಿ ನಟಿಸಿ ಜನಜಾಗೃತಿ ಮಾಡುವ ಮೂಲಕ ಸಮಾಜ ಸೇವೆಗೈದರು. ಅದಕ್ಕಾಗಿ ಜಿಲ್ಲಾಧಿಕಾರಿಗಳಿಂದ ಗೌರವ ಸನ್ಮಾನ ಪಡೆದರು.

ಕನ್ನಡ ರಂಗಭೂಮಿಗೆ ಮಹೋನ್ನತ ಕಾಣಿಕೆಗಳನ್ನು ಕೊಟ್ಟ ಆ ಮಹಾನ್ ಕಲಾವಿದೆಗೆ ಅವರೆಗೂ ವೃದ್ಧಾಪ್ಯ ವೇತನ ಬರುತ್ತಿರಲಿಲ್ಲವಂತೆ. ಈ ವಿಷಯ ಕೇಳಿ ಮಮ್ಮಲ ಮರುಗಿದ ಶ್ರೀ ಕೆ. ಎಸ್. ಪ್ರಭಾಕರರು ಇದಕ್ಕಾಗಿ ವಿಶೇಷ ಆಸಕ್ತಿ ವಹಿಸಿ, ಹುನಗುಂದದ ದಂಡಾಧಿಕಾರಿ [ತಹಸೀಲ್ದಾರ]ಗಳಾದ ಶ್ರೀ ಸಿದ್ದಪ್ಪನವರೊಂದಿಗೆ ಮಾತಾಡಿ ಪ್ರಮೀಳಾ ಅವರಿಗೆ ವೃದ್ಧಾಪ್ಯ ವೇತನ ಸಿಗುವಂತೆ ಮಾಡಿದರಂತೆ. ಇದು ನಿಜಕ್ಕೂ ಮಾನವೀಯ ಕೆಲಸ. ಅಂತೆಯೇ ಇದು ಶ್ಲಾಘನೀಯ. ಈ ಕಾರಣಕ್ಕಾಗಿ ಪ್ರಮೀಳಮ್ಮ ಆ ಅಧಿಕಾರಿಗಳನ್ನು ಅತ್ಯಂತ ಗೌರವಾದರಗಳಿಂದ ಸ್ಮರಿಸುತ್ತಾರೆ.

ಕೇವಲ ರಂಗಭೂಮಿಯಲ್ಲಿ ಮಾತ್ರವಲ್ಲದೆ ಸಿನೇಮಾ, ಕಿರುತೆರೆಯ ಧಾರಾವಾಹಿಗಳಲ್ಲಿ ನಟಿಸಿ ತನ್ನ ಪ್ರೌಢಿಮೆ ಮೆರೆದ ಹಿರಿಮೆ ಅವರದು. 'ಗುಲಾಬಿ ಟಾಕೀಸ್', 'ಕಾರಂತ ಅಜ್ಜನಿಗೆ ಬರೆದ ಪತ್ರ' ಎನ್ನುವ ಚಿತ್ರಗಳಲ್ಲಿ ನಟಿಸಿದ ಪ್ರಮೀಳಮ್ಮನವರು 'ಮಹಾನವಮಿ' 'ಮುತ್ತಿನ ತೋರಣ' ಧಾರವಾಹಿಗಳಲ್ಲಿ ಅಭಿನಯಿಸುತ್ತಿದ್ದರು. ಆಗೊಮ್ಮೆ ಗುಡೂರಿಗೆ ಬಂದಿದ್ದರು. 'ಮುತ್ತಿನ ತೋರಣ' ಕಿರುಚಿತ್ರದ ಶೂಟಿಂಗಿಗೆ ಬೆಂಗಳೂರಿಗೆ ಹೋಗಲು ಒಂದು ದಿನ ಸಿದ್ಧವಾಗುತ್ತಿದ್ದಾಗಲೇ ಬಲಪಾರ್ಶ್ವವಾಯುವಿನಿಂದ ಕೈ-ಕಾಲುಗಳ ಶಕ್ತಿ ಕಳೆದುಕೊಂಡರು. ಅದರ ಪರಿಣಾಮ ಧ್ವನಿಯ ಮೇಲೂ ಆಗಿತ್ತು. ಹೀಗಾಗಿ ಮಾತುಗಳು ಅಸ್ಪಷ್ಟವಾಗಿ ಅವರ ರಂಗಬದುಕೇ ನಿಂತುಹೋಯಿತು. ತನ್ನ ಶರೀರದೊಳಗೆ ಪ್ರಾಣ ಇರುವವರೆಗೂ ಕಲಾರಾಧನೆ ಮಾಡಬೇಕೆಂದುಕೊಂಡಿದ್ದ ಪ್ರಮೀಳಮ್ಮ ಅವರ ಆಸೆ ಈಡೇರಲಿಲ್ಲ. ಕಳೆದ ಐದಾರು ವರ್ಷಗಳಿಂದ ಮಗಳು ಅಮೀನಾ, ಅಳಿಯ ಮಹಮ್ಮದ ಮತ್ತು ಮೊಮ್ಮಕ್ಕಳ ಪ್ರೀತಿಯ ಆರೈಕೆಯಲ್ಲಿ ಇದ್ದಾರೆ. ಅವರ ಮನೆಯಲ್ಲಿಯೇ ಇದ್ದರೂ ಮಾನಸಿಕ ನೆಮ್ಮದಿ ಇಲ್ಲದ ಬದುಕು ಅವರದು. ಕಾರಣ, ಪ್ರಮೀಳಮ್ಮನವರಿಗೆ ಸ್ವಂತ ಮನೆಯಿಲ್ಲ. ರಂಗಭೂಮಿಗೆ ಆರುವರೆ ದಶಕಗಳ ಕಾಲ ನಿಃಸ್ವಾರ್ಥ ಸೇವೆ ಸಲ್ಲಿಸಿ, ಮಹೋನ್ನತ ಕೊಡುಗೆಗಳನ್ನು ಕೊಟ್ಟರೂ ಸ್ವತಂತ್ರ ಸೂರು ಇಲ್ಲದ್ದು, ಬೇರೊಬ್ಬರ ಹಂಗಿನಲ್ಲಿ ಇರಬೇಕಾಯಿತಲ್ಲ ಎನ್ನುವ ವ್ಯಥೆ, ಅದಕ್ಕಿಂತ ಹೆಚ್ಚಾಗಿ ಉಸಿರಿರುವವರೆಗೂ ನಟಿಸಬೇಕೆನ್ನುವ ಹೆಬ್ಬಯಕೆ ನೆರವೇರದೆ ಹೋದುದು. ಅದಕ್ಕಾಗಿಯೆ ನಿರಾಸೆಯನ್ನು ಹೊತ್ತು ಜೀವನ ತೆವಳುತ್ತಿದ್ದಾರೆ. ಅವರ ಅಮೋಘ ಸೇವೆಯನ್ನು ಗಮನಿಸಿ ಸರಕಾರ ಹಾಗೂ ಸಂಘ ಸಂಸ್ಥೆಗಳು ಅವರ ಕನಸನ್ನು ನನಸುಗೊಳಿಸಲು ಮುಂದಾಗಬೇಕು. ■

ದೃಶ್ಯ–೩

# ಪ್ರಮೀಳಮ್ಮನವರ ಬಣ್ಣದ ಬದುಕು

**ಕ**ರ್ನಾಟಕ ರಂಗಭೂಮಿಯ ಚರಿತ್ರೆಯಲ್ಲಿ 'ಭಾವ–ಭಾಗ್ಯಶ್ರೀ', 'ಅಭಿನಯ ಕಲಾಧರಿತ್ರಿ', 'ನಾಟ್ಯ ಸರಸ್ವತಿ', 'ಕಲಾರತ್ನ', 'ರಂಗರತ್ನ' ಮೊದಲಾದ ಹತ್ತು ಹಲವಾರು ವಿಶೇಷಣಗಳಿಂದ ಹೆಸರುವಾಸಿಯಾಗಿ, 'ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ' ಮತ್ತು 'ಗುಬ್ಬಿ ವೀರಣ್ಣ ಪ್ರಶಸ್ತಿ'ಯನ್ನು ತಮ್ಮ ಪ್ರತಿಭಾ ಸಿರಿಮುಡಿಗೆ ಮುಡಿಸಿಕೊಂಡ ಬೆಳ್ಳಿ ಚುಕ್ಕೆಯ ಕಲಾವಿದೆಯೆಂದರೆ ಗುಡೂರ ಪ್ರಮ್ಮೀಳಮ್ಮನವರು. ಪ್ರತಿಭಾಕಿರಣವೂ ಕಂಠಸಿರಿಯ ಕಲಾವಿದೆಯು ಆದ ಪ್ರಮೀಳಮ್ಮ ಕನ್ನಡ ನಾಟಕ ರಂಗಭೂಮಿಯ ವಿಶಿಷ್ಟ ಆಸ್ತಿ ಎನಿಸಿದ್ದಾರೆ.

ಕನ್ನಡ ರಂಗಭೂಮಿಯ ಮಹಾನ್ ಕಲಾವಿದೆ, ಕಲಾ ಪ್ರವೀಣೆ ಪ್ರಮೀಳಮ್ಮ ವೃತ್ತಿರಂಗಭೂಮಿ, ಹವ್ಯಾಸಿ ರಂಗಭೂಮಿ, ಕಿರುತೆರೆ(ದೂರದರ್ಶನ)ಯ ಧಾರವಾಹಿ ಹಾಗೂ ಚಲನಚಿತ್ರಗಳಲ್ಲಿ ಅಭಿನಯಿಸಿದ ಶ್ರೇಷ್ಠ ಅಭಿನೇತ್ರಿ. ಯಾವ ಪಾತ್ರಕ್ಕೂ ಸೈ ಎನಿಸುವಂಥ ಅದ್ಭುತ ನಟನಾ ಪ್ರತಿಭೆ ಅವರದು. ಗಾಯಕ ನಟಿಯಾದ ಅವರು ನಾಯಕಿಯಾಗಿ, ಖಳನಾಯಕಿಯಾಗಿ, ಅತ್ತೆಯಾಗಿ, ಸೊಸೆಯಾಗಿ, ತಾಯಿಯಾಗಿ, ಮಗಳಾಗಿ, ಮುದುಕಿಯಾಗಿ ಅಲ್ಲದೆ ಪುರುಷ ಪಾತ್ರಗಳನ್ನು ಸವಾಲಾಗಿ ಸ್ವೀಕರಿಸಿ ಅವುಗಳಿಗೆ ಜೀವ ತುಂಬಿ ನಟಿಸಿ, ಪ್ರೇಕ್ಷಕಾಭಿಮಾನಿಗಳಿಂದ ಮೆಚ್ಚುಗೆ ಪಡೆದ ಪ್ರತಿಭಾವಂತ ಕಲಾವಿದೆ. ರಂಗಭೂಮಿಯಲ್ಲಿ ಸ್ತ್ರೀ–ಪುರುಷ ಪಾತ್ರಗಳಲ್ಲಿ ಮಿಂಚಿದ್ದಲ್ಲದೆ, ಕಿರುತೆರೆಯ ಚಿತ್ರ ಮತ್ತು ಸಿನೇಮಾದಲ್ಲಿಯೂ ಯಶಸ್ಸು ಪಡೆದ ಪ್ರಮೀಳಮ್ಮನವರನ್ನು ಬಹುಮುಖ ಪ್ರತಿಭೆಯ 'ಆಲ್ ರೌಂಡರ್ ಆ್ಯಕ್ಟರ್' ಎಂದು ಕರೆದರೆ ಉತ್ಪ್ರೇಕ್ಷೆಯಾಗಲಾರದು.

ಅಭಿನಯವನ್ನೇ ತಮ್ಮ ಜೀವನದ ಉಸಿರಾಗಿಸಿಕೊಂಡವರು. "ನಟನೆಯೇ ನನ್ನ ಬದುಕಿನ ಬಹುದೊಡ್ಡ ಆಸ್ತಿ, ಅದು ನನಗೆ ಸಮಾದಲ್ಲಿ ಗೌರವ–ಮರ್ಯಾದೆಯನ್ನು, ಮಾನ–ಸನ್ಮಾನವನ್ನು, ಬಿರುದು–ಬಾವಲಿಗಳನ್ನು, ಪ್ರೀತಿ–ಕೀರ್ತಿಯನ್ನು, ಹಿರಿಮೆ–ಗರಿಮೆಯನ್ನು, ಹೆಸರು–ಉಸಿರನ್ನು ತಂದುಕೊಟ್ಟು ಬದುಕನ್ನ ಸಾರ್ಥಕಗೊಳಿಸಿದೆ. ನನ್ನ ಜೀವನ ರೂಪಿಸಿದ, ಬಾಳು ಬೆಳಗಿದ ರಂಗಭೂಮಿ ನನಗೆ ಆರಾಧ್ಯದೈವ. ಪೂಜ್ಯ

ಭಾವನೆಯಿಂದ, ನಿರ್ಮಲ ಭಕ್ತಿಯಿಂದ ಅದನ್ನು ಪೂಜಿಸುವೆ, ನಮಿಸುವೆ, ಸ್ತುತಿಸುವೆ, ಗೌರವಿಸುವೆ" ಎಂದು ತುಂಬಾ ಅಭಿಮಾನದಿಂದ ನುಡಿಯುವ ಪ್ರಮೀಳಮ್ಮನವರು 'ಕಲೆಗಾಗಿ ಜೀವನ, ನಟನೆಗಾಗಿ ಬದುಕು, ಅದುವೇ ಸರ್ವಸ್ವ' ಎನುತ ನಿಃಸ್ವಾರ್ಥದಿಂದ ಅಭಿನಯಿಸಿದ ಅಪೂರ್ವ ಅಭಿನೇತ್ರಿ.

ಮೋಹಕ ತಾರೆ, ರಂಗ ಸಾಮ್ರಾಜ್ಞಿ ಪ್ರಮೀಳಾ ಗುಡೂರು ಅವರು ಕಳೆದ ಆರುವರೆ ದಶಕಗಳಲ್ಲಿ ಕನ್ನಡ ರಂಗಭೂಮಿಯಲ್ಲಿ ಸಂಚಲನವನ್ನು ಮೂಡಿಸಿದ್ದರು. ಆ ಅವಧಿಯಲ್ಲಿ ಅವರು ನಾಟಕ ಕ್ಷೇತ್ರಕ್ಕೆ ಕೊಟ್ಟ ಕೊಡುಗೆಗಳು, ಮಾಡಿದ ಸಾಧನೆಗಳು ಅವಿಸ್ಮರಣೀಯ, ಅನುಕರಣೀಯವಾದವುಗಳು. ಪ್ರಮೀಳಾ ಅವರ ಬಣ್ಣದ ಬದುಕಿನ ಯಶೋಗಾಥೆ ನಿಜಕ್ಕೂ ಅದ್ಭುತವಾದುದು.

ಪ್ರಮೀಳಮ್ಮನವರು ಬಣ್ಣದ ಬದುಕಿಗೆ ಕಾಲಿಡಲು ಅವರ ಮನೆತನದ ಬಡತನ ಒಂದೆಡೆ ಕಾರಣವಾದರೆ, ಮತ್ತೊಂದೆಡೆ ಅವರ ಆಸಕ್ತಿ ಕಾರಣ. ಪ್ರಮೀಳಮ್ಮನವರ ದಾದಿ(ಅಜ್ಜಿ) ಶಕೀಲಾ ಬಾನು (ಶಕುಂತಲಾ) ಗರುಡ ಸದಾಶಿವರಾಯರ ನಾಟಕ ಕಂಪನಿಯಲ್ಲಿ ಅಭಿನಯಿಸುತ್ತಿದ್ದರು. ಈ ವಿಷಯವಾಗಿ ಅಜ್ಜಿ ಹೇಳಿದ್ದನ್ನು ಕೇಳಿ ತಾನು ಅಭಿನಯಿಸಬೇಕೆನ್ನುವ ಆಸೆ ಹುಟ್ಟಿಕೊಂಡುದು. ಬಾಗಲಕೋಟೆಯಲ್ಲಿ ಸೋದರತ್ತೆಯರಾದ ಸುಶೀಲಮ್ಮ, ತಾರಮ್ಮರ ಹತ್ತಿರವಿದ್ದು ಓದುತ್ತಿರುವಾಗ ಅಲ್ಲಿ ಬೆಳವಣಕಿ ಸಂಗಪ್ಪನವರ ವೃತ್ತಿ ಕಂಪನಿ ಕ್ಯಾಂಪ್ ಮಾಡಿತ್ತು. ಆ ನಾಟಕ ಮಂಡಳಿಯವರು ಪ್ರದರ್ಶಿಸಿದ 'ಸುವರ್ಣ' ನಾಟಕವನ್ನು ನೋಡಲು ಸೋದರತ್ತೆಯವರೊಂದಿಗೆ ಹೋಗಿದ್ದರು. ಗದಗ ಮೂಲದ ಪಾರ್ವತಮ್ಮ, ಬಸವಣ್ಣೆಮ್ಮ, ಸುಮಿತ್ರಮ್ಮ ಕುಂದಾಪುರ, ಲಕ್ಷ್ಮೇಶ್ವರದ ಶಿವಯ್ಯ ಮೊದಲಾದವರು ಅದರಲ್ಲಿ ನಟಿಸಿದ್ದರು. ಅವರ ಮನಮೋಹಕ ಅಭಿನಯ, ಪಾತ್ರಗಳ ವೈವಿಧ್ಯತೆ, ಒಂದೇ ಬಣ್ಣದ ಸೀರೆ, ಜಂಪರ್, ಬಳೆಗಳನ್ನು ಹಾಕಿಕೊಂಡು ನಟಿಸುವ ನಟಿಯರನ್ನು ಕಂಡು ತಾನು ಅವರಂತೆ ಪಾತ್ರಧಾರಿಯಾಗಿ ನಟಿಸಬೇಕು ಎನ್ನುವ ಉತ್ಕಟ ಆಸೆ ಮನಸ್ಸಿನಲ್ಲಿ ಮೊಳೆದೋರಿತು. ಆಗ ಅವರಿಗೆ ಒಂಬತ್ತು ಅಥವಾ ಹತ್ತು ವರ್ಷ. ಆ ವಯಸ್ಸಿಗಾಗಲೇ ಅವರು ನೃತ್ಯ ತರಬೇತಿ ಪಡೆದು ಶಾಲಾ ಕಾರ್ಯಕ್ರಮಗಳಲ್ಲಿ ಡಾನ್ಸ್ ಮಾಡುತ್ತಿದ್ದರು. ಅಲ್ಲದೆ ಬಣ್ಣ ಹಚ್ಚಿ ಕೆಲ ಕಂಪನಿಗಳಲ್ಲಿ ನಾಟ್ಯ ಮಾಡಿದರು.

ಹೀಗಿದ್ದಾಗ ಬಾಗಲಕೋಟೆ ಪಕ್ಕದ ಭಗವತಿ ಗ್ರಾಮದಲ್ಲಿ ಹವ್ಯಾಸಿ ಕಂಪನಿಯೊಂದರಲ್ಲಿ ಎಚ್.ಎನ್. ಹೂಗಾರ ಕವಿಗಳು ರಚಿಸಿದ 'ಕಮಲಾಕ್ಷಿ' ನಾಟಕವನ್ನು ಆಡುತ್ತಿದ್ದರು. ಸ್ನೇಹಿತೆ ಮಾಲಾ ಅದರಲ್ಲಿ ನೃತ್ಯ ಮಾಡುತ್ತಿದ್ದಳು. ಆ ನೃತ್ಯ ಕಲಾವಿದೆ ಗೆಳತಿ ಪ್ರಮೀಳಾಳನ್ನು ನೋಡಲು ಕರೆದುಕೊಂಡು ಹೋದಳು. ಡಾನ್ಸ್ ನೋಡಲು ಹೋದ ಪ್ರಮೀಳಮ್ಮ ಅವರಿಗೆ ನಾಟಕದ ಪ್ರಧಾನ ಪಾತ್ರ 'ಕಮಲಾಕ್ಷಿ'ಯಾಗಿ

ಪಾತ್ರಮಾಡುವ ಸುಯೋಗ ಒದಗಿ ಬಂತು. ಪಾತ್ರವನ್ನು ಅದ್ಭುತವಾಗಿ ಮಾಡಿ ಹೂಗಾರ ಕವಿಗಳ ಮೆಚ್ಚುಗೆಗೆ ಪಾತ್ರರಾದರು. ಆಗ ಅವರ ವಯಸ್ಸು ಕೇವಲ ಹನ್ನೊಂದು (೧೧ವರ್ಷ). ಇಷ್ಟೊಂದು ಸಣ್ಣ ವಯಸ್ಸಿನಲ್ಲಿಯೇ ಪ್ರಮೀಳಾ ಅವರ ನಾಟಕ ಜೀವನ ಪ್ರಾರಂಭವಾಯಿತು. ಹವ್ಯಾಸಿ ಕಂಪನಿಯ ಮೂಲಕ ರಂಗಭೂಮಿಗೆ ಪಾದಾರ್ಪಣೆ ಮಾಡಿದರು.!

ಕೆಲದಿನಗಳ ನಂತರ ಹಿರೇಮಾಗಿಯ ಅಮೆಚೂರ ಕಂಪನಿಯಲ್ಲಿ ಡಿ. ದುರ್ಗಾದಾಸರು ಬರೆದ 'ನಿರ್ಮಲಾ' ನಾಟಕವನ್ನು ಪ್ರಯೋಗಿಸಿದರಂತೆ. ಆ ನಾಟಕದಲ್ಲಿ ಪ್ರಮೀಳಾ 'ನಿರ್ಮಲಾ'ಳ ಪಾತ್ರವನ್ನು ಕಿರಿಯ ವಯಸ್ಸಿನಲ್ಲಿ ಅತ್ಯಂತ ಹೃದಯಸ್ಪರ್ಶಿಯಾಗಿ, ಮನೋಜ್ಞವಾಗಿ ನಟಿಸಿ, ಪ್ರೇಕ್ಷಕರ, ಜನರ ಮನಸ್ಸನ್ನು ಗೆದ್ದರು. ಆಗ ತಿಂಗಳಿಗೆ ೪೦ ರೂಪಾಯಿಗಳನ್ನು ಸಂಬಳವಾಗಿ ಪಡೆಯುತ್ತಿದ್ದರು ಪ್ರಮೀಳಮ್ಮ.

## 'ವಸಂತಕಲಾ ನಾಟ್ಯ ಸಂಘ, ಗದಗ'

೧೯೫೮ರಲ್ಲಿ ವಸಂತಸಾ ನಾಕೋಡ ಅವರ ಕಂಪನಿಯನ್ನು ಸಿದ್ದಾಪುರ ಕ್ಯಾಂಪಿನಲ್ಲಿ ಪ್ರವೇಶಿಸಿದರು. ಈ ನಾಟಕ ಮಡಳಿಯ ಮೂಲಕ ವೃತ್ತಿರಂಗಭೂಮಿಗೆ ಪಾದಾರ್ಪಣೆ ಮಾಡಿದರು. ಇಲ್ಲಿಂದಲೇ ಪ್ರಮೀಳಮ್ಮನವರ ವೃತ್ತಿ ಬದುಕು ಆರಂಭವಾಯಿತು. ವಸಂತಸಾ ನಾಕೋಡ, ಅರ್ಜುನಸಾ ನಾಕೋಡ ಹಾಗೂ ಸುರೇಂದ್ರಸಾ ನಾಕೋಡ ಸಹೋದರರು ಶ್ರೇಷ್ಠ ಹಾಡುಗಾರರು. ಅರ್ಜುನಸಾ ನಾಕೋಡರು ಗವಾಯಿಗಳೆಂದು ಖ್ಯಾತರಾಗಿದ್ದರು. ಪ್ರಮೀಳಮ್ಮಗೆ ಅವರ ಬಳಿ ಸಂಗೀತ ಕಲಿಯಬೇಕೆಂಬ ಅಪೇಕ್ಷೆ. ಅಂತೆಯೇ ಅರ್ಜುನಸಾ ನಾಕೋಡರ ಶಿಷ್ಯಳಾಗಿ ಐದಾರು ತಿಂಗಳ ಕಾಲ ಅವರಿಂದ ಸಂಗೀತ ವಿದ್ಯೆಯನ್ನು ಕಲಿತರು.

ನಾಕೋಡ ಸಹೋದರರ ಕಂಪನಿಯಲ್ಲಿ ಕಂದಗಲ್ಲ ಹನುಮಂತರಾಯರ 'ರಕ್ತರಾತ್ರಿ' ನಾಟಕದ ಪಾರ್ವತಿ, ಬಸವಲಿಂಗ ಶಾಸ್ತ್ರಿಗಳ 'ರೇಣುಕಾ' ನಾಟಕದ ಪಾರ್ವತಿ, ಮಾರುತೇಶ ಮಾಂಡ್ರೆ ಅವರ 'ಸ್ತ್ರೀರತ್ನ' ನಾಟಕದ ಪುಷ್ಪಾ ಈ ಪಾತ್ರಗಳನ್ನು ಅಮೋಘವಾಗಿ ನಟಿಸಿದರು. ಅಲ್ಲದೆ 'ಸೌಭಾಗ್ಯ ಲಕ್ಷ್ಮಿ'ಯ ಶಾರದಾ, 'ನಾರಿ ಸಾಹಸ'ದ ದೇವಿ, 'ಹೇಮರಡ್ಡಿ ಮಲ್ಲಮ್ಮ' ನಾಟಕದ ಚಿತ್ರರಂಜನಿ– ಮೊದಲಾದ ಪಾತ್ರಗಳು ಅವರಿಗೆ ಹೆಸರು ತಂದವು. ನಾಕೋಡ ಸಹೋದರರು ಪ್ರಮೀಳಾಗೆ ಗಿಣಿಪಾಠದಂತೆ ಹೇಳಿಕೊಡುತ್ತಿದ್ದರಂತೆ. ತಪ್ಪಿದಾಗ ಬೈದು ಬುದ್ಧಿಹೇಳುತ್ತಿದ್ದರಂತೆ.

'ವಸಂತ ಕಲಾ ನಾಟ್ಯ ಸಂಘ'ದಲ್ಲಿ ತಾರಮ್ಮ, ಮನೋಹರಮ್ಮ, ವಾಸಪ್ಪ, ರಿಕ್ತಿರಾಮಣ್ಣ, ಹುಸೇನಸಾಬ ಮೊದಲಾದ ನಟ–ನಟಿಯರು ಇದ್ದರು. ತಾರಮ್ಮ ಇವರೆ ಪ್ರಮೀಳಾ ಅವರಿಗೆ ಮೊದಲು ಬಣ್ಣ ಹಚ್ಚಿದ್ದು, ತಾರಮ್ಮಕ್ಕನ ಮಗನಾದ ರಾಜು

ಪುಂಡಲೀಕನೆ ಜ್ಯೂನಿಯರ್ ವಿಷ್ಣುವರ್ಧನ ಎಂದು ಖ್ಯಾತನಾಗಿದ್ದಾನೆ. ಎಲ್ಲ ಕಲಾವಿದರೊಂದಿಗೆ ಉತ್ತಮವಾಗಿ ನಟಿಸಿದರು. 'ನಾರಿ ಸಾಹಸ' ನಾಟಕದಲ್ಲಿ ಪ್ರಮೀಳಾ ಅವರದು ದೇವಿಯ ಪಾತ್ರ. ಅದರಲ್ಲಿ ಮಹಾರಾಣಿಯೇ ಮಹಾರಾಜನನ್ನು ಕೊಲೆ ಮಾಡುವ ಸಂಚು ರೂಪಿಸಿರುತ್ತಾಳೆ. ಈ ವಿಷಯ ದಾಸಿಯಾದ ದೇವಿ(ಪ್ರಮೀಳಾ)ಗೆ ತಿಳಿದು ಅರಸನನ್ನು ಕೊಲೆಯಾಗುವ ಗಂಡಾಂತರದಿಂದ ಉಳಿಸುತ್ತಾಳೆ. ಈ ಸನ್ನಿವೇಶದಲ್ಲಿ ಅವರ ಅಭಿನಯ ಅಮೋಘವಾಗಿ ಮೂಡಿಬಂದಿದೆ. ಅದಕ್ಕಾಗಿ ದೇವಿಯ ಪಾತ್ರ ಅವರಿಗೆ ಹೆಸರು ತಂದಿದೆ. ಮಾಲೀಕರ ಪ್ರೀತಿಗೆ ಪಾತ್ರವಾಗುವಂತೆ ಮಾಡಿತು.

ನಾಕೋಡರ ಮಂಡಳಿಯಲ್ಲಿ ೧೦-೧೧ ತಿಂಗಳು ಪಾತ್ರ ಮಾಡಿದ ಪ್ರಮೀಳಮ್ಮನವರು ಬೇರೊಂದು ಕಂಪನಿಗೆ ಹೋಗಬೇಕಾಯಿತು. ಯಾಕೆಂದರೆ, ನಾಕೋಡ ಸಹೋದರರಲ್ಲಿ ಭಿನ್ನಾಭಿಪ್ರಾಯ, ವೈಮನಸ್ಸು ಉಂಟಾಗಿ ಕಂಪನಿಯನ್ನು ಧಾರವಾಡದ ಪಕ್ಕದ ಕಲಘಟಗಿಯಲ್ಲಿ ಬಂದ್ ಮಾಡಲಾಯಿತು. ಆಗ ಅಲ್ಲಿದ್ದ ನಟ-ನಟಿಯರು ಬೇರೆ ಬೇರೆ ಮಂಡಳಿಗಳಿಗೆ ಹೋಗಬೇಕಾದ ಅನಿವಾರ್ಯ ಸ್ಥಿತಿ ನಿರ್ಮಾಣವಾಯಿತು. ಕಂಪನಿ ಬಂದ್ ಆದ ಕಾರಣ ಸಂಗೀತವನ್ನು ಸಂಪೂರ್ಣವಾಗಿ ಕಲಿಯಲು ಆಗಲಿಲ್ಲ. ಆಗ ಪ್ರಮೀಳಮ್ಮನವರಲ್ಲಿ ಸಂಗೀತ ಕಲಿಯದಿದ್ದರೆ ಏನಾಯಿತು? ನಾಟಕಗಳಲ್ಲಿ ಅಭಿನಯಿಸಿ ಹೌದು ಎನಿಸಿಕೊಳ್ಳಬೇಕೆಂಬ ಹಟ ಬಂದಿತು. ಅಜ್ಜಿ ಶಕುಂತಲಾ ಬೇಡವೆಂದರು ನಾನು ನಟಿಸಿಯೇ ನಟಿಸುತ್ತೇನೆಂದು ಅವರೊಂದಿಗೆ ಜಗಳವಾಡಿ ಮರಳಿ ಊರಿಗೆ ಬರದೆ ಹುಬ್ಬಳ್ಳಿಯಲ್ಲಿ ವಾಸ್ತವ್ಯ ಹೂಡಿದ್ದ ಚಿತ್ತರಗಿ ಗಂಗಾಧರ ಶಾಸ್ತ್ರಿಗಳ ಕಂಪನಿಗೆ ಬಂದರು. ಆ ಸಮಯದಲ್ಲಿ ಮಾಲೀಕರಾದ ಗಂಗಾಧರ ಶಾಸ್ತ್ರಿಗಳು ಊರಲ್ಲಿ ಇರಲಿಲ್ಲ. ಪಡೇಸೂರು ಚನ್ನಪ್ಪನವರು ಅಂದು ಆಕಸ್ಮಿಕವಾಗಿ ಹುಬ್ಬಳ್ಳಿಯಲ್ಲಿ ಬೇಡು ಬಿಟ್ಟಿದ್ದ ಚಿತ್ತರಗಿ ಕಂಪನಿಗೆ ಬಂದಿದ್ರು. ಅವರು ಪ್ರಮೀಳಮ್ಮನವರನ್ನು ನೋಡಿ, ತಮ್ಮ ನಾಟಕ ಮಂಡಳಿಗೆ ಅವರನ್ನು ಬುಕ್ ಮಾಡಿಕೊಂಡು ಹೋದ್ರು, ಹೀಗಾಗಿ ಪ್ರಮೀಳಾ ಅವರು ಚಿತ್ತರಗಿ ಕಂಪನಿ ಸೇರದೆ, ಪಡೇಸೂರಿನ 'ಶ್ರೀ ಯಡೆಯೂರು ಸಿದ್ಧಲಿಂಗೇಶ್ವರ ನಾಟ್ಯ ಸಂಘ'ವನ್ನು ಸೇರುವಂತಾಯಿತು.

## 'ಶ್ರೀ ಯಡೆಯೂರು ಸಿದ್ಧಲಿಂಗೇಶ್ವರ ನಾಟ್ಯ ಸಂಘ' ಪಡೇಸೂರು

ಪಡೇಸೂರು ನಾಟಕ ಮಂಡಳಿಯಲ್ಲಿ ಎನ್. ಹೂಗಾರರು ರಚಿಸಿದ 'ಹಡೆದವ್ವ' ನಾಟಕದಲ್ಲಿ ಮೀರಾ, ಬಿ.ಬಿ. ಬಿಲ್ಲಾರರು ಬರೆದ 'ಅತ್ತೆಸೊಸೆ'ಯಲ್ಲಿ ಉಷಾ, ಕೆ.ಎನ್. ಸಾಳುಂಕೆ ಅವರ 'ಅಕ್ಕ-ತಂಗಿ' ನಾಟಕದ ಸಾವಿತ್ರಿ ಪಾತ್ರಗಳನ್ನು ಅದ್ಭುತವಾಗಿ ಅಭಿನಯಿಸಿದರು. ಈ ನಾಟಕಗಳು ಪಡೇಸೂರು ಕಂಪನಿಯ ಜನಪ್ರಿಯ ನಾಟಕಗಳು.

ಅವುಗಳು ಜನಪ್ರಿಯವಾಗಲು ಪ್ರಮೀಳಮ್ಮನವರ ಮನಮೋಹಕ ನಟನೆಯೂ ಕಾರಣವಾಗಿತ್ತು. ಆ ಮಂಡಳಿಯಲ್ಲಿ ಸುಮಾರು ಒಂದೂವರೆ ವರ್ಷ ಪಾತ್ರ ಮಾಡಿದರು. ಆಗ ಅವರೊಂದಿಗೆ ತಾಯಿ ಇಮಾಮಬಿ ಇದ್ದರು. ಪ್ರಮೀಳಮ್ಮ ಅಲ್ಲಿ ಪ್ರಸಿದ್ಧಿಗೆ ಬರಲು ಅವರ ಏಕಾಗ್ರತೆ, ತಲ್ಲೀನತೆ ಕಾರಣ ಎನ್ನಬೇಕು. ಪ್ರತಿಯೊಂದು ಪಾತ್ರವನ್ನು ಸವಾಲಾಗಿ ಸ್ವೀಕರಿಸುತ್ತಿದ್ದ ಅವರು ತಾವಾಯಿತು, ತಮ್ಮ ಪಾತ್ರವಾಯಿತು, ತಮ್ಮ ನಟನೆಯಾಯಿತು ಎನ್ನುವುದರಲ್ಲಿಯೇ ಮಗ್ನರಾಗಿರುತ್ತಿದ್ದರು ಹೊರತು ಹೊರಗಿನ ವ್ಯವಹಾರಿಕ ಜ್ಞಾನವಿರಲಿಲ್ಲ. ಆ ರೀತಿಯಲ್ಲಿ ಅವರು ತಮ್ಮನ್ನು ಪಾತ್ರಾಭಿನಯಕ್ಕೆ ಸಮರ್ಪಿಸಿಕೊಂಡಿದ್ದರು. ಅದಕ್ಕಾಗಿಯೇ ಅವರ ಪಾತ್ರಗಳು ಯಶಸ್ವಿಯಾಗುತ್ತಿದ್ದವು.

ಮಂಡಳಿಯಲ್ಲಿ ಪ್ರಮೀಳಮ್ಮನವರೊಂದಿಗೆ ಚನ್ನಪ್ಪಣ್ಣ, ಪರಮೇಶಣ್ಣ, ನಿಂಗಪ್ಪಣ್ಣ, ಸಿದ್ದಪ್ಪಣ್ಣ, ಸುಭದ್ರಮ್ಮ, ನೂರಜಾನ ಗದಗ ಮೊದಲಾದ ನಟ–ನಟಿಯರು ನಟಿಸುತ್ತಿದ್ದರು. ಸಂಬಳದ ವಿಷಯದಲ್ಲಿ ಮಾಲೀಕರು ಮತ್ತು ಪ್ರಮೀಳಾ ಅವರ ನಡುವೆ ಬಿನ್ನಾಭಿಪ್ರಾಯ, ವೈಮನಸ್ಸು ಬಂದಿತು. ಅದರ ಪರಿಣಾಮವಾಗಿ ಪ್ರಮೀಳಮ್ಮನವರು ಪಡೇಸೂರು ಕಂಪನಿಯನ್ನು ತೊರೆದು ಹುಟ್ಟೂರಾದ ಗುಡೂರಿಗೆ ಬಂದರು.

ಅವರು ಊರಲ್ಲಿ ಇದ್ದಾಗ ಪಕ್ಕದ ಹಳ್ಳಿಯಾದ ಸೂಳೇಬಾವಿಯಲ್ಲಿ ಜಾತ್ರಾಮಹೋತ್ಸವದ ಅಂಗವಾಗಿ ಸ್ಥಳೀಯ ಹವ್ಯಾಸಿ ಮಂಡಳಿಯು ಪಿ.ಬಿ. ಧುತ್ತರಗಿ ಕವಿಗಳ 'ಗಿರಿಜಾ ಕಲ್ಯಾಣ' ಹಾಗೂ 'ಹೊಳೆ ದಂಡೆ ಹೊಲ' ನಾಟಕಗಳನ್ನು ಪ್ರಯೋಗಿಸುವ ಸಿದ್ಧತೆಯಲ್ಲಿತ್ತು. ಆ ನಾಟಕಗಳಲ್ಲಿ ಅಭಿನಯಿಸಲು ಪ್ರಮೀಳಾ ಅವರಿಗೆ ಅವಕಾಶ ಲಭಿಸಿತು. ಎರಡೂ ನಾಟಕಗಳಲ್ಲಿ ಅವರು ಹಾಸ್ಯ ಪಾತ್ರದಲ್ಲಿ ಮನೋಜ್ಞ ಅಭಿನಯ ನೀಡಿದರು. ಆ ಕಾಮಿಡಿ ಪಾತ್ರಗಳನ್ನು ನೋಡಿ ಮೆಚ್ಚಿಕೊಂಡ ಕಮತಗಿಯ ಬಿ. ಆರ್. ಅರಿಷಿಣಗೋಡಿಯವರು ತಮ್ಮ ನಾಟಕದ ಹಾಸ್ಯ ಪಾತ್ರಗಳಿಗೆ ಪ್ರಮೀಳಾ ಅವರನ್ನು ಬುಕ್ ಮಾಡಿಕೊಂಡು ಹೋದರು. ಅರಿಷಿಣಗೋಡಿಯವರ 'ಲಂಚ ಸಾಮ್ರಾಜ್ಯ' ಮತ್ತು 'ಹೆಣ್ಣು ಮಗಳು' ನಾಟಕಗಳು ಪ್ರಯೋಗಗೊಳ್ಳಲು ಇನ್ನು ಎರಡು ತಿಂಗಳ ಅವಧಿ ಇತ್ತು. ಆ ಸಮಯದಲ್ಲಿ ಮೈಂದರಗಿಯ 'ಶ್ರೀ ಬಸವೇಶ್ವರ ನಾಟ್ಯ ಸಂಘ'ಕ್ಕೆ ವಿನಂತಿಯ ಮೇರೆಗೆ ಹೋದರು.

## 'ಬಸವೇಶ್ವರ ನಾಟ್ಯ ಸಂಘ' ಮೈಂದರಗಿ

ಮೈಂದರಗಿಯ 'ಶ್ರೀ ಬಸವೇಶ್ವರ ನಾಟ್ಯ ಸಂಘ'ದಲ್ಲಿ ಎರಡು ತಿಂಗಳು ನಟಿಸಿದರು. ಅಲ್ಲಿ ಎಚ್. ಆರ್. ಭಸ್ಮೆ ವಿರಚಿತ 'ಬಾಸಿಂಗ ಬಲ'ದಲ್ಲಿ ಕುಸುಮಾ, ಮಾರುತೇಶ ಮಾಂಡ್ರೆ ಅವರ 'ಸ್ತ್ರೀರತ್ನ'ದ ಪುಷ್ಪಾ ಪಾತ್ರಗಳಲ್ಲಿ ಮಿಂಚಿದರು.

ನಾಟಕಗಳೆರಡೂ ಚೆನ್ನಾಗಿ ಪ್ರದರ್ಶನ ಕಂಡವು. ಅವುಗಳ ಜನಪ್ರಿಯತೆ, ಪ್ರಸಿದ್ಧಿಯಿಂದಾಗಿ ಸಂಘದ ಒಡೆಯರು ತಮ್ಮ ಮುಂದಿನ ಕ್ಯಾಂಪನ್ನು ನೆರೆಯ ಮಹಾರಾಷ್ಟ್ರದ ಅಕ್ಕಲಕೋಟೆಗೆ ಹಾಕಿದರು. ಆ ಹೊತ್ತಿಗಾಗಲೇ ಬಿ. ಆರ್. ಅರಿಷಿಣಗೋಡಿಯವರ ನಾಟಕಗಳ ಪ್ರಯೋಗದ ದಿನಗಳು ಹತ್ತಿರವಾಗಿದ್ದವು. ಹೀಗಾಗಿ ಪ್ರಮೀಳಮ್ಮ ಅಕ್ಕಲಕೋಟೆಗೆ ಹೋಗಲಿಲ್ಲ. ಮೈಂದರಗಿ ಕಂಪನಿಯ ಒಡೆಯರಿಗೆ ಅರಿಷಿಣಗೋಡಿಯವರ ಜೊತೆಗೆ ಮಾಡಿಕೊಂಡಿದ್ದ ಒಡಂಬಡಿಕೆಯ ವಿಷಯವನ್ನು ತಿಳಿಸಿ, ಅವರ ಅನುಮತಿ ಪಡೆದು ಕಮತಗಿಯ ಕಂಪನಿಯನ್ನು ಪ್ರವೇಶಿಸಿದರು.

### 'ಶ್ರೀ ಹುಚ್ಚೇಶ್ವರ ನಾಟ್ಯ ಸಂಘ' ಕಮತಗಿ

ಉತ್ತರ ಕರ್ನಾಟಕದ ಹೆಮ್ಮೆಯ, ಪ್ರತಿಷ್ಠಿತ ನಾಟಕ ಮಂಡಳಿಗಳಲ್ಲಿ ಕಮತಗಿಯ ಬಿ. ಆರ್.ಅರಿಷಿಣಗೋಡಿಯವರ 'ಶ್ರೀ ಹುಚ್ಚೇಶ್ವರ ನಾಟ್ಯ ಸಂಘ'ವೂ ಒಂದು. ನಟರು, ನಾಟಕಕಾರರು, ನಿರ್ದೇಶಕರು, ಯಜಮಾನರು ಆದ ಅರಿಷಿಣಗೋಡಿಯವರ ಕಂಪನಿಯನ್ನು ಪ್ರಮೀಳಮ್ಮ ೧೯೬೧ರಲ್ಲಿ ಪ್ರವೇಶಿಸಿದರು. ಆಗ ಶ್ರೀ ಹುಚ್ಚೇಶ್ವರ ಮಹಾಸ್ವಾಮಿಗಳ ಜಾತ್ರಾ ಮಹೋತ್ಸವ ಅದ್ಧೂರಿಯಾಗಿ ಜರುಗುತ್ತಿತ್ತು. ಅದರ ಅಂಗವಾಗಿ ಅರಿಷಿಣಗೋಡಿಯವರು ರಚಿಸಿದ 'ಲಂಚ ಸಾಮ್ರಾಜ್ಯ' ಮತ್ತು 'ಹೆಣ್ಣುಮಗಳು' ನಾಟಕಗಳನ್ನು ಪ್ರಯೋಗಿಸಲಾಯಿತು. ಪ್ರಮೀಳಾ ಅವರು ಲಂಚ ಸಾಮ್ರಾಜ್ಯ'ದಲ್ಲಿ ಪಾರ್ವತಿ ಎನ್ನುವ ಹಾಸ್ಯ ಪಾತ್ರವನ್ನು, 'ಹೆಣ್ಣುಮಗಳು' ನಾಟಕದಲ್ಲಿ ಕಾಮಾಕ್ಷಿ ಹೆಸರಿನ ವೇಶ್ಯೆಯ ಪಾತ್ರವನ್ನು ಮಾಲೀಕರು, ಪ್ರೇಕ್ಷಕಾಭಿಮಾನಿಗಳಿಗೆ ಮೆಚ್ಚುಗೆಯಾಗುವಂತೆ ನಟಿಸಿದರು.

ನಂತರ ಅರಿಷಿಣಗೋಡಿಯವರು ಬಾಗಲಕೋಟೆಯಲ್ಲಿ ಸರ್ವೀಸ್ ಕಂಪನಿಯನ್ನು ಸ್ಥಾಪಿಸಿದರು. ಅಲ್ಲಿಯೂ 'ಲಂಚ ಸಾಮ್ರಾಜ್ಯ', ಹೆಣ್ಣುಮಗಳು' ನಾಟಕಗಳನ್ನೇ ಆಡಿಸಿದರು. 'ಲಂಚಸಾಮ್ರಾಜ್ಯ' ನಾಟಕವು ೫೦ರಿಂದ ೬೦ ಪ್ರಯೋಗಗಳನ್ನು ಒಂದು ತಿಂಗಳಲ್ಲಿ ಕಾಣುತ್ತಿತ್ತು. ಅದಾದ ಮೇಲೆ 'ಹೆಣ್ಣು ಮಗಳು' ನಾಟಕವು ಹದಿನೈದು ದಿನಗಳಲ್ಲಿ ೧೫ರಿಂದ ೨೦ ಪ್ರಯೋಗಗಳನ್ನು ಕಾಣುತ್ತಿತ್ತು. ಒಂದೂವರೆ ತಿಂಗಳಲ್ಲಿ ಈ ಎರಡು ನಾಟಕಗಳು ಪ್ರದರ್ಶನಗೊಂಡ ಮೇಲೆ ಕಂಪನಿ ಕ್ಲೋಸ್ ಆಗುತ್ತಿತ್ತು. ಅದಕ್ಕಾಗಿ ಕಂಪನಿಯ ಕಲಾವಿದರು ತಮಾಷೆಗಾಗಿ ಈ ಎರಡು ನಾಟಕಗಳನ್ನು ಒಂದೂವರೆ ನಾಟಕಗಳೆಂದು ಕರೆಯುತ್ತಿದ್ದರಂತೆ.

ಹುಚ್ಚೇಶ್ವರ ಕಂಪನಿಯು ಬಾಗಲಕೋಟೆಯಿಂದ ಬಿಜಾಪುರಕ್ಕೆ ಬಂದಿತು. ಅಲ್ಲಿ ಗದುಗಿನ ಎಚ್. ಟಿ. ಮಹಾಂತೇಶ ಶಾಸ್ತ್ರಿಗಳ 'ಪ್ರಜಾ ಸರ್ಕಾರ' ನಾಟಕವನ್ನು ಆಡಿದರು. ಮಹಾಂತೇಶಶಾಸ್ತ್ರಿಗಳ ನಾಟಕವನ್ನು ನಿರ್ದೇಶಿಸಿದ್ದರು. ಅದರಲ್ಲಿ ಪ್ರಮೀಳಮ್ಮ

ಸರೋಜಾಳ (ವೇಶ್ಯೆ) ಭೂಮಿಕೆಯನ್ನು ನಿಭಾಯಿಸಿದರು. ಅದಲ್ಲದೆ ಆ ಕ್ಯಾಂಪಿನಲ್ಲಿ ಲಂಚಸಾಮ್ರಾಜ್ಯ, ಹೆಣ್ಣು ಮಗಳು ಮೊದಲಾದ ಜನಪ್ರಿಯ ನಾಟಕಗಳನ್ನು ಪ್ರದರ್ಶಿಸಲಾಯಿತು.

ಮಂಡಳಿಯು ಗದಗದಲ್ಲಿ ವಾಸ್ತವ್ಯ ಮಾಡಿದಾಗ ನಾಟ್ಯ ಕವಿರಾಜ ಖ್ಯಾತಿಯ ಎಸ್.ಟಿ. ಮಹಾಂತೇಶಶಾಸ್ತ್ರಿಗಳ 'ಸತಿಪತಿ', ಗುಬ್ಬಿ ವೀರಣ್ಣ ಪ್ರಶಸ್ತಿ ಪುರಸ್ಕೃತ ನಾಟಕಕಾರ ಬಿ.ಆರ್. ಅರಿಷಿಣಗೋಡಿ ಅವರ ಬಸ್ ಕಂಡೆಕ್ಟರ್ (ಖಾನಾವಳಿ ಚೆನ್ನಿ), ಗರೀಬಿ ಹಟಾವೋ ನಾಟಕಗಳನ್ನು ಪ್ರಯೋಗಿಸಲಾಯಿತು. ಆಗ ಮಹಾಂತೇಶ ಶಾಸ್ತ್ರಿಗಳೆ ನಾಟಕದ ನಿರ್ದೇಶನ, ಕಲಾವಿದರ ತರಬೇತಿಯ ಜವಾಬ್ದಾರಿ ಹೊತ್ತಿದ್ದರು. ಮಾರ್ಗದರ್ಶಕ ಗುರುಗಳಾದ ಅವರು ರಿಹರ್ಸಲ್ ಸಮಯದಲ್ಲಿ ಎಲ್ಲ ಕಲಾವಿದರಿಗೆ ಪೆನ್ ತರಲು ಹೇಳುತ್ತಿದ್ದರು. ಅದರಿಂದ ನಾಟಕ ಪುಸ್ತಕದ ಆಯಾ ಪಾತ್ರಧಾರಿಗಳ ಸಂಭಾಷಣೆಯಲ್ಲಿ ಯಾವ ಶಬ್ದವನ್ನು ಏರುಧ್ವನಿಯಲ್ಲಿ, ಯಾವ ಪದವನ್ನು ತಗ್ಗಿದ ಧ್ವನಿಯಲ್ಲಿ ಹೇಳಬೇಕೆಂಬುದನ್ನು ಗುರುತು ಹಾಕಿಸುತ್ತಿದ್ದರು. ಒಂದು ದಿನ ಪ್ರಮೀಳಮ್ಮ ಅವಸರದಲ್ಲಿ ಪೆನ್ನು ಬಿಟ್ಟು ಬಂದಿದ್ದರು. ಅದನ್ನು ಕಂಡು ಗುರುಗಳಾದ ಮಹಾಂತೇಶಶಾಸ್ತ್ರಿಗಳು "ಪ್ರಮೀಳಮ್ಮ ಜಳಕ ಮಾಡ್ತೀರಿ, ಪೌಡರ್ ಹಚ್ಕೊಂತ್ತೀರಿ, ಹಣೆಗೆ ಕುಂಕುಮಾ ಇಟ್ಕೊಂತ್ತೀರಿ, ಚಂದ ಕಾಣಲು ಮೇಕಪ್ ಮಾಡ್ಕೊಂತ್ತೀರಿ. ಅದನ್ನು ಮರೆಯಲ್ಲ. ಅದಕ್ಕಿರುವ ಲಕ್ಷ್ಯ ಒಂದು ಪೆನ್ ತರೋಕೆ ಇಲ್ಲವಾಯಿತೆ? ಎಂದು ಮುಜುಗರವಾಗುವಂತೆ ವ್ಯಂಗ್ಯವಾಗಿ ಪ್ರಶ್ನಿಸಿದರು. ಈ ಪ್ರಸಂಗದಿಂದ ಜಾಗೃತಗೊಂಡ ಪ್ರಮೀಳಮ್ಮ ಮುಂದೆಂದೂ ಇಂಥ ತಪ್ಪು ಆಗದಂತೆ ಎಚ್ಚರಿಕೆ ವಹಿಸಿದರು. ಶಿಷ್ಯರಲ್ಲಿ ಇಂಥ ಯಾವ ಪ್ರಮಾದಗಳು ಜರುಗದಂತೆ ನೋಡಿಕೊಳ್ಳುತಿದ್ದರಂತೆ ಮಹಾಂತೇಶಶಾಸ್ತ್ರಿಗಳು.

ಪ್ರಮೀಳಾ ತಮ್ಮ ಗುರು ಎಚ್.ಟಿ. ಮಹಾಂತೇಶಶಾಸ್ತ್ರಿಗಳ ಕುರಿತು "ಸಾಧ್ವಿಯ ನಡಿಗೆ, ನೋಟ ಮೃದು, ನಯವಾಗಿರಬೇಕು, ವೇಶ್ಯೆಯ ಹಾವಭಾವ ಭಂಗಿ, ಹೆಜ್ಜೆ ಹಾಕುವ ರೀತಿ, ಅವಳು ನೋಡುವ ಓರೆನೋಟ ಹೇಗಿರಬೇಕೆಂದು ಮಹಾಂತೇಶ ಶಾಸ್ತ್ರಿಗಳು ಸ್ವತಃ ಅಭಿನಯಿಸಿ ತೋರಿಸುತ್ತಿದ್ದು, ಇವರ ತರಬೇತಿಯಿಂದಾಗಿಯೇ ನಾನು ಒಬ್ಬ ನಟಿ ಅನಿಸಿಕೊಳ್ಳುವಂತಾಯಿತು" ಎಂದು ಅಭಿಮಾನದಿಂದ ಹೇಳಿದ್ದನ್ನು ಇಲ್ಲಿ ಸ್ಮರಿಸುವುದು ಸೂಕ್ತವೆನಿಸುತ್ತದೆ. ಇದು ಅವರ ಉಪಕಾರ ಸ್ಮರಣೆಯ ಗುಣವನ್ನು ಎತ್ತಿತೋರಿಸುತ್ತದೆ.

ಗದಗದಲ್ಲಿ ಪ್ರಮೀಳಮ್ಮನವರು ಮಹಾಂತೇಶಶಾಸ್ತ್ರಿಗಳ 'ಸತಿಪತಿ' ನಾಟಕದಲ್ಲಿ ಸುಶೀಲಾ, ಅರಿಷಿಣಗೋಡಿ ಅವರ 'ಬಸ್ ಕಂಡೆಕ್ಟರ್'ದಲ್ಲಿ ಉಮಾ, 'ಗರೀಬಿ ಹಟಾವೋ'ದಲ್ಲಿ ಸರೋಜಾ – ಈ ಪಾತ್ರಗಳನ್ನು ಸವಾಲಾಗಿ ಸ್ವೀಕರಿಸಿ, ಅತ್ಯಂತ ಸಮರ್ಥವಾಗಿ ಅಭಿನಯಿಸಿದರು.

'ಸತಿಪತಿ' ನಾಟಕದ ಒಂದು ವೈಶಿಷ್ಟ್ಯವೆಂದರೆ, ಅದರಲ್ಲಿ ಬರುವ ಸ್ತ್ರೀ-ಪುರುಷ ಪಾತ್ರಗಳ ಹೆಸರುಗಳೆಲ್ಲವೂ 'ಸು' ಅಕ್ಷರದಿಂದ ಪ್ರಾರಂಭವಾಗುವಂಥವುಗಳು. ಉದಾ: ಸುಶೀಲಾ, ಸುನಂದಾ, ಸುರೇಖಾ, ಸುಂದರಮ್ಮ, ಸುಚರಿತಾ, ಸುದಾಮ, ಸುದರ್ಶನ ಮುಂತಾದವು. ಈ ರೀತಿಯಲ್ಲಿ ಪಾತ್ರಗಳ ಹೆಸರುಗಳನ್ನು ಸೃಷ್ಟಿಸಿದ್ದು ಮಹಾಂತೇಶ ಶಾಸ್ತ್ರಿಗಳ ಅಪೂರ್ವ ಪ್ರತಿಭೆಗೆ ಸಾಕ್ಷಿಯಾಗಿದೆ.

ಕಮತಗಿ ಕಂಪನಿ ೧೯೬೬ರಲ್ಲಿ ಗದಗದಿಂದ ಪುನಃ ಬಿಜಾಪುರದಲ್ಲಿ ಕ್ಯಾಂಪ್ ಹಾಕಿತು. ಆಗ ಗದಗಿನ ನಾಟ್ಯ ಕವಿರಾಜ, ಕವಿತಿಲಕ ಎಚ್.ಟಿ. ಮಹಾಂತೇಶ ಶಾಸ್ತ್ರಿಗಳು ರಚಿಸಿದ 'ಏರಿದ ನಂಜು' ಎನ್ನುವ ಸಾಮಾಜಿಕ ನಾಟಕವನ್ನು ಪ್ರಯೋಗಿಸಲಾಯಿತು. ಭಾರತದ ಜಾತಿ ವ್ಯವಸ್ಥೆಯ ಸುತ್ತ ಹೆಣೆಯಲ್ಪಟ್ಟ ನಾಟಕ. ಜಾತಿ ಪದ್ಧತಿಯಿಂದಾಗುತ್ತಿದ್ದ ಸಮಸ್ಯೆಯನ್ನು ಬಹುಮಾರ್ಮಿಕವಾಗಿ ಚಿತ್ರಿಸಿದೆ. ಅದನ್ನು ಮಹಾಂತೇಶಶಾಸ್ತ್ರಿಗಳೆ ನಿರ್ದೇಶಿಸಿದರು. ಪ್ರಮೀಳಮ್ಮ ಈ ನಾಟಕದಲ್ಲಿ 'ಊರ್ಮಿಳಾ' ಭೂಮಿಕೆಯನ್ನು ಬಹುಭಾವಪೂರ್ಣವಾಗಿ ನಟಿಸಿದರು. 'ಊರ್ಮಿಳಾ' ಪಾತ್ರವನ್ನು ಸವಾಲಾಗಿ ಸ್ವೀಕರಿಸಿ, ಎಲ್ಲ ರಸಭಾವಗಳನ್ನು ಅತ್ಯಂತ ಸಮರ್ಥವಾಗಿ ವ್ಯಕ್ತಪಡಿಸಿದರು. ಊರ್ಮಿಳಾ ಬ್ರಾಹ್ಮಣ ಧರ್ಮಕ್ಕೆ ಸೇರಿದವಳು. ಚಿಕ್ಕ ವಯಸ್ಸಿನಲ್ಲಿಯೇ ಗಂಡನನ್ನು ಕಳೆದುಕೊಂಡು ವಿಧವೆಯಾದವಳು. ಸಂಸಾರಿಕ ಸುಖ-ಸಂತೋಷಗಳಿಂದ ವಂಚಿತಳಾದ ದುರ್ದೈವಿ ಮಾವನ ಮನೆಯಲ್ಲಿ ತೀರ ನಿರ್ಲಕ್ಷ್ಯಕ್ಕೊಳಗಾಗಿ ಮಾನಸಿಕ ಹಿಂಸೆಯಿಂದ ಕೃಶಳಾಗುತ್ತ ಹಾಸಿಗೆ ಹಿಡಿಯುತ್ತಾಳೆ. ಮನಸ್ಸಿಲ್ಲದ ಮನಸ್ಸಿನಿಂದ ಅವಳ ಮಾವ ಆಕೆಗೆ ಆಸ್ಪತ್ರೆಗೆ ಸೇರಿಸುತ್ತಾನೆ. ಆಕೆ ಟಿ.ಬಿ. ರೋಗದಿಂದ ಬಳಲುತ್ತಿರುತ್ತಾಳೆ. ಬದುಕುವ ಆಸೆ ಇಲ್ಲದೆ ಸಾವನ್ನು ಇಚ್ಛಿಸುತ್ತಿದ್ದ ಊರ್ಮಿಳಾಗೆ ಡಾ॥ ಭಾಸ್ಕರ್‌ನು ಹೊಸಜೀವನದ ಆಸೆ-ಆಕಾಂಕ್ಷೆಗಳನ್ನು ತುಂಬಿ, ಚಿಕಿತ್ಸೆ ನೀಡಿ ಗುಣಪಡಿಸುತ್ತಾನೆ. ಅವಳು ಸಂಪೂರ್ಣವಾಗಿ ಚೇತರಿಸಿಕೊಂಡ ಮೇಲೆ ಡಾ॥. ಭಾಸ್ಕರ್ ತನ್ನ ಪ್ರಾಣ ಸ್ನೇಹಿತನೂ ಸಾತ್ವಿಕನೂ ಆದ ಗೆಳೆಯ ಉಮಾಪತಿಯನ್ನು ಮದುವೆಯಾಗಲು ಹೇಳುತ್ತಾನೆ. ಹಿಂದುಳಿದ ಜನಾಂಗಕ್ಕೆ ಸೇರಿದ ಉಮಾಪತಿ ಬ್ಯಾಂಕ್ ನೌಕರನಾಗಿದ್ದನು. ಎಲ್ಲಕ್ಕೂ ಮೇಲಾಗಿ ಮಾನವೀಯ ಗುಣವುಳ್ಳವನಾಗಿದ್ದನು. ಡಾಕ್ಟರ್ ಸಲಹೆಯಂತೆ ಊರ್ಮಿಳಾ ಉಮಾಪತಿಯನ್ನು ವಿವಾಹವಾಗಿ ಹೊಸಬಾಳನ್ನು ಪ್ರಾರಂಭಿಸುತ್ತಾಳೆ. ಈ ವಿಷಯ ತಿಳಿದ ಮೇಲೆ ಆಕೆಯ ಮಾವ ಈ ಮದುವೆಯನ್ನು ವಿರೋಧಿಸಿ ವಿಚ್ಛೇದನಕ್ಕೆ ಪ್ರೇರೇಪಿಸುತ್ತಾನೆ. ಮಾವನ ಮಾತು ಕೇಳಿ ಉಮಾಪತಿಯನ್ನು ಬಿಡುತ್ತಾಳೆ. ಆಗ ಅವಳಿಗೆ ಪುನಃ ಟಿ.ಬಿ. ಮರುಕಳಿಸುತ್ತದೆ. ಆಗ ಎಲ್ಲರೂ ಆಕೆಯನ್ನು ತಿರಸ್ಕರಿಸುತ್ತಾರೆ.

ಇಂಥ ಪಾತ್ರವನ್ನು ನಟಿಸಲು ಸಾಕಷ್ಟು ಅವಕಾಶಗಳಿದ್ದವು. ಶೃಂಗಾರ, ಕರುಣ ಇನ್ನಿತರ ರಸಭಾವಗಳನ್ನು ಮನೋಜ್ಞವಾಗಿ ತೋರಿಸಿದರು. ಟಿ.ಬಿ. ಆದಾಗ ಆ

ರೋಗದ ಲಕ್ಷಣ ತೋರಿಸುವ ನಟನೆ, ಕೊನೆಯಲ್ಲಿ ರಕ್ತ ಕಾರುವ ಸಂದರ್ಭವನ್ನು ಔಚಿತ್ಯಪೂರ್ಣವಾಗಿ ನಟಿಸಿ ತೋರಿದರು. ನಾಟಕ ಕರ್ತೃ, ನಿರ್ದೇಶಕರಾದ ಮಹಾಂತೇಶಶಾಸ್ತ್ರಿಗಳು ಪ್ರಮೀಳಾ ಅವರ 'ಊರ್ಮಿಳಾ' ಪಾತ್ರವನ್ನು ನೋಡಿ, ಮೆಚ್ಚಿಕೊಂಡು " ಈ ಭಾವನೆಗಳನ್ನು ಇಲ್ಲಿಯವರೆಗೆ ಎಲ್ಲಿ ಬಚ್ಚಿಟ್ಟಿದ್ದೆ, ಇಂದು ನಿನ್ನಲ್ಲಿರುವ ಎಲ್ಲ ಭಾವನೆಗಳನ್ನು ಹೊರಹಾಕಿ ಅತ್ಯದ್ಭುತವಾಗಿ ಅಭಿನಯಿಸಿರುವೆ" ಎಂದು ಪ್ರಶಂಸೆ ವ್ಯಕ್ತಪಡಿಸಿ, 'ಭಾವ ಭಾಗ್ಯಶ್ರೀ' ಎಂಬ ಬಿರುದನ್ನು ನೀಡಿದರಂತೆ.

ಗುಲಬರ್ಗಾದಲ್ಲಿ ಅರಿಷಿಣಗೋಡಿಯವರ ಕಂಪನಿಯು ಎರಡು ವರ್ಷಗಳ ಕಾಲ ಜನಪ್ರಿಯ ನಾಟಕಗಳನ್ನು ಪ್ರಯೋಗಿಸಿತು. ಅವೆಂದರೆ–ಪ್ರಜಾ ಸರ್ಕಾರ, ಸತಿಪತಿ, ಲಂಚ ಸಾಮ್ರಾಜ್ಯ, ಏರಿದ ನಂಜು, ಬಸ್ ಕಂಡೆಕ್ಟರ್, ಇಲ್ಲಿಗೆ ಬಂತೋ ಸಂಗಯ್ಯ, ಗರೀಬಿ ಹಟಾವೋ ಮುಂತಾದವುಗಳು. ೧೯೭೭–೭೮ನೆಯ ಇಸ್ವಿಯಲ್ಲಿ ಈ ಎಲ್ಲ ನಾಟಕಗಳು ಗುಲಬುರ್ಗಾ ನಗರದಲ್ಲಿ ವೈಭವದಿಂದ ಪ್ರದರ್ಶನ ಕಂಡು ಆ ಭಾಗದ ರಂಗಪ್ರೇಮಿಗಳ ಮನಸ್ಸನ್ನು ಸೂರೆಗೊಂಡಿದ್ದವು. ಪ್ರಮೀಳಮ್ಮನವರ ಸುಶೀಲಾ, ಸುರೇಖಾ, ಊರ್ಮಿಳಾ, ಸರೋಜಾ, ಉಮಾ, ಕಾಮಾಕ್ಷಿ, ಪಾರ್ವತಿ ಪಾತ್ರಗಳಂತೂ ನೋಡುಗರ ಮನದಲ್ಲಿ ಅಚ್ಚಳಿಯದೆ ಉಳಿದಿದ್ದವಂತೆ. 'ಗರೀಬಿ ಹಟಾವೋ' ನಾಟಕದಲ್ಲಿ ಡಾ. ಸರೋಜಾಳ ಪಾತ್ರ ನಿರ್ವಹಿಸಿದ ಪ್ರಮೀಳಾ ಅವರು ಹೇಳುವುದು ಹೀಗೆ, "ತಾವು ನಿಜಜೀವನದಲ್ಲಿ ಎಂ.ಬಿ.ಬಿ.ಎಸ್., ಬಿ.ಇ. ಶಿಕ್ಷಣ ಹೊಂದದಿದ್ದರೂ, ನಾಟಕ ಜೀವನದಲ್ಲಿ ಡಾಕ್ಟರ್, ಇಂಜನೀಯರ್ ಪಾತ್ರಗಳನ್ನು ಮಾಡಿ ಸಂತೋಷಪಟ್ಟುಕೊಂಡೆವು."

ಬಾಗಲಕೋಟೆಯಲ್ಲಿ ಮಂಡಳಿ 'ಪ್ರಜಾ ಸರ್ಕಾರ' ವನ್ನು ಆಡುತ್ತಿದ್ದ ಸಂದರ್ಭ. ಒಂದು ದಿನ ಪ್ರಮೀಳಾ ಅವರ ತಂದೆ, ಫಕ್ರುದ್ದೀನ್ ಅವರಿಗೆ ಮೈಯಲ್ಲಿ ಹುಷಾರ ಇಲ್ಲದ ಸುದ್ದಿ ಬಂತು. ಆ ವಿಷಯ ಕೇಳಿ ದು:ಖದಿಂದ ಗುಡೂರಿಗೆ ಬಂದು ತಂದೆಯನ್ನು ಮಾತನಾಡಿಸಿ ಪುನ: ಬಾಗಲಕೋಟೆಗೆ ಬಂದು ಚಿಂತಾಕ್ರಾಂತರಾಗಿ ಕುಳಿತುಕೊಂಡಿದ್ದಾಗ ತಂದೆ ಪೈಗಂಬರವಾಸಿ (ಮರಣ)ಯಾದ ಕರ್ಣಕಠೋರ ಸುದ್ದಿ ಬಂದು ಅವರನ್ನು ಘಾಸಿಗೊಳಿಸಿತು. ಮತ್ತೆ ಊರಿಗೆ ಬಂದು ಅಪ್ಪನ ಶವ ಸಂಸ್ಕಾರ ಮುಗಿಸಿದ ಮೇಲೆ ಬಾಗಲಕೋಟೆಗೆ ಬಂದು ರಾತ್ರಿ ಒಂಬತ್ತು ಗಂಟೆಗೆ ಬಣ್ಣ ಹಚ್ಚಿಕೊಂಡು ಅಭಿನಯಿಸಿದರು. 'ಕಲೆಯೇ ಜೀವನ', 'ವಾಸ್ತವಿಕ ಬದುಕಿಗಿಂತ ಕಲಾ ಜೀವನವೇ ಶ್ರೇಷ್ಠ' ಎಂದುಕೊಂಡಿದ್ದ ಪ್ರಮೀಳಮ್ಮನವರಿಗೆ ಇದಕ್ಕಿಂತ ಬೇರೆ ಉದಾಹರಣೆ ಕೊಡಬೇಕಾಗಿಲ್ಲ.

ರಬಕವಿ ಕ್ಯಾಂಪಿನಲ್ಲಿ 'ಗೌಡ್ರ ಗದ್ಲ' 'ರಕ್ತರಾತ್ರಿ' ಎಂಬ ನಾಟಕಗಳನ್ನು ಪ್ರದರ್ಶಿಸಲಾಯಿತು. ಪ್ರಮೀಳಮ್ಮ ಈ ನಾಟಕಗಳಲ್ಲಿ ಪುರುಷ ಪಾತ್ರಗಳಲ್ಲಿ ನಟಿಸಿದರು.

'ಗೌಡ್ರ ಗದ್ಲ' ನಾಟಕ ವೃತ್ತಿನಾಟಕ ಕಂಪನಿಗಳಲ್ಲಿ ಜಯಭೇರಿ ಬಾರಿಸಿ ಇತಿಹಾಸ ನಿರ್ಮಿಸಿದೆ. ದೇವೇಗೌಡ ನಾಟಕದ ಪ್ರಧಾನ ಪಾತ್ರ, ಅದನ್ನು ಅತ್ಯದ್ಭುತವಾಗಿ ಅಭಿನಯಿಸಿದ ಹಿರಿಮೆ ಪ್ರಮೀಳಾ ಅವರದು. ಗೌಡರ ಠೀವಿ, ದರ್ಪ, ಸೊಕ್ಕು, ಕುಹಕತನ, ಸಿಟ್ಟು, ಆಕ್ರೋಶ, ಅಟ್ಟಹಾಸಗಳನ್ನು ಅಮೋಘವಾಗಿ ನಟಿಸುತ್ತಿದ್ದರು. ಆ ಪಾತ್ರಕ್ಕೆ ತಮ್ಮೆಲ್ಲ ಪ್ರತಿಭೆಯಿಂದ ಜೀವ ತುಂಬಿ ಪುರುಷ ಕಲಾವಿದರೆ ನಾಚುವಂತೆ, ಪ್ರೇಕ್ಷಕರಿಗೆ ತಾನು ಸ್ತ್ರೀ ಕಲಾವಿದೆ ಎಂಬ ಅನುಮಾನ ಬರದಂತೆ ನಟಿಸಿದರು. ಅಲ್ಲದೆ ಆ ನಾಟಕದ ಬಸವರಾಜಗೌಡ, ಕರಿಯಾ ಪುರುಷ ಪಾತ್ರಗಳನ್ನು ಮಾಡಿದರು.

ದೇವೇಗೌಡನ ಪಾತ್ರದಲ್ಲಿ ಮಿಂಚಿದ ಪ್ರಮೀಳಮ್ಮನವರನ್ನು ಕಾಣಲು ಹುನಗುಂದ ತಾಲ್ಲೂಕಿನ 'ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಇಲಕಲ್ಲಿನ ಸ್ನೇಹರಂಗದ ಕಲಾವಿದರಾದ ಶ್ರೀ ಮಹಾಂತೇಶ ಗಜೇಂದ್ರಗಡ ಅವರು ರಬಕವಿಯಲ್ಲಿನ ಥೇಟರ್‌ಗೆ ಹೋದರಂತೆ. ಪ್ರಮೀಳಮ್ಮನವರು ಲುಂಗಿ ಸುತ್ತಿಕೊಂಡು ನಾಟಕ ಮಂದಿರದ ಹೊರಗೆ ಕುಳಿತುಕೊಂಡಿದ್ದರಂತೆ, ಅಲ್ಲಿಗೆ ಹೋದ ಮಹಾಂತೇಶರು ಅವರನ್ನೇ, ಪ್ರಮೀಳಮ್ಮನವರು ಎಲ್ಲಿ ಎಂದು ಕೇಳಿದರಂತೆ. ಯಾಕೆಂದರೆ ಅವರು ಸ್ತ್ರೀಯಂತೆ ಕಾಣದೆ ಪುರುಷರಂತೆ ಕಾಣುತ್ತಿದ್ದರು. ಪುರುಷ ಪಾತ್ರದಲ್ಲಿ ನಟಿಸುತ್ತಿದ್ದ ಅವರನ್ನು ನಿಜವಾಗಿಯೂ ಪುರುಷ ಕಲಾವಿದರೆಂದೇ ಜೂಜು ಕಟ್ಟಿ ಸೋತವರುಂಟು.

'ಕರ್ನಾಟಕ ಷೆಕ್ಸ್‌ಪಿಯರ್' ಎಂದು ಖ್ಯಾತರಾದ ಕಂದಗಲ್ಲ ಹನುಮಂತರಾಯರ ಪೌರಾಣಿಕ ನಾಟಕ ರಕ್ತರಾತ್ರಿ, ಅರಿಷಿಣಗೋಡಿಯವರು ಇದನ್ನು ರಬಕವಿ ಕ್ಯಾಂಪಿನಲ್ಲಿ ಆಡಿಸಿದರು. ಅದರಲ್ಲಿ ಪ್ರಮೀಳಮ್ಮ ಗುರು ದ್ರೋಣಾಚಾರ್ಯರ ಮಗ ಅಶ್ವತ್ಥಾಮನಾಗಿ ಮೆರೆದರು. ಮಹಾಂತೇಶ ದಾವಣಗೆರೆ ಕರ್ಣನಾಗಿ, ಕೀರ್ತೆಪ್ಪ ಕೊಪ್ಪರದ ಶಕುನಿಯಾಗಿ, ಅಬ್ಬಾಸ ಅಲಿ ಅಳವಂಡಿ ನವಲಿ ಪಕ್ಕ ಹಾಸ್ಯ ಪಾತ್ರದಲ್ಲಿ ನಟಿಸಿದರು. ಅಶ್ವತ್ಥಾಮನ ಪಾತ್ರವನ್ನು ಸ್ವತಃ ಪುರುಷ ಕಲಾವಿದರು ನಾಚಿ ತಲೆ ತಗ್ಗಿಸುವಂತೆ ಮಾಡುತ್ತಿದ್ದರಂತೆ. ನಾಲ್ಕೈದು ದಿನಗಳಿಂದ ನಾಟಕ ನೋಡಲು ಬರುತ್ತಿದ್ದ ಕೆಲ ಪ್ರೇಕ್ಷಕರು ಅಶ್ವತ್ಥಾಮ ಪಾತ್ರಧಾರಿಯ ಸಂಭಾಷಣೆ, ಅಭಿನಯ ಕಂಡು ಮೆಚ್ಚಿದರು. ಯಾರೋ ಅಶ್ವತ್ಥಾಮನ ಪಾತ್ರ ಮಾಡುತ್ತಿದ್ದವರು ಗಂಡಸಲ್ಲ. ಹೆಂಗಸು ಎಂದರಂತೆ, ಅದನ್ನು ಕೇಳಿ ಆ ಪ್ರೇಕ್ಷಕರಿಗೆ ಮತ್ತಷ್ಟು ಅಚ್ಚರಿ. ಅವರು ಕುತೂಹಲದಿಂದ ಒಂದು ದಿನ ನಾಟಕ ಮುಗಿದ ತಕ್ಷಣ ರಂಗಪಾರ್ಟಿಗೆ ಬಂದು ಅಣ್ಣಾರ. . . ಅಣ್ಣಾರ ನೀವು ಯಾರು? ನೀವು ಹೆಣ್ಣು ಮಗಳೆ? ಎಂದು ಪ್ರಶ್ನಿಸಿದಾಗ, ಪ್ರಮೀಳಮ್ಮ ಹೌದು ನಾನು ಹೆಣ್ಣುಮಗಳು ಎಂದು ಹೇಳಿದಾಗಲೂ ನಂಬಲಿಲ್ಲ. ಯಾಕೆ ಸುಳ್ಳು ಹೇಳತ್ತೀರಿ ಅಣ್ಣಾರ...ನಿಮ್ಮನ್ನು ಹೆಣ್ಣು ಅಂತ ಹೇಳುವವರು ಯಾರು? ನಾವಂತೂ ನಂಬೂದಿಲ್ಲರ್ರಿ...ಎಂದರಂತೆ. ಆಗ ಸಹಕಲಾವಿರಾದ ಅಬ್ಬಾಸ ಅಲಿ, ಕೀರ್ತೆಪ್ಪ, ಗೂಡುಸಾಬ, ಮಹಾಂತೇಶ ಮೊದಲಾದವರು ಹೌದು ಅವರು ಪ್ರಮೀಳಮ್ಮ ಎಂಬ

ನಟಿ ಎಂದು ಹೇಳಿದ ಮೇಲೆ ಅಬ್ಬಾ ..... ಎಂದು ಬಾಯಿಯ ಮೇಲೆ ಕೈಯಿಟ್ಟುಕೊಂಡರಂತೆ. ಕೊನೆಗೆ ಪ್ರಮೀಳಾ ಅವರ ನಟನೆಯನ್ನು ಶ್ಲಾಘಿಸಿದರಂತೆ. ಸಹಕಲಾವಿದರು ಸಹ 'ಏನು ನೀನು ಗಂಡಸು ಪಾತ್ರ ಮಾಡುವುದರಿಂದಲೂ ಹೆಸರಾಗಿರುವಿ, ಏನು ನಿನ್ನ ಡಿಮ್ಯಾಂಡ್' ಎಂದು ಹೊಗಳುತ್ತಿದ್ದರಂತೆ. ಈ ಕಲಾವಿದರೆಲ್ಲ ನಟನೆಯಲ್ಲಿ ಪ್ರಮೀಳಮ್ಮನನ್ನು ಹಿಂದೆ ಹಾಕಲು ಪೈಪೋಟಿಯಿಂದ ಅಭಿನಯಿಸುತ್ತಿದ್ದರೆಂಬುದು ಗಮನಾರ್ಹ ವಿಷಯ.

೧೯೬೯-೭೦ರಲ್ಲಿ ಅರಿಷಿಣಗೋಡಿಯವರ ನಾಟಕ ಮಂಡಳಿ ಹುಬ್ಬಳ್ಳಿಯಲ್ಲಿ ಕ್ಯಾಂಪ್ ಮಾಡಿತ್ತು. ಅಲ್ಲಿಯೂ ಕಂಪನಿಯ ಜನಪ್ರಿಯ ನಾಟಕಗಳನ್ನು ಪ್ರದರ್ಶಿಸಿತು. ಪ್ರಮೀಳಮ್ಮ ತಮ್ಮ ನಟನಾ ಕೌಶಲದಿಂದ ಆ ಭಾಗದ ರಂಗಾಸಕ್ತರ ಮನಗೆದ್ದರು. ಅಲ್ಲಿ ಪ್ರಯೋಗಿಸಿದ 'ಬಸ್ ಕಂಡೆಕ್ಟರ್' ನಾಟಕದ ಉಮಾಳ ಪಾತ್ರ ನೋಡಿ ಮೆಚ್ಚಿಕೊಂಡ ಕನ್ನಡದ ವರಕವಿ ದ.ರಾ. ಬೇಂದ್ರೆಯವರು ನಾಟಕ ಮುಗಿದ ಮೇಲೆ ಮಾತನಾಡುತ್ತ "ಉಮಾಳ ಪಾತ್ರದಲ್ಲಿ ಕಲಾವಿದೆ ತುಂಬ ಆಕರ್ಷಿಸುತ್ತಾಳೆ. ಉಮಾ ಶ್ರೀಮಂತಿಕೆಯ ಅಹಂಕಾರ, ವಿದ್ಯಾಹಂಕಾರ, ಯೌವ್ವನ ಅಹಂಕಾರಗಳಲ್ಲಿ ಮೆರೆಯುತ್ತ ಕೊನೆಗೆ ಜೀವನದಲ್ಲಿ ಸೋಲೊಪ್ಪಿಕೊಂಡು ಪಶ್ಚಾತ್ತಾಪ ಪಡುತ್ತಾಳೆ. ಈ ಪಾತ್ರದ ಅಭಿನಯ ಮೆಚ್ಚುವಂತಹದು" ಎಂದರು.

ಪ್ರಮೀಳಾ ಅವರ 'ಸತಿ-ಪತಿ' ನಾಟಕದ ಸುಶೀಲಾಳ ಮನಮೋಹಕ ನಟನೆಯನ್ನು ಕಂಡು ಹುಬ್ಬಳ್ಳಿಯ ಪ್ರಸಿದ್ಧ ವೈದ್ಯರಾದ ಡಾ.ಆರ್.ವಿ. ಪಾಟೀಲರು "ಈ ಕಲಾವಿದೆಯ ಪಾತ್ರ ನಾನು ಶಸ್ತ್ರ ಚಿಕಿತ್ಸೆ ಮಾಡುವಾಗ ಎಷ್ಟು ಲಕ್ಷ್ಯ ಕೊಡುತ್ತಿದ್ದೆನೋ ಅಷ್ಟೇ ಲಕ್ಷ್ಯ ಕೊಟ್ಟು ನೋಡಿದ್ದೇನೆ. ಅಭಿನಯ ಭಾರೀ ಸಂತಸ ತಂದುಕೊಟ್ಟಿದೆ" ಎಂದಿದ್ದಾರೆ.

ಪ್ರಮೀಳಮ್ಮನವರ ಅಭಿನಯ ಇನ್ನಿತರ ಕಲಾವಿದರು ಅನುಕರಣೆ ಮಾಡುವಂತಿತ್ತು. ಅದನ್ನು ಅನುಕರಿಸಲು ಕೆಲವರು ಹಲವರಿಗೆ ಪ್ರೇರಣೆ ಕೊಟ್ಟದ್ದುಂಟು. ಉದಾಹರಣೆಗೆ-ಪ್ರಮೀಳಾ ಅವರೊಂದಿಗೆ ಸಹಕಲಾವಿದನಾಗಿ ನಟಿಸುತ್ತಿದ್ದ ಯಲ್ಲಪ್ಪ ಎಂಬುವರಿಗೆ ಪ್ರಮೀಳಮ್ಮನವರ ಅಭಿನಯದ ಬಗ್ಗೆ ತುಂಬಾ ಗೌರವವಿತ್ತು. ಮಂಡಳಿ ಹುಬ್ಬಳ್ಳಿಯಲ್ಲಿ ವಾಸ್ತವ್ಯ ಮಾಡಿದಾಗಲೆ ಯಲ್ಲಪ್ಪನವರು ಕಮತಗಿ ಕಂಪನಿ ಬಿಟ್ಟು ಸ್ವಂತ ನಾಟಕ ಮಂಡಳಿಯೊಂದನ್ನು ಸ್ಥಾಪಿಸಿದರು. ಯಲ್ಲಪ್ಪ ತಮ್ಮ ಕಂಪನಿಯ ರಾಜಮ್ಮ ದಾವಣಗೆರೆ, ಪಾಪಮ್ಮ ಎನ್ನುವ ಕಲಾವಿದೆಯರನ್ನು ಹುಬ್ಬಳ್ಳಿಗೆ ಕರೆದುಕೊಂಡು ಬಂದು ಪ್ರಮೀಳಮ್ಮನವರ ಪಾತ್ರವನ್ನು ಅವರಿಗೆ ತೋರಿಸಿ 'ನೀವು ಅವರಂತೆ ನಟಿಸಿ, ಅವರ ಹಾಗೆಯೇ ಬೆಳೆಯಿರಿ' ಎಂದು ನಿರ್ದೇಶಿಸಿದರಂತೆ.

ಪ್ರಮೀಳಾ ಅವರು ಕಮತಗಿಯ ಅರಿಷಿಣಗೋಡಿಯವರ 'ಶ್ರೀ ಹುಚ್ಚೇಶ್ವರ ನಾಟ್ಯ ಸಂಘ'ದಲ್ಲಿ ಹದಿನೈದು-ಹದಿನಾರು ವರ್ಷಗಳಿಗೂ ಮಿಕ್ಕಿ ನಟಿಸಿದ್ದಾರೆ. ಅವರು ಅಲ್ಲಿ

ಪಾತ್ರ ಮಾಡುತ್ತಿದ್ದಾಗ ಅಬ್ಬಾಸ ಅಲಿ ಅಳವಂಡಿ, ಕೀರ್ತೆಪ್ಪ ಕೊಪ್ಪರದ, ಗೂಡುಸಾಬ ಇಲಕಲ್ಲ, ಶಂಕ್ರಯ್ಯ ರಕ್ಕಸಗಿ, ಐಹೊಳೆ ಸಾರಂಗಯ್ಯ, ಗದುಗಿನ ರೆಹಮಾನ್, ಯಲ್ಲಪ್ಪ, ಕಲ್ಲೂರು ಜಯಮ್ಮ, ಅಮ್ಮಣ್ಣಗಿ ಲೀಲಮ್ಮ, ಗದುಗಿನ ನೂರಜಾನ, ಪತ್ತಾರ ಶಾಂತಮ್ಮ, ಮಮತಾ ಗುಡೂರ, ಬಸವಣ್ಣೆಮ್ಮ– ಮೊದಲಾದ ನಟ–ನಟಿಯರು ವೈವಿಧ್ಯಮಯ ಪಾರ್ಟುಗಳನ್ನು ಮಾಡುತ್ತಿದ್ದರು.

ಸಂಘದ ಯಜಮಾನರಾದ ಅರಿಷಿಣಗೋಡಿಯವರು ತಮ್ಮ ಕಂಪನಿಯ ಎಲ್ಲ ಕಲಾವಿದರನ್ನು ಪ್ರೀತಿ, ಗೌರವದಿಂದ ಕಾಣುತ್ತಿದ್ದರಂತೆ. ಪ್ರಮೀಳಮ್ಮನ ಜೊತೆಗೆ ಸದಾ ಅವರ ದಾದಿ ಶಕೀಲಾ (ಶಕುಂತಲಾ) ಇರುತ್ತಿದ್ದಳು. ಅವರಿಬ್ಬರ ನಡುವಿನ ಅಗಾಧವಾದ ವಾತ್ಸಲ್ಯ, ಅನ್ಯೋನ್ಯತೆಯನ್ನು, ಅರಿಷಿಣಗೋಡಿಯವರು ನೋಡಿದ್ದರು. ನಾಟಕ ಮಂಡಳಿ ಜಮಖಂಡಿಯಲ್ಲಿ 'ಕೊಂಡು ತಂದ ಗಂಡ' ನಾಟಕವನ್ನು ಪ್ರಯೋಗಿಸುತ್ತಿದ್ದರು. ಆ ಸಮಯದಲ್ಲಿ ಪ್ರಮೀಳಮ್ಮನ ಅಜ್ಜಿ ಶಕುಂತಲಾ ಅವರ ಮೈಯಲ್ಲಿ ಹುಷಾರು ಇರಲಿಲ್ಲವಂತೆ. ಈ ವಿಷಯ ತಿಳಿದ ಒಡೆಯರಾದ ಬಿ. ಆರ್. ಅರಿಷಿಣಗೋಡಿಯವರು ಇಳಿವಯಸ್ಸಿನಲ್ಲಿ, ಕೊನೆಗಾಲದಲ್ಲಿ ಮೊಮ್ಮಗಳು ಅಜ್ಜಿಯ ಬಳಿಯಿದ್ದು ಆರೈಕೆ ಮಾಡಲಿ ಎಂಬ ಉದ್ದೇಶದಿಂದ ಪ್ರಮೀಳಾ ಅವರಿಗೆ ಹದಿನೈದು ದಿನಗಳ ಕಾಲ ರಜೆ ನೀಡಿ ಮಾನವೀಯತೆ ಮೆರೆದರು. ಅದಕ್ಕಾಗಿ ಪ್ರಮೀಳಮ್ಮ ಮಾಲೀಕರ ಔದಾರ್ಯವನ್ನು, ಉಪಕಾರವನ್ನು ಇಂದಿಗೂ ಸ್ಮರಣೆ ಮಾಡಿಕೊಳ್ಳುತ್ತಾರೆ. ತಂದೆ, ತಾಯಿ ಹಾಗೂ ಅಜ್ಜಿ ಮೂವರನ್ನು ಕಮತಗಿ ಕಂಪನಿಯಲ್ಲಿದ್ದಾಗಲೆ ಕಳೆದುಕೊಂಡರು. ಅವರ ಮೇಲೆ ಅಷ್ಟೊಂದು ಪ್ರೀತಿ. ನಾನು ವಿಷಯ ಸಂಗ್ರಹಕ್ಕಾಗಿ ಪ್ರಮೀಳಮ್ಮನವರ ಮನೆಗೆ ಹೋದಾಗ ಮೂವರನ್ನು ನೆನೆಸಿಕೊಂಡು ಕಣ್ಣೀರು ಹಾಕುತ್ತ ಕೆಲ ನಿಮಿಷ ಸುಮ್ಮನಾಗಿ ಬಿಟ್ಟರು. ಅಷ್ಟೊಂದು ಭಾವುಕರಾಗಿದ್ದರು.

ಪ್ರಮೀಳಮ್ಮ ಸುಮಾರು ಆರೇಳು ದಶಕಗಳ ಕಾಲ ಕನ್ನಡ ರಂಗಭೂಮಿಯ ಸೇವೆ ಸಲ್ಲಿಸಿದ್ದಾರೆ. ಅವರು ನಾಡಿನ ಸುಪ್ರಸಿದ್ಧ ವೃತ್ತಿನಾಟಕ ಕಂಪನಿಗಳಲ್ಲಿ ನಟಿಸಿದ್ದಾರೆ. ಒಂದೂವರೆ ದಶಕಗಳಿಗೂ ಹೆಚ್ಚು ಕಾಲ ಕಮತಗಿ ನಾಟ್ಯ ಮಂಡಳಿಯಲ್ಲಿ ವೈವಿಧ್ಯಮಯ ಪಾತ್ರಗಳಲ್ಲಿ ಮಿಂಚಿ ಮೆರೆದವರು. ಅಲ್ಲಿ ಸಹೋದರಿ ಮಮತಾ ಗುಡೂರ ಸಹ ಕೆಲ ವರ್ಷ ವಿವಿಧ ಭೂಮಿಕೆಗಳಲ್ಲಿ ಅಭಿನಯಿಸಿದ್ದಾರೆ. ಮಮತಾ ಅತ್ಯದ್ಭುತ ನಟಿ, ಅಮೋಘ ಕಲಾವಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ತಂಗಿಯ ನಟನೆಯ ಬಗ್ಗೆ ಅಕ್ಕ ಈಗಲೂ ಪ್ರಶಂಸೆ ವ್ಯಕ್ತಪಡಿಸುತ್ತಾರೆ. ಆದರೆ ತಂಗಿ ಮಮತಾಳ ಶ್ರೇಷ್ಠ ನಟನಾ ಪ್ರತಿಭೆಗೆ ತಕ್ಕ ಒಳ್ಳೆಯ ಪಾತ್ರಗಳು, ಹೆಚ್ಚು ಅವಕಾಶಗಳು ಅಲ್ಲಿ ಸಿಗಲಿಲ್ಲ. ಇದರಿಂದ ಅಕ್ಕ ಪ್ರಮೀಳಾಗೆ ಮುನಿಸು. ಈ ವಿಷಯವಾಗಿ ಮಾಲೀಕರಾದ ಅರಿಷಿಣಗೋಡಿಯವರು ಮತ್ತು ಕಲಾವಿದೆ ಪ್ರಮೀಳಮ್ಮನವರ ನಡುವೆ

ಭಿನ್ನಾಭಿಪ್ರಾಯಗಳು ಬಂದವು. ಈ ಕಾರಣಕ್ಕಾಗಿ ಪ್ರಮೀಳಮ್ಮನವರು ಕಮತಗಿ ಕಂಪನಿಯನ್ನು ತೊರೆದರು.

## 'ಶ್ರೀ ಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ' ಸುಳ್ಳ

ಬಿ.ಆರ್. ಅರಿಷಿಣಗೋಡಿಯವರ 'ಶ್ರೀ ಹುಚ್ಚೇಶ್ವರ ನಾಟ್ಯ ಸಂಘ'ವನ್ನು ಬಿಟ್ಟ ಮೇಲೆ ಪ್ರಮೀಳಮ್ಮನವರು ೧೯೭೭ರಲ್ಲಿ ಸುಳ್ಳದ ಶ್ರೀಮಂತ ದೇಸಾಯಿ ಅವರ 'ಶ್ರೀ ಶೈಲ ಮಲ್ಲಕಾರ್ಜುನ ನಾಟ್ಯ ಸಂಘ'ವನ್ನು ಸೇರಿದರು. ಕರ್ನಾಟಕ ವೃತ್ತಿರಂಗಭೂಮಿ ಚರಿತ್ರೆಯಲ್ಲಿ ಕೆಲಕಾಲ ವೈಭವದಿಂದ ಮೆರೆದ ಕಂಪನಿ ಇದು. ನೂತನ ಪ್ರಯೋಗಗಳಿಂದಾಗಿ, ಶ್ರೀಮಂತಿಕೆಯಿಂದ ಹೆಸರುವಾಗಿತ್ತು. ಜೀವಂತ ಆನೆ, ಕುದುರೆ, ಒಂಟೆ, ಎತ್ತು, ನಾಯಿ ಮೊದಲಾದ ಪ್ರಾಣಿ-ಪಕ್ಷಿಗಳನ್ನು ರಂಗಮಂಟಪದ ಮೇಲೆ ತಂದ ಹಿರಿಮೆಯುಳ್ಳದ್ದು. 'ಚಲಿಸುವ ರಂಗಭೂಮಿ'ಯನ್ನು ಜಾರಿಗೆ ತಂದುದು ಕೂಡ ಆ ಮಂಡಳಿಯ ಪ್ರಯೋಗ ಸಾಧನೆ ಎನ್ನಬೇಕು.

'ಚಲಿಸುವ ರಂಗಭೂಮಿ'ಯ ಪ್ರಯೋಜನವನ್ನು ಕುರಿತು ಒಂದೆರಡು ಮಾತುಗಳನ್ನು ಇಲ್ಲಿ ಹೇಳುವುದು ಸೂಕ್ತವೆನಿಸುತ್ತದೆ. ಮೊದಮೊದಲು ನಾಟಕದಲ್ಲಿ ಬರುವ ಅನೇಕ ಪ್ರಸಂಗಗಳನ್ನು ಹಲವಾರು ಸನ್ನಿವೇಶಗಳ ಮೂಲಕ ತೋರಿಸಲಾಗುತ್ತಿತ್ತು. ಒಂದು ದೃಶ್ಯ ಮುಗಿದು ನಂತರದ ದೃಶ್ಯ ಪ್ರಾರಂಭವಾಗಲು ಸ್ವಲ್ಪ ಸಮಯ ಬೇಕಾಗುತ್ತಿತ್ತು. ಮುಗಿದ ಸನ್ನಿವೇಶದ ಪರದೆ ಸರಿದು ಮುಂದಿನ ದೃಶ್ಯದ ರಂಗಪರದೆ ಬೀಳುವುದು ತಡವಾದಾಗ ಪ್ರೇಕ್ಷಕರ ಸಿಳ್ಳು, ಕೇಕೆ, ಚಪ್ಪಾಳೆಗಳಿಂದ ಗದ್ದಲದ ವಾತಾವರಣ ನಿರ್ಮಾಣವಾಗುತ್ತಿತ್ತು. ಇಂಥ ಗೊಂದಲವನ್ನು ತಪ್ಪಿಸುವ ಸಲುವಾಗಿ 'ಚಲಿಸುವ ರಂಗಭೂಮಿ'ಎಂದು ನೂತನ ಪ್ರಯೋಗ ವ್ಯವಸ್ಥೆಯನ್ನು ತರಲಾಯಿತು. ಇದರಲ್ಲಿ ದೃಶ್ಯದಿಂದ ದೃಶ್ಯಕ್ಕೆ ರಂಗಪರದೆ ಎಳೆಯುವಂತಿಲ್ಲ. ಒಂದು ಸೀನ್ (ದೃಶ್ಯ) ಮುಗಿಯುತ್ತಿದ್ದಂತೆ ಬಲಬದಿಗೆ ಸರಿಸಿ ಎಡಬದಿಯಲ್ಲಿ ಸಜ್ಜುಗೊಳಿಸಿದ ದೃಶ್ಯವನ್ನು ರಂಗಮಧ್ಯಕ್ಕೆ ತರುವುದು, ಅದು ಮುಗಿಯುತ್ತಿದ್ದಂತೆ ಎಡಬದಿಗೆ ಸರಿಸಿ ಬಲಬದಿಯಯಲ್ಲಿ ಸಜ್ಜುಗೊಳಿಸಿದ ದೃಶ್ಯಾವಳಿಯನ್ನು ಮಧ್ಯದ ರಂಗಸ್ಥಳಕ್ಕೆ ಸರಿಸುವುದು. ಆಯಾ ನಾಟಕಗಳಲ್ಲಿ ಬರುವ ಎಲ್ಲ ದೃಶ್ಯಗಳನ್ನು ಕ್ರಮಬದ್ಧವಾಗಿ, ವ್ಯವಸ್ಥಿತವಾಗಿ ಜೋಡಿಸಿ, ಅವುಗಳನ್ನು ರೇಲ್ವೆ ಕಂಬಿಯಂತಿರುವ ಗಾಲಿಯುಳ್ಳ ಟ್ರ್ಯಾಲಿಗೆ ಅಳವಡಿಸಿ, ಅದರ ಸಹಾಯದಿಂದ ಎಲ್ಲ ದೃಶ್ಯಗಳ ಸೀನರಿಗಳು ತಮ್ಮಷ್ಟಕ್ಕೆ ತಾವೇ ತಿರುಗುವಂತೆ, ಚಲಿಸುವಂತೆ ಮಾಡುತ್ತಿದ್ದರು. ಒಂದು ಸನ್ನಿವೇಶ ಮುಗಿದ ತಕ್ಷಣವೆ ಮುಂದಿನ ಸನ್ನಿವೇಶದ ಸೀನರಿ ತಾನಾಗಿಯೇ ಬರುತ್ತಿತ್ತು. ಅಂತೆಯೇ ಆ ಟ್ರ್ಯಾಲಿ ಸಿಸ್ಟಮ್‌ಗೆ 'ಚಲಿಸುವ ರಂಗಭೂಮಿ' ಅಥವಾ 'ತಿರುಗುವ ರಂಗಭೂಮಿ' ಎಂದು ಕರೆಯುತ್ತಿದ್ದರು.

ಇಂಥ ವ್ಯವಸ್ಥೆ ಕೇವಲ ಸುಳ್ಳದ ದೇಸಾಯಿ ಅವರ ಕಂಪನಿಯಲ್ಲಿ ಮಾತ್ರವಲ್ಲದೆ, ಗೋಕಾಕದ ಹೊಸಮನಿ ಬಸವಣ್ಣೆಪ್ಪನವರ 'ಶ್ರೀ ಶಾರದಾ ಸಂಗೀತ ನಾಟಕ ಮಂಡಳಿ'ಯಲ್ಲಿಯೂ ಇತ್ತು. ಬಸವಣ್ಣೆಪ್ಪನವರು ಮೂವತ್ತಾರು ಪ್ಲಾಟಿನ (ದೃಶ್ಯ) ಸೀನರಿಗಳನ್ನು ನಿರ್ಮಿಸಿದ್ದರೆಂಬುದು ಗಮನಾರ್ಹ ಸಂಗತಿ.

ಪ್ರಮೀಳಮ್ಮನವರು ಸುಳ್ಳದ 'ಶ್ರೀ ಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ'ವನ್ನು ಸೇರಲು ಕಾರಣ ಅವರ ಪರಿಚಿತ (ಮಾವನವರು)ರಾದ ಶ್ರೀ ಸುರೇಶ ರೆಡ್ಡಿ ಅವರು. ಶ್ರೀಯುತರು ಆ ಮಂಡಳಿಯ ವ್ಯವಸ್ಥಾಪಕರು (ಮ್ಯಾನೇಜರ್) ಆಗಿದ್ದರು. ರೆಡ್ಡಿಯವರು ಬಹುಪ್ರೀತಿಯಿಂದ ಪ್ರಮೀಳಮ್ಮನವರನ್ನು ಪಮ್ಮಾ..... ಪಮ್ಮಾ.....ಎಂದು ಕರೆಯುತ್ತಿದ್ದರು. ಸಂಘದ ಒಡೆಯರ ಜೊತೆಗೆ ಮಾತನಾಡಿ, ತಿಂಗಳಿಗೆ ಎಂಟನೂರು ರೂಪಾಯಿ ಸಂಬಳವನ್ನು ನಿಗದಿಪಡಿಸಿ ಕಂಪನಿಗೆ ಕರೆದೊಯ್ದರು. ಮಂಡಳಿ ಧಾರವಾಡದಲ್ಲಿ ಕ್ಯಾಂಪ್ ಮಾಡಿತ್ತು. ಅದು ಬ್ರ್ಯಾಂಚ್ ಕಂಪನಿಯಾಗಿತ್ತು. ಪಿ.ಬಿ. ಧುತ್ತರಗಿ ಕವಿಗಳ 'ಸಿಂಧೂರ ಲಕ್ಷ್ಮಣ' ಎನ್ನುವ ಐತಿಹಾಸಿಕ ನಾಟಕವನ್ನು ಪ್ರಯೋಗಿಸಲಾಗುತ್ತಿತ್ತು. ಆ ನಾಟಕದಲ್ಲಿ ಪ್ರಮೀಳಾ ಅವರಿಗೆ 'ನರಸವ್ವ'ನ ಪಾತ್ರವನ್ನು ಕೊಡಲಾಗಿತ್ತು.

ಧಾರವಾಡಕ್ಕೆ ಹೋದ ದಿನವೆ ಪ್ರಮೀಳಮ್ಮ ಧುತ್ತರಗಿ ಸರೋಜಮ್ಮನವರ 'ನರಸವ್ವ'ನ ಪಾತ್ರಾಭಿನಯವನ್ನು ಕಂಡು ದಂಗಾಗಿ ಮೂಕವಿಸ್ಮಿತೆಯಾದರಂತೆ. "ಸರೋಜಮ್ಮನವರ ಮಾತು, ಪಾತ್ರ ನೋಡಿದವರಿಗೆ ಮೈಜುಮ್ಮೆನಿಸುವಂತೆ ಇದ್ದವು. ನಾಟಕ ಮುಗಿದ ಮೇಲೆ ಪ್ರಮೀಳಮ್ಮ ಸರೋಜಮ್ಮನವರ ಕಾಲಿಗೆ ಬಿದ್ದು ಅಕ್ಕಾ ಏನಿದು? ನಿನ್ನಂತೆ ನನಗೆ ಪಾತ್ರ ಮಾಡಲು ಬರುತ್ತದೆಯೇ? ಎಂದು ಕೇಳಿದಾಗ, ಸರೋಜಮ್ಮ ಎಲೆ ಹುಚ್ಚುಡಗಿ ಏಳು ನೀನು ನನಗಿಂತ ಚೆನ್ನಾಗಿ ಪಾತ್ರ ಮಾಡುವಿ" ಎಂದು ಮೈದಡವಿ ಎಬ್ಬಿಸಿದರಂತೆ. ಅವರ ಆಶೀರ್ವಾದ ಪಡೆದು, ಅವರ ಮಾರ್ಗದರ್ಶನದಲ್ಲಿ ನರಸವ್ವನ ಭೂಮಿಕೆಯನ್ನು ಅತ್ಯಂತ ಸಮರ್ಥವಾಗಿ ಮಾಡಿ ಧಾರವಾಡದ ಸುತ್ತಮುತ್ತಲಿನ ರಂಗ ಪ್ರೇಕ್ಷಕರ ಮನಗೆದ್ದು, ಅವರ ಪ್ರೀತಿ, ಗೌರವ, ಅಭಿಮಾನವನ್ನು ಪ್ರಮೀಳಮ್ಮ ಸಂಪಾದಿಸಿದರು. ಆಗ ಲಕ್ಷ್ಮಣನ ಪಾತ್ರವನ್ನು ಕನ್ನಡ ಚಿತ್ರರಂಗದ ಶ್ರೇಷ್ಠ ಖಳನಾಯಕನಾದ ಸುಧೀರ ಮಾಡುತ್ತಿದ್ದರು. ಪ್ರಮೀಳಮ್ಮ 'ಸಿಂಧೂರ ಲಕ್ಷ್ಮಣನ ತಾಯಿಯಾದ 'ನರಸವ್ವ'ನ ಪಾತ್ರವನ್ನು ಅತ್ಯದ್ಭುತವಾಗಿ ನಿರ್ವಹಿಸುತ್ತಿದ್ದರು. ಹೀಗಾಗಿ ಅವರ ನಡುವೆ ಬಹು ಆತ್ಮೀಯತೆ ಇತ್ತು.

ದೇಸಾಯಿ ಅವರ ನಾಟಕ ಮಂಡಳಿ ಗದಗದಲ್ಲಿ ನಾಟಕಗಳನ್ನು ಪ್ರದರ್ಶಿಸಿತು. ಅಲ್ಲಿಯೂ 'ಸಿಂಧೂರ ಲಕ್ಷ್ಮಣ' ನಾಟಕವನ್ನು ಆಡಲಾಯಿತು. ನರಸವ್ವನ ಪಾತ್ರಧಾರಿ ಪ್ರಮೀಳಮ್ಮನವರ ಅಮೋಘ ಅಭಿನಯ ಗದಗ ಹಾಗೂ ಸುತ್ತಮುತ್ತಲಿನ ಪ್ರೇಕ್ಷಕರನ್ನು

ದಂಗುಗೊಳಿಸಿತ್ತು. ನಾಟಕದ ಹೆಸರು, ನರಸವ್ವಳ ಪಾತ್ರದ ಕೀರ್ತಿ ನೆರೆಯ ಪಟ್ಟಣಗಳವರೆಗೂ ಹಬ್ಬಿತು. ಧುತ್ತರಗಿಯವರು ಅದನ್ನು ಕೇಳಿ ಧಾರವಾಡದಿಂದ ಗದಗ ನಗರಕ್ಕೆ ಬಂದರು. 'ಸಿಂಧೂರ ಲಕ್ಷ್ಮಣ' ನಾಟಕದ ಇಪ್ಪತ್ತನೆಯ ಪ್ರಯೋಗವಿರಬಹುದು ಅಂದು, ಧುತ್ತರಗಿ ಕವಿಗಳು "ಪ್ರಮೀಳಮ್ಮ ನೀನು ಸರೋಜಮ್ಮಳಿಗಿಂತ ಚೆನ್ನಾಗಿ ಪಾತ್ರ ಮಾಡುತ್ತಿರುವಂತೆ, ಈ ವಿಷಯ ನನಗೆ ಮಾತ್ರವಲ್ಲ, ಎಲ್ಲರ ಕಿವಿಗೆ ಬಿದ್ದಿದೆ. ಇಂದು ನಾನು ನಿನ್ನ ಅಭಿನಯವನ್ನು ನೋಡುತ್ತೇನೆ ಎಂದು ಹೇಳಿ, ಅಂದು ಪ್ರಮೀಳಾಳ ಪಾತ್ರ ನೋಡಿ ಮೆಚ್ಚಿಕೊಂಡು 'ನಿನ್ನ ಧ್ವನಿಯಲ್ಲಿ ಒಂದು ಜೀವ ಇದೆ. ಅದರಿಂದಾಗಿಯೇ ನಿನ್ನ ಪಾತ್ರಗಳು ಯಶಸ್ವಿಯಾಗುತ್ತವೆ' ಎಂದು ಹೇಳಿದರಂತೆ."

ಗದಗ ಪಟ್ಟಣದಲ್ಲಿ ನರಸವ್ವನ ಪಾತ್ರದ ಜನಪ್ರಿಯತೆ, ಯಶಸ್ಸು ಕೇಳಿ ಪ್ರಮೀಳಮ್ಮನವರ ನಾಟಕ ಗುರುಗಳಾದ ಎಚ್.ಟಿ. ಮಹಾಂತೇಶ ಶಾಸ್ತ್ರಿಗಳು ಥೇಟರ್‌ಗೆ ಬಂದರು. ನಾಟಕದ ವಿಶ್ರಾಂತಿ ಸಮಯದಲ್ಲಿ ರಂಗಸ್ಥಳದ ಹಿಂಭಾಗಕ್ಕೆ ಬಂದಾಗ ಪ್ರಮೀಳಮ್ಮ ಉಪ್ಪಿಟ್ಟು ತಿನ್ನುತ್ತಿದ್ದರಂತೆ. ಗುರುಗಳನ್ನು ನೋಡಿ ಸಂತೋಷಪಟ್ಟ ಅವಳು ಹಾಳೆಯಲ್ಲಿದ್ದ ಉಪ್ಪಿಟ್ಟನ್ನು ತಿನ್ನಲು ಕರೆಯುವುದಕ್ಕೆ ಹೆದರಿದಳು. ಯಾಕೆಂದರೆ, ಗುರುಗಳನ್ನು ಕರೆಯಲು ಒಂದೆಡೆ ಅಂಜಿಕೆಯಾದರೆ, ಇನ್ನೊಂದೆಡೆ, ತಾನು ಕಮತಗಿ ಕಂಪನಿಯಲ್ಲಿ ನಟಿಸುತ್ತಿದ್ದಾಗ ಅಲ್ಲಿಗೆ ಬಂದ ಗುರುಗಳಿಗೆ ಉಪ್ಪಿಟ್ಟನ್ನು ತಿನ್ನಲು ಕರೆದಾಗ 'ಹುಲಿ ಹಸಿದಾಗ ಹುಲ್ಲನ್ನು ತಿನ್ನುವುದಿಲ್ಲ, ಕಾಶ್ಮೀರದ ಸೇಬು ಕೊಡಬೇಕು' ಎಂದಿದ್ದರಂತೆ. ಈ ಕಾರಣಗಳಿಂದಾಗಿ ಪ್ರಮೀಳಮ್ಮ ಹಾಳೆಯಲ್ಲಿದ್ದ ಉಪ್ಪಿಟ್ಟು ಕೊಡಲು ಹಿಂಜರಿದಳಂತೆ. ಆಗ ಅವಳ ಸ್ಥಿತಿ ನೋಡಿದ ಮಹಾಂತೇಶಶಾಸ್ತ್ರಿಗಳು 'ಪ್ರಮೀಳಾ ನಾನು ಕಂಪನಿಗೆ ಬಂದಿದ್ದೇನೆ. ನಿನ್ನ ಮನೆಗೆ ಬಂದಾಗ ಆದರ ಆತಿಥ್ಯಕೊಡುವೆಯಂತೆ' ಎಂದು ಅವಳ ಕೈಯಲ್ಲಿದ್ದು ಉಪ್ಪಿಟ್ಟು ತಿಂದು ನೀನು 'ಮೇರಿ' ಪಾತ್ರವನ್ನು ಎಂದು ಅಭಿನಯಿಸುವೆಯೋ ಅಂದು ಆ ಪಾತ್ರವನ್ನು ನೋಡಲು ಬರುವೆ ಎಂದು ಹೇಳಿಹೋದರಂತೆ.

ಸುಳ್ಳದ ಕಂಪನಿಯ 'ಸಿಂಧೂರ ಲಕ್ಷ್ಮಣ' ನಾಟಕದಲ್ಲಿ ಮೇರಿ ಪಾತ್ರ ಮಾಡುತ್ತಿದ್ದ ತುಮಕೂರು ಭಾಗದ ಸುಭದ್ರಮ್ಮ ಹೆರಿಗೆಗೆಂದು ಊರಿಗೆ ಹೋದಾಗ ಆ ಪಾತ್ರವನ್ನು ಮಾಡಲು ಪ್ರಮೀಳಮ್ಮನವರಿಗೆ ಒಪ್ಪಿಸಲಾಗಿತ್ತು. ಗುರುಗಳಾದ ಎಚ್.ಟಿ. ಮಹಾಂತೇಶ ಶಾಸ್ತ್ರಿಗಳ ಆಸೆಯನ್ನು ಈಡೇರಿಸುವ ಮೂಲಕ ಅವರಿಗೆ ಆನಂದವನ್ನುಂಟುಮಾಡಬೇಕೆಂಬ ಉದ್ದೇಶದಿಂದ ಮೇರಿ ಪಾತ್ರವನ್ನು ಸವಾಲಾಗಿ ಸ್ವೀಕರಿಸಿ ಚೆನ್ನಾಗಿ ತಯಾರಿ ಮಾಡಿದ್ದರು. ದುರ್ವಿಧಿಯಂತೆ ಪ್ರಮೀಳಮ್ಮ ಮೇರಿ ಪಾತ್ರ ಮಾಡುವ ದಿನವೇ ಮಹಾಂತೇಶಶಾಸ್ತ್ರಿಗಳು ತೀರಿಕೊಂಡರಂತೆ. ಪ್ರಮೀಳಮ್ಮ

ದು:ಖಭಾರದಿಂದ ಅಂದು ನಟಿಸಲಿಲ್ಲ ಮುಂದೆ ಕೇವಲ ಎರಡ್ಮೂರು ಪ್ರಯೋಗಗಳಲ್ಲಿ ಮಾತ್ರ ಅಭಿನಯಿಸಿದರು. ಆಮೇಲೆ ಯಾವತ್ತೂ ಮೇರಿ ಪಾತ್ರವನ್ನು ಮಾಡಲಿಲ್ಲ. ಕಂಪನಿಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಎಚ್.ಟಿ. ಅರಸು, ಕಲಾವಿದರಾದ ಸುಧೀರ, ಕುಷ್ಟಗಿ ಶಂಕರಣ್ಣ ಮೊದಲಾದವರು ಮೇರಿ ಪಾತ್ರದ ಅಭಿನಯಕ್ಕಾಗಿ ಪ್ರಮೀಳಮ್ಮನವರನ್ನು ಒತ್ತಾಯಿಸಿದರು. ಆ ಪಾತ್ರದ ಬಗೆಗೆ ಯೋಚಿಸುತ್ತಿದ್ದಾಗ ಗುರುಗಳಾದ ಎಚ್. ಟಿ. ಮಹಾಂತೇಶಶಾಸ್ತ್ರಿಗಳು ನೆನಪಾಗುತ್ತಿದ್ದರು. ಅದಕ್ಕಾಗಿ 'ಆ ಪಾತ್ರಕ್ಕೆ ಬಣ್ಣ ಹಚ್ಚಲು ಆಗುತ್ತಿಲ್ಲ. ನನಗೆ ದು:ಖವಾಗುತ್ತದೆ. ನನ್ನ ಪಾತ್ರ ಬೇರೆಯವರಿಗೆ ಕೊಡಿ ಇಲ್ಲದಿದ್ದರೆ ನಾಟಕ ಕಂಪನಿ ಬಿಡುತ್ತೇನೆ' ಎಂದು ಖಂಡ ತುಂಡಾಗಿ ಹೇಳಿಬಿಟ್ಟರು. ಆಗ ಸಂಘದವರು ತಾರಾಶೀ ಎಂಬ ಸಿನಿಮಾ ನಟಿಯನ್ನು ಕರೆತಂದು ಮೇರಿ ಪಾತ್ರ ಮಾಡಿಸಿದರಂತೆ.

ಗದಗಿನಿಂದ ನಾಟಕ ಮಂಡಳಿ ಜಮಖಂಡಿಗೆ ಹೋಯಿತು. ಅಲ್ಲಿ ಕಂಪನಿಯ ಪ್ರಮುಖ ನಾಟಕಗಳೊಂದಿಗೆ 'ಸಿಂಧೂರ ಲಕ್ಷ್ಮಣ'ವನ್ನು ಪ್ರಯೋಗಿಸಲಾಯಿತು. ನಾಟಕದ ನರಸವ್ವನ ಪಾತ್ರಧಾರಿ ಪ್ರಮೀಳಾ ಅವರಿಗೆ ಆ ಸಂದರ್ಭದಲ್ಲಿ ಹೊಟ್ಟೆಗೆ ಸಂಬಂಧಿಸಿದ ಕಾಯಿಲೆಯೊಂದು ಕಾಡಲಾರಂಭಿಸಿತು. ಆಗ ಕಂಪನಿಯಲ್ಲಿ ನರಸವ್ವನ ಪಾರ್ಟು ಮಾಡುವ ಕಲಾವಿದೆಯರು ಇದ್ದಾಗಲೂ ಎಚ್.ಟಿ. ಅರಸರು. ಅವರಿಂದ ಮಾಡಿಸಲಿಲ್ಲ. ಬದಲಾಗಿ ಒತ್ತಾಯದಿಂದ ಪ್ರಮೀಳಮ್ಮನವರಿಂದಲೇ ಮಾಡಿಸುತ್ತಿದ್ದರು. ಒಂದು ದಿನವಂತೂ ನರಸವ್ವನ ಪಾತ್ರ ಮಾಡುತ್ತಿದ್ದ ವೇಳೆ ಪ್ರಮೀಳಮ್ಮನವರಿಗೆ ಹೊಟ್ಟೆನೋವು ಕಾಣಿಸಿತು. ಅದನ್ನು ಲೆಕ್ಕಿಸದೆ ಎಡಗೈಯಲ್ಲಿ ಹೊಟ್ಟೆ ಹಿಡಿದುಕೊಂಡು ನೋವುನುಂಗುತ್ತಲೇ ಸಂಭಾಷಣೆ ಹೇಳಿದರು. ತಮ್ಮ ಸ್ವಾರ್ಥಕ್ಕಾಗಿ ನಿರ್ದಯೆಯಿಂದ ದುಡಿಸಿಕೊಳ್ಳುವವರ ಬಗೆಗೆ ಬೇಸರವಾಯಿತು. ಅದರಿಂದ ಮುಕ್ತಿ ಪಡೆಯುವದಕ್ಕಾಗಿ ತಮ್ಮನ ಹೆಂಡತಿಯ ಹೆರಿಗೆಯ ನೆಪ ಹೇಳಿದರು. ಇದಕ್ಕೂ ಎಚ್.ಟಿ. ಅರಸರಿಗೆ ಮನ ಕರಗಲಿಲ್ಲ. ಇದರಿಂದ ಪ್ರಮೀಳಮ್ಮನವರು ಸಾಕಷ್ಟು ನೊಂದುಕೊಂಡರು. ಈ ಘಟನೆ ನಡೆದ ಕೆಲವೇ ದಿನಗಳಲ್ಲಿ ತಮ್ಮನ ಹೆಂಡತಿ ಹೆರಿಗೆಯಾಯಿತು. ಪ್ರಮೀಳಮ್ಮನವರ ಅತ್ತೆ ಹುಸೇನವ್ವ ಈ ವಿಷಯ ಕುರಿತಾಗಿ ಟೆಲಿಗ್ರಾಂ ಕೊಟ್ಟರು. ಅದನ್ನು ತೆಗೆದುಕೊಂಡು ಹೋಗಿ ಎಚ್.ಟಿ. ಅರಸರಿಗೆ ತೋರಿಸಿದಾಗ ಪ್ರಮೀಳಾ ಅವರಿಗೆ ಮರುದಿನ ಊರಿಗೆ ಬರಲು ಪರವಾನಿಗೆ ಸಿಕ್ಕಿತು.

ಊರಿಗೆ ಬಂದ ಪ್ರಮೀಳಮ್ಮ ಮರಳಿ ಕಂಪನಿಗೆ ಹೋಗಲಿಲ್ಲ. ಯಾಕೆಂದರೆ, ತನ್ನ ಹೊಟ್ಟೆನೋವು, ಸಹೋದರನ ಹೆಂಡತಿಯ ಹೆರಿಗೆಯ ಸಮಯ-ಇವಕ್ಕೆ ಸ್ಪಂದಿಸದೆ ಅಮಾನವೀಯತೆ, ನಿಷ್ಕರುಣೆಯನ್ನು ತೋರಿದವರಿಗೆ ಮುಖ ತೋರಬಾರದೆಂದು. ಅವರು ಕಂಪನಿಗೆ ಪುನ: ಬರದೆ ಹೋದಾಗ ಸ್ವತ: ಕಂಪನಿಯ ಒಡೆಯರಾದ ಸುಳ್ಳದ

ಶ್ರೀಮಂತ ದೇಸಾಯಿಯವರು ಗುಡೂರಿಗೆ ಬಂದು ಪಮ್ಮಮ್ಮ ಬಾ ಎಂದು ಕರೆದರೂ ಹೋಗಲಿಲ್ಲ. ಪ್ರಮೀಳಮ್ಮ ಸುಳ್ಳದ ದೇಸಾಯಿ ಅವರ ಕಂಪನಿ ಮೂಲಕ ಏಳೆಂಟು ತಿಂಗಳು ನಟಿಸಿ, ನಾಡಿನಾದ್ಯಂತ ನರಸವ್ವನ ಪಾತ್ರದಿಂದ ಮನೆಮಾತಾದರು.

ಕರ್ನಾಟಕ ವೃತ್ತಿರಂಗಭೂಮಿಯ ಶ್ರೇಷ್ಠ ನಟರೂ ನಾಟಕ ನಿರ್ದೇಶಕರೂ ಸಂಘದೊಡೆಯರು ಆದ ಗುಡಗೇರಿಯ ಎನ್. ಬಸವರಾಜ ಅವರಿಂದ ಪ್ರಮೀಳಮ್ಮನವರಿಗೆ ಆಹ್ವಾನ ಬಂದಿತು. ಸುಳ್ಳದ ದೇಸಾಯಿ ಅವರ 'ಶ್ರೀ ಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ'ವನ್ನು ತೊರೆದು ಬಂದ ಮೇಲೆ ಗುಡೂರಲ್ಲಿಯೇ ನೆಲಸಿದ್ದ ಪ್ರಮೀಳಾ ಅವರಿಗೆ ಎನ್. ಬಸವರಾಜರ ಆಹ್ವಾನ ಸಮಾಧಾನ, ಸಂತೋಷವನ್ನು ತಂದಿತು. ಆ ಆಹ್ವಾನವನ್ನು ಸ್ವೀಕರಿಸಿ ಗುಡಗೇರಿ ಕಂಪನಿಯನ್ನು ಸೇರಿದರು.

## 'ಶ್ರೀ ಸಂಗಮೇಶ್ವರ ನಾಟ್ಯ ಸಂಘ' ಗುಡಗೇರಿ.

ಅದು ೧೯೭೦ನೇ ಇಸ್ವಿ ಇರಬಹುದು. ಗುಡಗೇರಿ ಬಸವರಾಜರ 'ಶ್ರೀ ಸಂಗಮೇಶ್ವರ ನಾಟ್ಯ ಸಂಘ'ವು ದಾವಣಗೆರೆಯಲ್ಲಿ ವಾಸ್ತವ್ಯ ಹೂಡಿತ್ತು. ಸಂಘದ ಯಜಮಾನರ ಆಹ್ವಾನದ ಮೇರೆಗೆ ಪ್ರಮೀಳಮ್ಮನವರು ದಾವಣಗೆರೆ ಕ್ಯಾಂಪಿನಲ್ಲಿದ್ದ ಮಂಡಳಿಯನ್ನು ಸೇರಿದರು. ಇವರು ಕಂಪನಿಗೆ ಹೋದಾಗ ಆರ್.ಡಿ. ಕಾಮತರು ಬರೆದ 'ಹೈಬ್ರಿಡ್ ಹೆಣ್ಣು' ನಾಟಕವನ್ನು ಆಡಿಸಲಾಗುತ್ತಿತ್ತು. ಅದು ನೂರು ಪ್ರಯೋಗಗಳನ್ನು ಕಂಡಿತು. ನಾಟಕದಲ್ಲಿ ಬರುವ 'ಸುಮಿತ್ರಾ ದೇಸಾಯಿ' ಎನ್ನುವ ಪಾತ್ರವನ್ನು ದಾವಣಗೆರೆ ರಾಜಮ್ಮ ಅಭಿನಯಿಸುತ್ತಿದ್ದರು. ನಾಟಕದ ೧೦೧ನೆಯ ಪ್ರಯೋಗದಂದು ಮಾಲೀಕರಾದ ಎನ್. ಬಸವರಾಜರು ಪ್ರಮೀಳಮ್ಮನನ್ನು ಕರೆದು ಇಂದು ಸುಮಿತ್ರಾ ದೇಸಾಯಿ ಪಾತ್ರವನ್ನು ನೀನು ಮಾಡು ಎಂದು ಹೇಳಿದರಂತೆ. ಆದರೆ ಪ್ರಮೀಳಮ್ಮ ಅದಕ್ಕೆ ಒಪ್ಪಲಿಲ್ಲವಂತೆ. ೧೦೦ ಪ್ರಯೋಗಗಳವರೆಗೆ ಅಭಿನಯಿಸಿದ ರಾಜಮ್ಮನವರೆ ೧೦೧ನೆಯ ಪ್ರಯೋಗದಲ್ಲಿ ಕಾಣಿಸಿಕೊಳ್ಳಲಿ. ಇಂದು ದೊಡ್ಡವರು ಬಂದಿರುತ್ತಾರೆ. ನಾನು ನಟಿಸಿದರೆ ಅವರಿಗೆ ನೋವಾಗಬಹುದು. ನನಗೆ ಈ ಪಾತ್ರ ಕಲಿಯಲು ಹದಿನೈದು ದಿನಗಳ ಸಮಯ ಬೇಕು. ಅದಕ್ಕಾಗಿ ಇಂದು ಅವರು ಪಾರ್ಟು ಮಾಡಲಿ, ನಾನು ನಾಳೆ ಮಾಡುತ್ತೇನೆ ಎಂದು ಹೇಳಿ ಔದಾರ್ಯವನ್ನು ಮೆರೆದರು.

ಬಸವರಾಜರು ಪ್ರಮೀಳಮ್ಮಗೆ ತಿಂಗಳಿಗೆ ೧೧ ನೂರು ರೂಪಾಯಿಗಳ ಸಂಬಳ ಕೊಡುವುದಾಗಿ ಒಪ್ಪಿಸಿದ್ದರು. ಈ ವಿಷಯ ಗೊತ್ತಾದ ಮೇಲೆ ಬಸವರಾಜರ ಆತ್ಮೀಯ ಸ್ನೇಹಿತರೊಬ್ಬರು ಒಂದು ದಿನ ಪ್ರಮೀಳಾ ಅವರನ್ನು ಉದ್ದೇಶಿಸಿ 'ಇವಳೇನು ಚಂದ ಇದ್ದಾಳ, ಇವಳಿಗ್ಯಾಕೆ ಇಷ್ಟೊಂದು ಪಗಾರ ಎಂದು ಪ್ರಶ್ನಿಸಿದರಂತೆ', ಅದಕ್ಕೆ

ಉತ್ತರವೆಂಬಂತೆ ಬಸವರಾಜರು 'ಅವರ ಪಾತ್ರವನ್ನು ನೋಡು ಆಮೇಲೆ ನಿನಗೆ ಗೊತ್ತಾಗುತ್ತೆ, ನಾನೇಕೆ ೧೧ನೂರು ರೂಪಾಯಿ ಕೊಟ್ಟೆನೆಂದು'. ಎಂದರಂತೆ ಆಗ ಆ ವ್ಯಕ್ತಿ ಪ್ರಮೀಳಮ್ಮ ಆ ಮಂಡಳಿಯಲ್ಲಿ ಅಭಿನಯಿಸುವ ಮೊದಲ ದಿನದಂದು ಪ್ರಥಮ ಸಾಲಿನಲ್ಲಿಯೆ ಕುಳಿತು ಎವೆಯಿಕ್ಕದೆ ಪಾರ್ಟನ್ನು ವೀಕ್ಷಿಸಿದರಂತೆ. ತಾನು ಅಂದ ತಪ್ಪಿಗೆ ಅವರು ಪಶ್ಚಾತ್ತಾಪಪಟ್ಟು ಪ್ರಮೀಳಮ್ಮನವರ ಹತ್ತಿರ ಬಂದು 'ತಂಗಿ ನಿನ್ನ ಬಗ್ಗೆ ನಾನೇನೋ ತಿಳಿದುಕೊಂಡಿದ್ದೆ, ನಿನ್ನ ಅಭಿನಯದ ಬಗ್ಗೆ ಅನುಮಾನ ಪಟ್ಟು, ಇವಳಿಗೆ ಏಕೆ ಇಷ್ಟೊಂದು ಪಗಾರ ಎಂದು ಗೆಳೆಯನನ್ನು ಕೇಳಿದ್ದೆ. ಆದರೆ ನಾಟಕದಲ್ಲಿನ ನಿನ್ನ ಪಾತ್ರ ನೋಡಿ ನಾನು ಅಂದದ್ದು ತಪ್ಪಾಯಿತು ಎನಿಸಿತು' ಎಂದು ಅವಳನ್ನು ಗೌರವದಿಂದ ದಿನಾಲೂ ಮಾತನಾಡಿಸತೊಡಗಿದರಂತೆ.

ಈ ಘಟನೆ ಪ್ರಮೀಳಮ್ಮನವರ ಪ್ರತಿಭಾ ಸಾಮರ್ಥ್ಯಕ್ಕೆ ದ್ಯೋತಕದಂತಿದೆ. ಅವರ ಪಾತ್ರಾಭಿನಯದ ಬಗ್ಗೆ ಯಾರಾದರೂ ಅಪಸ್ವರ ಎತ್ತಿದರೆ, ಪಾತ್ರವನ್ನು ಸವಾಲಾಗಿ ಸ್ವೀಕರಿಸಿ ಅದಕ್ಕೆ ತಮ್ಮ ಪ್ರತಿಭಾ ಶ್ರೀಮಂತಿಕೆಯ ಉಸಿರಿನಿಂದ ಜೀವ ತುಂಬಿ ನಟಿಸಿ ಎದುರಾಳಿಗಳ ಬಾಯ್ಮುಚ್ಚಿಸಿ ಪಶ್ಚಾತ್ತಾಪ ಪಟ್ಟುಕೊಳ್ಳುವಂತೆ ಮಾಡುತ್ತಿದ್ದರು. 'ಹೈಬ್ರಿಡ್ ಹೆಣ್ಣು' ನಾಟಕದ ಸುಮಿತ್ರಾ ದೇಸಾಯಿ ಭೂಮಿಕೆಯನ್ನು ಅಮೋಘವಾಗಿ ಅಭಿನಯಿಸಿ ಆ ಮೂಲಕ ರಂಗಪ್ರೇಮಿಗಳ ಹೃದಯ ಸಿಂಹಾಸನದಲ್ಲಿ ರಾರಾಜಿಸಿದರು. ಪ್ರಮೀಳಾ ಅವರ ಈ ಪಾತ್ರದ ಜನಪ್ರಿಯತೆ ಕಂಡು, ಕೇಳಿ ಎನ್. ಬಸವರಾಜರು ಅವರಿಗೆ ಬೇರೆ ಬೇರೆ ನಾಟಕಗಳಲ್ಲಿ ಪ್ರಮುಖ ಪಾರ್ಟುಗಳನ್ನು ನೀಡಿ ಪ್ರೋತ್ಸಾಹಿಸಿದರು.

ಗುಡಿಗೇರಿ ಕಂಪನಿಯ ಜನಪ್ರಿಯ ನಾಟಕಗಳಲ್ಲಿ ಎಚ್.ಟಿ. ಮಹಾಂತೇಶ ಶಾಸ್ತ್ರಿಗಳು ರಚಿಸಿದ 'ಜಹಾಗೀದಾರ ಜಗಳ'ವೂ ಒಂದು. ಹಣ, ಆಸ್ತಿ, ಅಧಿಕಾರ, ಒಡೆತನ ಎನ್ನುವ ಈ ಸಂಪತ್ತುಗಳಿಗಿಂತ ಪ್ರೀತಿ ಎಂಬ ಮೌಲ್ಯ ಶ್ರೇಷ್ಠವಾದುದು. ಯಾಕೆಂದರೆ ಹಣ, ಆಸ್ತಿ, ಅಧಿಕಾರಗಳು ಶಾಶ್ವತವಾದವುಗಳಲ್ಲ. ಪ್ರೀತಿ ಸಂಪತ್ತು ಚಿರಾಯು ಎಂಬ ಸತ್ಯವನ್ನು ಪ್ರತಿಪಾದಿಸುವ ಸಾಮಾಜಿಕ ನಾಟಕವಿದು. ಇದನ್ನು ದಾವಣಗೆರೆ ಕ್ಯಾಂಪಿನಲ್ಲಿ ಪ್ರಯೋಗಿಸಲಾಯಿತು. ಲಕ್ಷ್ಮೇಶ್ವರದ ಶಿವಯ್ಯ ಮಾಸ್ತರರು ಈ ನಾಟಕವನ್ನು ಕಲಿಸಿಕೊಟ್ಟವರು. ಪ್ರಮೀಳಮ್ಮ ಗುಡಗೇರಿ ನಾಟಕ ಮಂಡಳಿಯಲ್ಲಿ ನಟಿಸಿದ ಎರಡನೆಯ ನಾಟಕವಿದು. ಬಾಬು ದೇಸಾಯಿ, ಕಾತ್ಯಾಯನಿ ದೇಸಾಯಿ, ಮಧುವಾಣಿ ಇವು ನಾಟಕದ ಪ್ರಧಾನ ಪಾತ್ರಗಳು. ಪ್ರಮೀಳಮ್ಮನದು ಕಾತ್ಯಾಯನಿ ದೇಸಾಯಿ ಪಾತ್ರ. ಅದು ಅವರಿಗೆ ಸಾಕಷ್ಟು ಹಿರಿಮೆ, ಶ್ರೇಯಸ್ಸು ತಂದಿದೆ.

'ಜಹಾಗೀದರ ಜಗಳ' ನಾಟಕದ ಕಥಾವಸ್ತು ಹೀಗಿದೆ. ದೇಸಾಯಿ ಮನೆತನದ ಕಥಾ ಹಂದರ ಇಲ್ಲಿದೆ. ನಾಟಕದ ನಾಯಕ ಬಾಬು ದೇಸಾಯಿ. ಮದುವೆಯ ವಯಸ್ಸಿಗೆ ಬಂದ ಬಾಬು ದೇಸಾಯಿಗೆ ಅವರ ತಂದೆ ದೇಸಾಯಿ ಮನೆತನಕ್ಕೆ ಸೇರಿದ ಕಾತ್ಯಾಯನಿ

ದೇಸಾಯಿ ಎನ್ನುವ ಕನ್ಯೆಯೊಂದಿಗೆ ವಿವಾಹ ಮಾಡಬೇಕೆಂದು ನಿರ್ಧರಿಸಿರುತ್ತಾನೆ. ಆದರೆ ಮಗ ಬಾಬುದೇಸಾಯಿ ತನ್ನ ಗುರುವಿನ ಮಗಳಾದ 'ಮಧುವಾಣಿ'ಯನ್ನು ಪ್ರೀತಿಸುತ್ತಿರುತ್ತಾನೆ. ಈ ವಿಷಯ ಕಾತ್ಯಾಯನಿಗೆ ತಿಳಿದಿರುತ್ತದೆ. ಒಮ್ಮೆ ಕಾತ್ಯಾಯನಿಯು ಮುತ್ತಿನ ಹಾರವನ್ನು ಬಾಬು ದೇಸಾಯಿಗೆ ಹಾಕಲು ಮುಂದೆ ಬರುತ್ತಾಳೆ. ಮನಸ್ಸಿಲ್ಲದ ಆತ ಅದನ್ನು ಕೊರಳಿಗೆ ಹಾಕಿಸಿಕೊಳ್ಳದೆ, ಕೈಯಿಂದ ತೆಗೆದುಕೊಳ್ಳುತ್ತಾನೆ. ಆದರೆ ಅದೇ ಸಮಯದಲ್ಲಿ ಮಧುವಾಣಿ ತಂದ ಹೂವಿನ ಹಾರವನ್ನು ಹಾಕಿಸಿಕೊಳ್ಳುತ್ತಾನೆ. ಈ ಘಟನೆಯಿಂದ ಅವಮಾನಿತಳಾದ ಕಾತ್ಯಾಯಿನಿಯಲ್ಲಿ ಕೋಪ ಬುಸುಗುಡುತ್ತಿತ್ತು.

ಒಂದು ದಿನ ಕಾತ್ಯಾಯನಿ ಮಧುವಾಣಿಯನ್ನು ತನ್ನ ವಾಡೆಗೆ ಕರೆಸಿಕೊಂಡು 'ಬಾಬು ದೇಸಾಯಿ ಒಂದು ಹೆಣ್ಣನ್ನು ಇಷ್ಟಪಟ್ಟ ಮೇಲೆ ಮತ್ತೊಂದು ಹೆಣ್ಣನ್ನು ಕಣ್ಣೆತ್ತಿ ನೋಡಲಾರ. ಅದಕ್ಕಾಗಿ ನೀನು ಅವನನ್ನು ಪ್ರೀತಿಸುವುದಿಲ್ಲ ಎನ್ನುವುದಾದರೆ ಈ ಮುತ್ತಿನಸರವನ್ನು ತೆಗದುಕೋ. ನೀನು ಮಾತು ತಪ್ಪಬೇಡ. ಅಂದರೆ ಅವನನ್ನು ಪ್ರೀತಿಸದಂತೆ ಇರು. ಈ ಮುತ್ತಿನ ಸರ, ಮುತ್ತಿನ ಸರವಾಗಿ ಇರಲಿ ಹೊರತು ನಿನ್ನ ಕೊರಳಿಗೆ ನೇಣಾಗಬಾರದು' ಎಂದು ಹೇಳಿಕೊಟ್ಟಳು.

ಒಮ್ಮೆ ಕಾತ್ಯಾಯನಿ ಬೇಟೆಗೆ ಹೋದಾಗ ಬಾಬು ದೇಸಾಯಿ ಹಾಗೂ ಮಧುವಾಣಿಯರು ಸರಸಸಲ್ಲಾಪದಲ್ಲಿ ತೊಡಗಿರುವುದನ್ನು ಕಂಡು ರೋಸಿಹೋಗಿ ಅವಳ ಕಣ್ಣುಗಳನ್ನು ಕೀಳುವ ನಿರ್ಧಾರಕ್ಕೆ ಬರುತ್ತಾಳೆ. ಕಾತ್ಯಾಯನಿ ಪಾರ್ಟು ಮಾಡುತ್ತಿದ್ದ ಪ್ರಮೀಳಮ್ಮನವರು ಮೈತುಂಬ ಕೋಪ ತುಂಬಿಕೊಂಡು ನೋಡಿದವರ ಎದೆ ಒಡೆದುಹೋಗುವಂತೆ ಭಯಂಕರವಾಗಿ ನಟಿಸುತ್ತಿದ್ದ ಕಲಾವಿದೆಯನ್ನು ಪ್ರೇಕ್ಷಕರು 'ಹೇ ದುರ್ಗಿ..ಹೇ ದುರ್ಗಿ.. ಎಂದು ಕೂಗುತ್ತಿದ್ದರಂತೆ. ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಯಾವ ಸಣ್ಣಪುಟ್ಟ ಮಕ್ಕಳು ಆ ದೃಶ್ಯವನ್ನು ನೋಡಲು ಹೆದರಿ ಓಡಿಹೋಗಿ ಬಿಡುತ್ತಿದ್ದರಂತೆ. ಅಷ್ಟೊಂದು ಭಯಾನಕವಾಗಿತ್ತು ಆ ಪಾತ್ರ. ಪೇಟಿ ಬಾರಿಸುತ್ತಿದ್ದ ಅಲ್ಲಮಪ್ರಭು ಮಾಸ್ತರರು 'ಪ್ರಮೀಳಾ ನಿನ್ನ ಅಭಿನಯಕ್ಕೆ ಯಾವ ಮ್ಯೂಜಿಕ್ ಕೂಡಿಸೋಣ ಎಂದು ನನಗೆ ಅರ್ಥವಾಗುತ್ತಿಲ್ಲ, ಯಾಕೆಂದರೆ ನಿನ್ನ ಪಾತ್ರ ಅಷ್ಟೊಂದು ಭಯಾನಕವಾಗಿದೆ' ಎಂದರಂತೆ.

ಕೊನೆಗೆ ತಂದೆ, ಬಾಬು ದೇಸಾಯಿಗೆ ಕಾತ್ಯಾಯನಿಯೊಂದಿಗೆ ವಿವಾಹ ಮಾಡಿಸಬೇಕೆಂದಾಗ ಆತ ಪಕ್ಕದಲ್ಲಿದ್ದ ಕಾತ್ಯಾಯನಿಯನ್ನು ಬಿಟ್ಟು, ಎಲ್ಲಿ ನನ್ನ ಹೆಂಡತಿ ಎಂದು ಕೇಳುತ್ತಾನೆ. ನಿನ್ನ ಪಕ್ಕದಲ್ಲಿ ನಿಂತವಳು ಅಲ್ಲವೆ? ಎಂದು ಪ್ರಶ್ನಿಸಿದಾಗ, ಅಲ್ಲ ಎಂದು ತಲೆ ಅಲ್ಲಾಡಿಸಿ ಅದೇ ಸಮಯಕ್ಕೆ ಅಲ್ಲಿಗೆ ಬಂದ ಮೂಕಿಯಾದ ಮಧುವಾಣಿಯನ್ನು ತೋರಿಸುತ್ತ, ಅವಳು ನನ್ನ ಹೆಂಡತಿ ಎಂದು ಹೇಳುತ್ತಾನೆ. ಇದರಿಂದ ಬಹಳಷ್ಟು ನೊಂದುಕೊಂಡ ಕಾತ್ಯಾಯಿನಿ ಅವನು ನನ್ನನ್ನು

ಮದುವೆಯಾಗುವದಿಲ್ಲವೆಂದು ತಿಳಿದು ತನ್ನ ಆಸ್ತಿಯನ್ನೆಲ್ಲ ಅವನಿಗೆ ಬರೆದು ಕೊಡುತ್ತಾಳೆ. ಜೊತೆಗೆ ಗುಂಡು ಹಾರಿಸಿಕೊಳ್ಳುತ್ತಾಳೆ. ಒಂದು ಕಡೆಯಲ್ಲಿ ಬಾಬುದೇಸಾಯಿ ಮತ್ತು ಮಧುವಾಣಿಯರ ಮದುವೆಯ ಮೆರವಣಿಗೆ, ಇನ್ನೊಂದು ಕಡೆಯಲ್ಲಿ ಬಾಬು ದೇಸಾಯಿ ತನಗೆ ದಕ್ಕಲಿಲ್ಲವೆಂದು ತಾನೆ ಗುಂಡುಹಾರಿಸಿಕೊಂಡು ದುರ್ಮರಣ ಹೊಂದಿದ ಕಾತ್ಯಾಯನಿಯ ಮಸಣದ ಮೆರವಣಿಗೆ. ನಾಟಕಕಾರರಾದ ಮಹಾಂತೇಶಶಾಸ್ತ್ರಿಗಳು ಕೊನೆಗೆ ನೂತನ ವಧು-ವರರ ವಿವಾಹದ ಮೆರವಣಿಗೆ, ಶವದ ಮೆರವಣಿಗೆ ಇವೆರಡನ್ನು ಅತ್ಯದ್ಭುತವಾಗಿ ಚಿತ್ರಿಸಿದ್ದಾರೆ.

ತನಗೆ ತಾನೆ ಗುಂಡು ಹಾರಿಸಿಕೊಂಡು ಸಾವಿನ ಕೊನೆಯ ಕ್ಷಣಗಳಲ್ಲಿದ್ದಾಗ ಕಾತ್ಯಾಯನಿ ದೇಸಾಯಿ (ಪ್ರಮೀಳಮ್ಮ) 'ತನಗೆ ತಾಳಿ ಕಟ್ಟಿ ನನ್ನ ಜೀವನದ ಆಸೆಯನ್ನು ನೆರವೇರಿಸುವುದರೊಂದಿಗೆ ನನಗೆ ಮುತ್ತೈದೆ ಭಾಗ್ಯ ಕರುಣಿಸಿ' ಎಂದು ಬಾಬು ದೇಸಾಯಿಗೆ ವಿನಂತಿಸಿಕೊಳ್ಳುತ್ತಾಳೆ. ಅವಳ ವಿನಂತಿಯ ಮೇರೆಗೆ ಬಾಬು ದೇಸಾಯಿ ತಾಳಿ ಕಟ್ಟಿ ಆಕೆಯ ಆಸೆಯನ್ನು ಈಡೇರಿಸುತ್ತಾನೆ. ಅವನಿಂದ ತಾಳಿ ಕಟ್ಟಿಸಿಕೊಂಡ ಕಾತ್ಯಾಯನಿ 'ನಾನೇ ನಿನ್ನ ಮೊದಲ ಹೆಂಡತಿ' ಎಂದು ಹುಚ್ಚು ಹಿಡಿದವಳಂತೆ ಜೋರಾಗಿ ಕೊಕಾಸಿ ನಗುತ್ತಾಳೆ. ಪ್ರಮೀಳಮ್ಮಳ ಜೋರಾದ ಆ ನಗು ಪ್ರೇಕ್ಷಕರಿಗೆ ಅತಿಯಾಗಿ ಹಿಡಿಸಿತಂತೆ.

ಕಂಪನಿಯ ಮಾಲೀಕರಾದ ಎನ್. ಬಸವರಾಜರು ತಮ್ಮ ಮೂಲ ಕಂಪನಿಯಲ್ಲಿ 'ಜಹಾಗೀದಾರ ಜಗಳ' ನಾಟಕವನ್ನು ಆಡಿಸಬೇಕೆಂದು ವಿಚಾರ ಮಾಡಿ, ನಾಟಕದ ಪ್ರಮುಖವಾದ 'ಕಾತ್ಯಾಯನಿ ದೇಸಾಯಿ' ಪಾತ್ರವನ್ನು ಕಲ್ಪನಾ ಅವರ ಮೂಲಕ ಮಾಡಿಸಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಕಲ್ಪನಾ ಅವರನ್ನು ಕರೆದುಕೊಂಡು ತಮ್ಮ ಬ್ರ್ಯಾಂಚ್ ಕಂಪನಿ ವಾಸ್ತವ್ಯ ಹೂಡಿದ್ದ ದಾವಣಗೆರೆಗೆ ಬಂದರು. ಮುಖ್ಯವಾಗಿ ಕಾತ್ಯಾಯನಿ ದೇಸಾಯಿ ಪಾತ್ರವನ್ನು ಅಮೋಘವಾಗಿ ನಟಿಸಿ, ಹೆಸರು ಮಾಡಿದ್ದ ಪ್ರಮೀಳಮ್ಮನ ಪಾರ್ಟನ್ನು ತೋರಿಸಲು, ಅಂದು ಪ್ರಮೀಳಮ್ಮನವರು ತೋರಿದ ಅದ್ಭುತ ಅಭಿನಯವನ್ನು ಕಂಡು ಚಿತ್ರನಟಿ ಕಲ್ಪನಾ ಅವರು ದಿಭ್ರಾಂತರಾದರು. ಅಷ್ಟೇ ಏಕೆ ಕಾತ್ಯಾಯನಿ ದೇಸಾಯಿ ಪಾತ್ರವನ್ನು ತನ್ನ ಕಡೆಯಿಂದ ಮಾಡಲು ಆಗುವುದಿಲ್ಲವೆಂದು ಬಸವರಾಜರ ಹತ್ತಿರ ಸ್ಪಷ್ಟವಾಗಿ ಹೇಳಿದರಂತೆ. ಗುಡಗೇರಿ ಬಸವರಾಜರು ಪ್ರಮೀಳಮ್ಮನವರ ಅಭಿನಯವನ್ನು ಮೆಚ್ಚಿ, ಅವರ ಹತ್ತಿರ ಬಂದು 'ಈ ಪಾತ್ರವನ್ನು ಇಷ್ಟೊಂದು ರೋಷಭರಿತವಾಗಿ, ಜೋರಾಗಿ ಮಾತಾಡಲು ನಿನಗೆ ಹೇಗೆ ಸಾಧ್ಯವಾಯಿತು' ಎಂದು ಕೇಳಿದರಂತೆ. ಆಗ ಪ್ರಮೀಳಮ್ಮನವರು ನನ್ನ ನಾಟಕದ ಗುರುಗಳಾದ ಮಹಾಂತೇಶಶಾಸ್ತ್ರಿಗಳು 'ಪಾತ್ರವನ್ನು ಒಳಹೊಕ್ಕು ಮಾಡುವುದರಿಂದ ಪಾತ್ರವನ್ನು ಪರಿಣಾಮಕಾರಿಯಾಗಿ ಮಾಡಲು ಸಾಧ್ಯ ಎಂದಿದ್ದಾರೆ. ಅದಕ್ಕಾಗಿ ನಾನು

ನನ್ನ ಪಾತ್ರನ್ನು ಅನುಭವಿಸಿ, ಅದರ ಒಳಹೊಕ್ಕು ಮಾಡುವೆ' ಎಂದು ಹೇಳಿ ತಮ್ಮ ಯಶಸ್ಸಿಗೆ ಕಾರಣರಾದ ಗುರುಗಳಾದ ಮಹಾಂತೇಶ ಶಾಸ್ತ್ರಿಗಳನ್ನು ಸ್ಮರಿಸಿಕೊಂಡರಂತೆ.

ನಾಟಕದ ಒಂದು ದೃಶ್ಯ ಲಲಿತರಗಳೆಯಲ್ಲಿದೆ. ಹಾವೇರಿ ಸಣ್ಣಪ್ಪ, ಸತ್ಯಣ್ಣ ತಿಪಟೂರ, ಮರಿಯಪ್ಪ ಮದ್ದೂರು ಹಾಗೂ ಪ್ರಮೀಳಮ್ಮ ನಾಲ್ವರು ಕಲಾವಿದರು ರಗಳೆಯಲ್ಲಿದ್ದ ಸಂಭಾಷಣೆಯನ್ನು ಕಂಠಪಾಠ ಮಾಡಿ ಅಸ್ಖಲಿತವಾಗಿ ಹೇಳುತ್ತಿದ್ದರೆಂಬುದು ಅವರ ಕಲಾಜ್ಞಾನಕ್ಕೆ ನಿದರ್ಶನವಾಗಿದೆ.

ಗುಡಗೇರಿ ಕಂಪನಿ ದಾವಣಗೆರೆಯ ನಂತರ ಸಂಕೇಶ್ವರಕ್ಕೆ ಕ್ಯಾಂಪ್ ಮಾಡಿತು. ಅಲ್ಲಿಯೂ 'ಹೈಬ್ರಿಡ್ ಹೆಣ್ಣು', 'ಜಹಾಗೀದಾರ ಜಗಳ', 'ಗೌಡರ ಗದ್ಲ' ಮೊದಲಾದ ಜನಪ್ರಿಯ ನಾಟಕಗಳನ್ನು ಪ್ರದರ್ಶಿಸಿ ಜನಾನುರಾಗ ಗಳಿಸಿತು. ಸಂಕೇಶ್ವರ ಕ್ಯಾಂಪಿನಲ್ಲೂ ಪ್ರಮೀಳಮ್ಮ ಅಭಿನಯದ 'ಹೈಬ್ರಿಡ್ ಹೆಣ್ಣು' ಹಾಗೂ 'ಜಹಾಗೀದಾರ ಜಗಳ' ನಾಟಕಗಳು ಸೂಪರ್ ಹಿಟ್ ಆದವು. ಅದಕ್ಕೆ ಕಾರಣ ಪ್ರಮೀಳಾ ಅವರ ಶ್ರೇಷ್ಠ ಮಟ್ಟದ ನಟನೆ. ಜೊತೆಗೆ ಆ ಮಂಡಳಿಯ ಹಾವೇರಿ ಸಣ್ಣಪ್ಪ, ಮದ್ದೂರು ಮರಿಯಪ್ಪ, ತಿಪಟೂರ ಸತ್ಯಣ್ಣ, ಬಿ.ಕೆ. ಶಂಕರ, ಜಿತೂರಿ ಶೈಲಾ, ವಿಜಯಮ್ಮ ಮೊದಲಾದ ನಟ–ನಟಿಯರ ಮನೋಜ್ಞ ಅಭಿನಯ ಎಂದು ಅಭಿಮಾನದಿಂದ ಹೇಳಬೇಕಾಗುತ್ತದೆ.

ಆಮೇಲೆ 'ಸಂಗಮೇಶ್ವರ ನಾಟ್ಯ ಸಂಘ'ವು ಗದಗ ಪಟ್ಟಣದಲ್ಲಿ ಭಾರೀ ಜನದಟ್ಟಣೆಯಲ್ಲಿ ಕಂಪನಿಯ ಜನಪ್ರಿಯ ನಾಟಕಗಳನ್ನು ಆಡುತ್ತ ರಂಗಪ್ರೇಕ್ಷಕರ ಮನದಾಳದಲ್ಲಿ ಅದ್ವಿತೀಯ ಅಭಿನಯದ ಛಾಪನ್ನು ಮೂಡಿಸುತ್ತಲಿತ್ತು. ಅದೇ ಸಮಯದಲ್ಲಿ ಚಿತ್ರನಟಿ, ರಂಗನಟಿಯಾದ ಕಲ್ಪನಾ ಅವರು ನಿಧನ ಹೊಂದಿದರು. ಇದರಿಂದ 'ಸಂಗಮೇಶ್ವರ ನಾಟ್ಯ ಸಂಘ'ದ ಒಡೆಯರಾದ ಗುಡಿಗೇರಿಯ ಎನ್. ಬಸವರಾಜ ಅವರಿಗೆ ಮಾನಸಿಕ ಆಘಾತವಾಯಿತು. ಈ ದುರ್ಘಟನೆಯಿಂದ ಬಹುನೊಂದುಕೊಂಡಿದ್ದ ಬಸರಾಜರು ತಮ್ಮ ಮೂಲ ಹಾಗೂ ಬ್ರ್ಯಾಂಚ್ ಕಂಪನಿ ಎರಡನ್ನೂ ಬಂದ್ ಮಾಡಿದರು. ಆಗ ಅಲ್ಲಿದ್ದ ಕಲಾವಿದರು ತಮ್ಮ ತಮ್ಮ ಊರುಗಳಿಗೆ ಹೋದರು. ಪ್ರಮೀಳಮ್ಮನವರು ಸಹ ತಮ್ಮ ಹುಟ್ಟೂರಾದ ಗುಡೂರಿಗೆ ಬಂದರು.

ಈ ಸಂದರ್ಭದಲ್ಲಿ ಸಹೋದರಿ ಮಮತಾ ಗುಡೂರು ಅವರು ಸೂಡಿಯ ಬಸವಂತಪ್ಪ ಪಟ್ಟಣಶೆಟ್ಟಿ ಅವರ 'ಶ್ರೀ ಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ'ದಲ್ಲಿ ಪಾತ್ರ ಮಾಡುತ್ತಿದ್ದರು. ಆ ಹೊತ್ತಿಗಾಗಲೆ ಅವರು ಒಳ್ಳೆಯ ಹೆಸರನ್ನು ಸಂಪಾದಿಸಿದ್ದರು. ಇತ್ತ ಕಡೆ ಪ್ರಮೀಳಮ್ಮ ಪಾತ್ರಗಳಿಲ್ಲದೆ ಊರಲ್ಲಿ ಖಾಲಿ ಇದ್ದರು. ಇಂಥ ಸ್ಥಿತಿಯಲ್ಲಿದ್ದ ಅಕ್ಕಳ ಚಿಂತೆ ಮಮತಾಗೆ. ತಾನು ನಟಿಸುತ್ತಿರುವ ಕಂಪನಿಯಲ್ಲಿ ಅಕ್ಕಳಿಗೆ ಸ್ಥಾನ ಕೊಡಿಸಬೇಕೆಂದು ಯೋಚಿಸಿ, ಮಾಲೀಕರಾದ ಬಸವಂತಪ್ಪ ಪಟ್ಟಣಶೆಟ್ಟಿ ಅವರೊಂದಿಗೆ ಮಾತನಾಡಿದರು. ಆಗ ಯಜಮಾನರಿಗೆ ಉಭಯ ಸಂಕಟ ಎದುರಾಯಿತು.

ಹೇಗೆಂದರೆ, ಪ್ರಮೀಳಾ ಅವರಿಗೆ ಪಾತ್ರ ನೀಡಲು ಅವಕಾಶವಿಲ್ಲ ಎಂದು ಹೇಳಿದರೆ ಮಮತಾ ಕಂಪನಿ ಬಿಡಬಹುದು. ಅವಕಾಶ ಕೊಟ್ಟರೆ ಪ್ರಮೀಳಾಗೆ ಪಾತ್ರಗಳಿಲ್ಲ. ಏನು ಮಾಡಬೇಕು ಎಂಬ ಚಿಂತೆ ಅವರ ಮನಸ್ಸನ್ನು ತಿನ್ನತೊಡಗಿತು. ಕೊನೆಗೆ ಮಮತಾ ಕಂಪನಿಯ ಶ್ರೇಷ್ಠ ನಟಿ, ಅವಳ ಅಕ್ಕಳಿಗೆ ಅವಕಾಶ ಕೊಟ್ಟು, ತಂಗಿ ಮಮತಾಳನ್ನು ಉಳಿಸಿಕೊಳ್ಳುವ ನಿರ್ಧಾರಕ್ಕೆ ಬಂದರು. ತಿಂಗಳಿಗೆ ಹನ್ನೊಂದು ನೂರು ರೂಪಾಯಿಗಳ ಸಂಬಳವನ್ನು ಪ್ರಮೀಳಾಗೆ ಕೊಡಲು ನಿರ್ಧರಿಸಿ ಕಂಪನಿಗೆ ಕರೆದುಕೊಂಡರು.

## 'ಶ್ರೀ ಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ' ಸೂಡಿ

ಪ್ರಮೀಳಮ್ಮನವರು ಈ ಕಂಪನಿಯನ್ನು ಸೇರಿದ ಕೂಡಲೆ ನಟಿಸಲು ಅವಕಾಶ ಸಿಗಲಿಲ್ಲ. ಏಕೆಂದರೆ ಈ ಮೊದಲೆ ಮಂಡಳಿಯಲ್ಲಿದ್ದ ಕಲಾವಿದರುಗಳಿಗೆ ಇಂತಿಂಥ ಪಾತ್ರಗಳೆಂದು ನಿಗದಿಯಾದ ಕಾರಣ. ಹೀಗಾಗಿ ಅವರಿಗೆ ಪಾತ್ರಗಳು ಇಲ್ಲದೆ ಸುಮ್ಮನೆ ಕೂಡಬೇಕಾದ ಸಂದರ್ಭ ಒದಗಿ ಬಂದಿತ್ತು. ನಡು, ನಡುವೆ ಕೆಲವೊಂದು ಪಾತ್ರವನ್ನು ಮಾತ್ರ ಕೊಟ್ಟರು. ಒಮ್ಮೆ ಕಂಪನಿ ಹುಬ್ಬಳಿಗೆ ಬಂದಿತು. ಅಲ್ಲಿ ಸಹಿತ ಪ್ರಮೀಳಾ ಅವರಿಗೆ ಪಾತ್ರ ಮಾಡಲು ಅವಕಾಶ ಸಿಗಲಿಲ್ಲ. ಹೀಗಿದ್ದಾಗ ಒಂದು ದಿನ ಆಕಸ್ಮಿಕವಾಗಿ ಮಂಡಳಿಗೆ ಗುಡಿಗೇರಿ ಬಸವರಾಜಪ್ಪನವರು ಬಂದರು. ಪ್ರಮೀಳಾಗೆ ಅಲ್ಲಿ ಪಾತ್ರಗಳು ಇಲ್ಲದೆ ಸುಮ್ಮನೆ ಇರುವುದನ್ನು ಕಂಡು ಆಶ್ಚರ್ಯದಿಂದ 'ಶೆಟ್ಟರೆ ಇಂಥ ಪ್ರಸಿದ್ಧ ಕಲಾವಿದೆಗೆ ಪಾತ್ರವಿಲ್ಲೆಂದರೆ ಹೇಗೆ? ಈ ನಾಡು ಮೆಚ್ಚಿದ ಜನಪ್ರಿಯ ಕಲಾವಿದೆ ಇವಳು. ಪಾತ್ರ ನೀಡದೆ ಸುಮ್ಮನೆ ಕೂಡಿಸಿ ಇವಳ ಪ್ರತಿಭೆಯನ್ನು ಕೊಲ್ಲಬೇಡಿ, ಇವಳನ್ನು ಬಿಟ್ಟುಬಿಡಿ. ಬೇರೆ ಕಂಪನಿಗೆ ಹೋಗಿ ತನ್ನ ಪ್ರತಿಭೆಯನ್ನು ಮೆರೆಯುತ್ತಾಳೆ' ಎಂದರಂತೆ.

ಇದೇ ಸಮಯಕ್ಕೆ ಮಮತಾಳ ಖ್ಯಾತಿ ಚಲನಚಿತ್ರ ರಂಗದವರೆಗೆ ಹೋಗಿ ಮುಟ್ಟಿತ್ತು. ಆಗ ಅವಳಿಗೆ ಚಲನಚಿತ್ರರಂಗದಿಂದ ಕರೆ ಬಂದಿತು. ಮಮತಾ 'ಆಶಾ' ಸಿನೇಮಾ ಮಾಡಲು ಬೆಂಗಳೂರಿಗೆ ಹೋದರು. ಆ ಸಮಯದಲ್ಲಿ ಅವರು ಸೂಡಿ ಶೆಟ್ಟರ್ ಕಂಪನಿಯಲ್ಲಿ ಅಭಿನಯಿಸುತ್ತಿದ್ದ ಪಾತ್ರಗಳನ್ನು ಅಕ್ಕ ಪ್ರಮೀಳಾ ಮಾಡತೊಡಗಿದರು.

ಪ್ರಮೀಳಮ್ಮ ಅಲ್ಲಿ ಸುಮಾರು ಒಂದು ವರ್ಷಕಾಲ ಸೇವೆ ಸಲ್ಲಿಸಿದ್ದಾರೆ. ಈ ಅವಧಿಯಲ್ಲಿ ಎಚ್.ಟಿ. ಮಹಾಂತೇಶಶಾಸ್ತ್ರಿಗಳ 'ಹಣ ಅಕ್ಕಿ ಕೂಡಿದರೆ ಹಡೆದವರು ಬೇಕಿಲ್ಲ', ಕೆ.ಎನ್. ಸಾಳುಂಕೆ ಅವರ 'ವರನೋಡಿ ಹೆಣ್ಣು ಕೊಡು' ನಾಟಕದ ಗಿರಿಜಾ, ಮಾರುತೇಶ ಮಾಂಡ್ರೆ ಅವರ 'ನರಗುಂದ ಬಂಡಾಯ'ದ ಮಲ್ಲಿಕಾಸಾನಿ, 'ಕೊಪ್ಪಳದ ಗವಿಸಿದ್ದೇಶ್ವರ ಮಹಾತ್ಮೆ' ನಾಟಕದ ಪಾರ್ವತಿ, ಪಿ.ಬಿ. ಧುತ್ತರಗಿ ಅವರ 'ಮಲ ಮಗಳು' ನಾಟಕದ ಕಲ್ಯಾಣಿ ಮೊದಲಾದ ಭೂಮಿಕೆಗಳನ್ನು ಸೊಗಸಾಗಿ ನಟಿಸಿದರು.

ಸೂಡಿ ಶೆಟ್ಟರ ನಾಟಕ ಮಂಡಳಿಯು ಹುಬ್ಬಳ್ಳಿ ಮಹಾನಗರದಲ್ಲಿ ಜನಪ್ರಿಯ ನಾಟಕಗಳನ್ನು ಪ್ರಯೋಗಿಸಿತು. ವೃತ್ತಿರಂಗಭೂಮಿಯ ಇತಿಹಾಸದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಪ್ರಯೋಗಗೊಂಡ ಪಿ.ಬಿ. ಧುತ್ತರಗಿ ಕವಿಗಳ 'ಮಲಮಗಳು' ನಾಟಕವನ್ನು ಹುಬ್ಬಳ್ಳಿಯಲ್ಲೂ ಪ್ರದರ್ಶನ ಮಾಡಿದರು. ನಾಟಕದ 'ರಂಗಣ್ಣ'ನ ಪಾತ್ರದಿಂದ ನಾಡಿನ ಜನತೆಗೆಲ್ಲ ಮನೆಮಾತಾಗಿದ್ದ ಚಿತ್ರನಟ ಧೀರೇಂದ್ರಗೋಪಾಲರು ಅಲ್ಲಿಗೆ ಬಂದಿದ್ದರು. ಅವರು ರಂಗಣ್ಣನ ಪಾರ್ಟನ್ನು, ಪ್ರಮೀಳಮ್ಮ ಕಲ್ಯಾಣಿ ಪಾತ್ರವನ್ನು ಮಾಡಿದರು. ಪ್ರೇಕ್ಷಕರು ಧೀರೇಂದ್ರ ಗೋಪಾಲ ಅವರ ಮನೋಜ್ಞ ಅಭಿನಯವನ್ನು ನೋಡಿ ಮೆಚ್ಚಿ ಆಹೇರಿ ಮಾಡುತ್ತಿದ್ದರು. ಧೀರೇಂದ್ರಗೋಪಾಲರು ತಮ್ಮ ಜೊತೆ ಕಲ್ಯಾಣಿ ಪಾತ್ರ ಮಾಡುತ್ತಿದ್ದ ಪ್ರಮೀಳಮ್ಮನವರ ನಾಟಕವನ್ನು ಮೆಚ್ಚಿ 'ಈ ಪಾತ್ರವನ್ನು ನೀನು ಎಷ್ಟು ಚೆನ್ನಾಗಿ ಮಾಡುವೆ ಎಂದು ಮೆಚ್ಚುಗೆ ಸೂಚಿಸಿ, ನನ್ನ ಆಹೇರಿ ಹಣವನ್ನು ತಾಯಿ ಕಲ್ಯಾಣಿಗೆ ಅರ್ಪಿಸುವೆ' ಎಂದು ಹೇಳಿಕೊಡುತ್ತಿದ್ದರಂತೆ. ಈ ಸಂದರ್ಭವನ್ನು ಪ್ರಮೀಳಮ್ಮನವರು ನೆನೆಯುತ್ತಾರೆ.

ತಂಗಿ ಮಮತಾಗೆ ಸಿನೇಮಾದಲ್ಲಿ ನಟಿಸಲು ಮೇಲಿಂದ ಮೇಲೆ ಅವಕಾಶಗಳು ಬರತೊಡಗಿದವು. ಆ ಸಮಯದಲ್ಲಿ ಪದೇ ಪದೇ ಕಂಪನಿ ಬಿಟ್ಟು ಹೋಗಿ ನಾಟಕಕ್ಕೆ, ಕಂಪನಿಗೆ, ಮಾಲೀಕರಿಗೆ ತೊಂದರೆ ಕೊಡುವುದು ಒಳ್ಳೆಯದಲ್ಲ ಎಂದು ಭಾವಿಸಿ ಕಂಪನಿಯನ್ನು ತೊರೆದರು. ಅಕ್ಕ ಪ್ರಮೀಳಾ ಕೂಡ ತಂಗಿಗೆ ಚಲನಚಿತ್ರದಲ್ಲಿ ಹೆಚ್ಚು ಅವಕಾಶಗಳು ಬರತೊಡಗಿದ ಮೇಲೆ ಮನೆತನದ ಎಲ್ಲ ಜವಾಬ್ದಾರಿಗಳು ತಮ್ಮ ಮೇಲೆ ಬಿದ್ದ ಕಾರಣ ನಾಟಕ ಮಂಡಳಿಯನ್ನು ಬಿಡುವುದು ಅನಿವಾರ್ಯವಾಗಿತ್ತು. ಅದಕ್ಕಾಗಿ ಪ್ರಮೀಳಮ್ಮ ಕಂಪನಿ ಬಿಟ್ಟು ಹೊರಬಂದರು. ಈ ಕಾರಣಗಳಿಗಾಗಿ ಅಕ್ಕ-ತಂಗಿಯರಿಬ್ಬರು ಸೂಡಿಯ 'ಶ್ರೀಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ'ದಿಂದ ಹೊರ ನಡೆದರು.

ಸೂಡಿ ಶೆಟ್ಟರ ನಾಟಕ ಕಂಪನಿಯಿಂದ ಹೊರಬಂದ ಸಹೋದರಿಯರು ಅವಕಾಶ ಸಿಕ್ಕ ಅಮೆಚೂರ ಕಂಪನಿಗಳಲ್ಲಿ ನಟಿಸತೊಡಗಿದರು. ಈ ನಡುವೆ ಸುರೇಶ ರಡ್ಡಿ ಮಾಲೀಕತ್ವದ 'ರವಿಕಲಾ ನಾಟ್ಯ ಸಂಘ ಲಕ್ಷ್ಮೇಶ್ವರ' ಕಂಪನಿಯಲ್ಲಿ ಸುಮಾರು ಒಂದು ತಿಂಗಳ ಕಾಲ ಅಕ್ಕ-ತಂಗಿಯರು ವೈವಿಧ್ಯಮಯ ಪಾತ್ರಗಳಲ್ಲಿ ಅಭಿನಯಿಸಿದರು.

## ಅಮೆಚೂರ್ ಕಂಪನಿ

ಪ್ರಮೀಳಮ್ಮನವರು ಕೇವಲ ವೃತ್ತಿರಂಗಭೂಮಿಯ ಮಹಾನ್ ಕಲಾವಿದೆಯಾಗಿ ರಂಗಪರದೆಯ ಮುಂದೆ ಮಾತ್ರ ವೈಭವದಿಂದ ಮೆರೆಯದೆ, ಹವ್ಯಾಸಿ ಕಂಪನಿಗಳಲ್ಲಿಯೂ ವೈವಿಧ್ಯಮಯ ಪಾತ್ರಗಳಲ್ಲಿ ಮಿಂಚಿದ್ದಾರೆ. ಅವರ ಬಣ್ಣದ ಬದುಕು ಪ್ರಾರಂಭಗೊಂಡದ್ದೆ ಅಮೆಚೂರ್ ಕಂಪನಿಗಳ ಮೂಲಕ. ಅದು ಅಂತ್ಯಗೊಂಡದ್ದು

ಹವ್ಯಾಸಿ ನಾಟಕ ಮಂಡಳಿಗಳ ಅಭಿನಯದಿಂದಾಗಿ. ಇವುಗಳ ಮಧ್ಯೆ ಮೂರು ದಶಕಗಳ ಕಾಲ ವೃತ್ತಿರಂಗಭೂಮಿಯ ರಂಗ ಸಾಮ್ರಾಜ್ಞಿಯಾಗಿ ವಿಭಿನ್ನ ಭೂಮಿಕೆಗಳಲ್ಲಿ ಹೃದಯಸ್ಪರ್ಶಿ ಅಭಿನಯ ನೀಡಿದ ಇತಿಹಾಸ ಚೇತೋಹಾರಿ.

ಬಳ್ಳಾರಿ ಜಿಲ್ಲೆಗೆ ಸೇರಿದ ಶಂಕರಬಂಡಿ ಎಂಬುದೊಂದು ಹಳ್ಳಿ. ಅದು ಬಳ್ಳಾರಿ ನಗರದ ಸಮೀಪದಲ್ಲಿದೆ. ಅಲ್ಲಿದ್ದ ಅಮೆಚೂರ್ ಕಂಪನಿಯೊಂದು ಕಂದಗಲ್ಲ ಹನುಮಂತರಾಯರ 'ರಕ್ತ ರಾತ್ರಿ' ನಾಟಕವನ್ನು ಪ್ರಯೋಗಿಸಿತು. ಪ್ರಮೀಳಾ ಅವರಿಗೆ ಆ ನಾಟಕದಲ್ಲಿ ಅಭಿನಯಿಸಲು ಕಂಪನಿಯವರು ಆಹ್ವಾನಿಸಿದ್ದರು. ನಾಟಕದ ತರಬೇತಿ ಸಮಯದಲ್ಲಿ ಅಲ್ಲಿದ್ದವರು ಪ್ರಮೀಳಮ್ಮನವರಿಗೆ ಅಶ್ವತ್ಥಾಮನ ಪಾತ್ರ ಮಾಡಲು ಹೇಳಿದರು. ಅದಕ್ಕೆ ಅವರು ಒಪ್ಪದೆ ದುರ್ಯೋಧನನ ಪಾತ್ರ ಮಾಡಲು ಹಠತೊಟ್ಟರು. ದುರ್ಯೋಧನನ ಪಾತ್ರವನ್ನು ಸವಾಲಾಗಿ ಸ್ವೀಕರಿಸಿ, ಅದಕ್ಕೆ ಜೀವ ತುಂಬಿ ನಟಿಸಿ ಜನಪ್ರಿಯರಾದರು. ತನ್ಮಯತೆಯಿಂದ ಸಂಭಾಷಣೆ ಹೇಳುತ್ತಿದ್ದಾಗ ನೆಲಕ್ಕೆ ಅಹಂಕಾರದಿಂದ ಪೆಟ್ಟುಹಾಕುವ ಸಂದರ್ಭವಂತೂ ನೋಡುಗರ ಕಣ್ಣುಗಳಲ್ಲಿ ಇಂದಿಗೂ ಹಚ್ಚ ಹಸಿರಾಗಿದೆ. ಸಂಭಾಷಣೆಯ ಓಘ, ಸ್ಫುಟತ್ವ ಮೆಚ್ಚಬೇಕಾದುದು.

"ಗುರುವದೊಳಿರುವ ಗಂಧರ್ವನೆ, ಕರ್ಮ ನನ್ನನ್ನು ಕಟ್ಟಿ ಕೆಳಗುರುಳಿಸಲದನೆ ಮೆಟ್ಟಿ ನನ್ನೆದೆಯ ಗುರಿಯ ತಲುಪದೆ ತಡೆದವನಲ್ಲ ಈ ಛಲದಂಕಮಲ್ಲ, ಓ ಗಂಧರ್ವನೆ, ಬಾಗದೆ ಬದುಕುವ ಬಗೆಯ ಬಣ್ಣ ಹೊಯ್ದಿದೆ ಈ ಕೌರವೇಶನ ಕೆಚ್ಚೆದೆಗೆ ಎಲ್ಲವೋ ಗಂಧರ್ವನೆ, ಹಟಯೋಗದ ದಿಟದ ಚಿತ್ತಾರ ಈ ಪುರುಷಾಕಾರ" ಎಂದು ಆವೇಶದಿಂದ ಸಂಭಾಷಣೆ ಹೇಳುತ್ತಾ, ದರ್ಪದಿಂದ ಕಾಲನ್ನು ನೆಲಕ್ಕೆ ಅಪ್ಪಳಿಸಿದ ಪರಿಣಾಮ ಕಾಲಿನಲ್ಲಿ ಬಾವು (ಊತುಕೊಂಡು) ಬಂದು ಮೂರು ವರ್ಷಗಳ ಕಾಲ ನಟಿಸಲು ಸಾಧ್ಯವಾಗಲಿಲ್ಲ ಎಂಬುದನ್ನು ವಿಷಾದದಿಂದ ನುಡಿಯುತ್ತಾರೆ.

ಜೋಶಿ ಶಾಂತಮ್ಮನವರ ಸ್ತ್ರೀ ಕಲಾವಿದರ ತಂಡವು ಕೊಡೆಕಲ್ಲ ಜಾತ್ರೆಯಲ್ಲಿ 'ರೇಣುಕಾ ಎಲ್ಲಮ್ಮ' ಎನ್ನುವ ಪೌರಾಣಿಕ ನಾಟಕವನ್ನು ಪ್ರಯೋಗಿಸಿತು. ಸ್ತ್ರೀ ಕಲಾವಿದೆಯರೆ ಪುರುಷ ಪಾತ್ರಗಳನ್ನು ಅಭಿನಯಿಸುತ್ತಿದ್ದರು. ಪ್ರಮೀಳಮ್ಮನವರು ಪರಶುರಾಮನ ಪಾತ್ರವನ್ನು ಮಾಡುತ್ತಿದ್ದರು. ಆ ಪಾತ್ರಕ್ಕೆ ಜೀವ ತುಂಬಿ ಅಮೋಘವಾಗಿ ಅಭಿನಯಿಸಿದರು. ಅವರ ಪಾತ್ರಾಭಿನಯ ಎಷ್ಟೊಂದು ಮನಮೋಹಕವಾಗಿತ್ತೆಂದರೆ, ಆ ಊರಿನಲ್ಲಿದ್ದ ಖಾನಾವಳಿಯ ಮಾಲೀಕರ ಮಗಳು ಪರಶುರಾಮನ ಪಾತ್ರವನ್ನು ನೋಡಿ ಮೆಚ್ಚಿಕೊಂಡು 'ನಾನು ಮದುವೆಯಾದರೆ ಪರಶುರಾಮನನ್ನು ಮಾತ್ರ ಎಂದು ಹಠ ಹಿಡಿದಳಂತೆ'. ಹೀಗೆ ಐದಾರು ದಿನಗಳು ಕಳೆದಿದ್ದವು. ಮಂಡಳಿಯ ಎಲ್ಲ ಕಲಾವಿದೆಯರು ದಿನಾಲೂ ಆ ಹೋಟೆಲಿಗೆ ಊಟಕ್ಕೆ ಹೋಗುತ್ತಿದ್ದರು. ಪರಶುರಾಮನ ಪಾತ್ರ ಮಾಡುತ್ತಿದ್ದ ಪ್ರಮೀಳಮ್ಮನನ್ನು ಪುರುಷನೆಂದು ಭಾವಿಸಿ

ಪ್ರೀತಿಸುತ್ತಿದ್ದ ಆ ಹುಡುಗಿಯ ಹುಚ್ಚು ಪ್ರೇಮವನ್ನು ಕಂಡು ನಗುತ್ತಿದ್ದರು. ಅವಳ ಮನಸ್ಸಿನಲ್ಲಿದ್ದ ಜೊಲ್ಲನ್ನು ಬಿಡಿಸಬೇಕೆಂದು ವಿಚಾರ ಮಾಡಿ ಒಂದು ದಿನ ಪ್ರಮೀಳಮ್ಮ ಬಣ್ಣ ಹಚ್ಚಿಕೊಂಡು ಮೇಕಪ್ ಮಾಡಿಕೊಳ್ಳುತ್ತಿದ್ದ ಪ್ರಸಾಧನ ಕೋಣೆಗೆ ಆಕೆಯನ್ನು ಕರೆದುಕೊಂಡು ಹೋಗಿ ತೋರಿಸಿದರು. ಅದನ್ನು ಕಂಡು ಹುಡುಗಿ ಮೂಕ ವಿಸ್ಮಿತೆಯಾದಳು.

ಪ್ರಮೀಳಮ್ಮನವರು ತಾವು ಹೆಣ್ಣಾದರೂ ಪುರುಷ ಪಾತ್ರವನ್ನು ಮಾಡುತ್ತಿದ್ದಾಗ ಪುರುಷರೆ ಆಗಿ ಅಭಿನಯಿಸುತ್ತಿದ್ದರು. ಯಾರಿಗೂ ಸ್ತ್ರೀ ಕಲಾವಿದೆ ಎಂಬ ಭಾವ ಬರದಂತೆ ಕಾಣುತ್ತಿದ್ದರು. ಅವರನ್ನು ಗಂಡಸು ಎಂದೇ ಹೇಳಿ ಸವಾಲು ಹಾಕಿ ಸೋತವರುಂಟು. ಹಾಗಿತ್ತು ಅವರ ಅಭಿನಯ.

ಕೊಡೆಕಲ್ಲದ ಆ ತರುಣಿ ಪ್ರಮೀಳಮ್ಮನವರ ಪರಶುರಾಮನ ಪಾರ್ಟನ್ನು ಬಹುವಾಗಿ ಮೆಚ್ಚಿಕೊಂಡು, ಅವರಿಗೆ ದಿನಾಲೂ ಬಿಸಿಬಿಸಿಯಾದ ಜೋಳದ ರೊಟ್ಟಿಯನ್ನು, ಬಿಸಿ ಅನ್ನವನ್ನು ತಾನೆ ಕೈಯಾರೆ ಪ್ರೀತಿಯಿಂದ ಬಡಿಸುತ್ತಿದ್ದಳಂತೆ. ಜೊತೆಗೆ ಊಟದ ನಂತರ ಸೇಬು ಹಣ್ಣೊಂದನ್ನು ಕೊಟ್ಟು ತನ್ನ ಕಲಾಪ್ರೇಮವನ್ನು ಮೆರೆದಳಂತೆ. ಈ ಘಟನೆ ಕೂಡ ಪ್ರಮೀಳಮ್ಮನವರ ಅದ್ಭುತ ಕಲಾ ಪ್ರದರ್ಶನಕ್ಕೆ ಮತ್ತೊಂದು ನಿದರ್ಶನ.

ಪ್ರಮೀಳಮ್ಮ ಕೇವಲ ಸ್ತ್ರೀ ಪಾತ್ರಗಳನ್ನಲ್ಲದೆ ಪುರುಷ ಪಾತ್ರಗಳನ್ನು ಮಾಡುವುದರಲ್ಲಿ ಸೈ ಎನಿಸಿಕೊಂಡವರು. 'ರಕ್ತರಾತ್ರಿ' ನಾಟಕದ ಅಶ್ವತ್ಥಾಮ, ದುರ್ಯೋಧನ, 'ರೇಣುಕಾ ಎಲ್ಲಮ್ಮ'ದಲ್ಲಿ ಪರಶುರಾಮ, 'ಗೌಡರ ಗದ್ಲ'ದಲ್ಲಿ ದೇವೇಗೌಡ, ಬಸವರಾಜಗೌಡ, ಕರಿಯಾ, 'ಹಸಿರುಬಳೆ' ನಾಟಕದಲ್ಲಿ ಹನುಮಂತ, ರಾಮನಗೌಡ, ಶಿವಕಾಂತಗೌಡ, 'ಗೆದ್ದ ಸೊಸೆ ಬಿದ್ದ ಮಾವ'ದಲ್ಲಿ ಎಂ.ಎಲ್.ಎ. ಮುಂತಾದ ಭೂಮಿಕೆಗಳನ್ನು ರಂಜನೀಯವಾಗಿ ನಟಿಸಿ, ತಮ್ಮ ಅಭಿನಯ ಸಾಮರ್ಥ್ಯವನ್ನು ಸಾಕ್ಷಿಕರಿಸಿದರು.

ಪ್ರಮೀಳಮ್ಮ ತಮ್ಮ ಪ್ರತಿಭಾ ಪ್ರಭುತ್ವವನ್ನು ಪಣಕ್ಕೊಡ್ಡಿ ಪಾತ್ರ ಮಾಡಬೇಕಾದ ಪ್ರಸಂಗವೊಂದು ಬಂದಿತು. ಅದೆಂದರೆ, ಚಿತ್ರದುರ್ಗ ಜಿಲ್ಲೆಯಲ್ಲಿ ಚಳ್ಳಕೆರೆ ಸಮೀಪದ ನಾಗರಾಳ ಗ್ರಾಮದ ಹವ್ಯಾಸಿ ತಂಡವು 'ಕಳ್ಳ ಕಟ್ಟಿದ ತಾಳಿ' ಎಂಬ ಸಾಮಾಜಿಕ ನಾಟಕವನ್ನು ಪ್ರಯೋಗಿಸಿತು. ಆ ನಾಟಕದ ತಾಯಿಯ ಪಾತ್ರ ಮಾಡುವುದಕ್ಕಾಗಿ ಪ್ರಮೀಳಾ ಅವರನ್ನು ಆಹ್ವಾನಿಸಿದ್ದರು. ಆ ಹೊತ್ತಿಗಾಗಲೆ ತಾಯಿ ಪಾರ್ಟಿನಿಂದ ಪ್ರಮೀಳಮ್ಮ ಮನೆಮಾತಾಗಿದ್ದರು. ಅವರ ಜನಪ್ರಿಯತೆ ಕೇಳಿ ದೂರದ ಚಳ್ಳಕೆರೆಯವರು ದಿನಕ್ಕೆ ಮೂರು ನೂರು ರೂಪಾಯಿಗಳನ್ನು ಕೊಡಲು ನಿರ್ಧರಿಸಿದ್ದರು. ಅವರು ಮಾಡಬೇಕಾದ ತಾಯಿ ಪಾತ್ರ ನಟನೆ ಸ್ವಲ್ಪ ಇತ್ತು. ಅಂದರೆ

ಕೇವಲ ಏಳೆಂಟು ಸಂಭಾಷಣೆಗಳು ಮಾತ್ರ ಇದ್ದವಂತೆ. ನಾಟಕ ಮಾಡಿಸುವವರಲ್ಲಿ ಒಬ್ಬನು ಪ್ರಮೀಳಮ್ಮನವರ ಹತ್ತಿರ ಬಂದು ಅಮ್ಮಾ 'ನೀವು ಕೇವಲ ಏಳೆಂಟು ಮಾತುಗಳನ್ನಾಡುವೆ, ಇಷ್ಟಕ್ಕೆ ನಿಮಗೆ ಮೂರು ನೂರು ರೂಪಾಯಿ ಹೇಗಮ್ಮ? ಎಂದು ಅವರಿಗೆ ಪ್ರಶ್ನೆ ಹಾಕಿದನಂತೆ. ಅವನ ಮಾತು ಕೇಳಿ ಪ್ರಮೀಳಮ್ಮನವರಿಗೆ ಗುಡುಗು ಸಿಡಿಲು ಹೊಡೆದಂತಾಯಿತು. ಇದು ಅವರ ನಟನಾ ಸಾಮರ್ಥ್ಯವನ್ನು ಕೆಣಕಿದಂತಿತ್ತು. ಈ ವಿಷಯವನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡ ಕಲಾವಿದೆ ತಮ್ಮ ನಾಟಕದ ವಿದ್ಯಾಗುರುಗಳಾದ ಎಚ್.ಟಿ. ಮಹಾಂತೇಶಶಾಸ್ತ್ರಿಗಳನ್ನು ಭಕ್ತಿಯಿಂದ ಹೃದಯಮಂದಿರದಲ್ಲಿ ಸ್ಮರಿಸಿಕೊಂಡು ರಂಗಭೂಮಿಗೆ ಬಂದು ಸುಮಾರು ಅರ್ಧಗಂಟೆ ಕಾಲ ತಾವೊಬ್ಬರೆ ಸಂಭಾಷಣೆ ಹೇಳಿ ನೆರೆದ ಪ್ರೇಕ್ಷಕರಿಗಲ್ಲದೆ, ಪೇಟಿ. ತಬಲಾ ಬಾರಿಸುವ ಕಲಾವಿದರಿಗೂ ಕಣ್ಣೀರು ತರಿಸಿದರಂತೆ. ಆ ರೀತಿಯಲ್ಲಿ ತಾಯಿಯ ಪಾರ್ಟನ್ನು ಮಾಡಿದರು. ಅವರ ಹೃದಯಸ್ಪರ್ಶಿ ಅಭಿನಯವನ್ನು ಕಂಡು ನಾಟಕದ ಮೊದಲು ನಿಮಗೇಕೆ ಇಷ್ಟೊಂದು ಹಣ ಕೊಡಬೇಕು ಎಂದು ಪ್ರಶ್ನಿಸಿದ್ದ ಆ ವ್ಯಕ್ತಿ ಪಶ್ಚಾತ್ತಾಪಗೊಂಡು ಅವರ ಬಳಿ ಬಂದು 'ತಾಯಿ ನಿಮ್ಮ ಶಕ್ತಿಯನ್ನು ತಿಳಿಯದೆ ಏನೇನೋ ಅಂದು ನಿಮ್ಮ ಮನ ನೋಯಿಸಿದೆ. ಈಗ ಗೊತ್ತಾಯಿತು ನಿಮ್ಮ ನಟನೆ ಎಂಥದ್ದು ಎಂದು, ನನ್ನದು ತಪ್ಪಾಯಿತು. ದಯವಿಟ್ಟು ಕ್ಷಮಿಸಿ ಎಂದು ಬೇಡಿಕೊಂಡನಂತೆ.' ನಂತರ ಈ ನಾಟಕದ ತಾಯಿ ಪಾತ್ರಕ್ಕಾಗಿ ಪ್ರಮೀಳಮ್ಮನವರನ್ನೇ ಹುಡುಕಿಕೊಂಡು ಬರುವಂತಾಯಿತು.

## 'ಶ್ರೀ ಗುರು ಪಂಚಾಕ್ಷರ ಸೇವಾ ಸಮಿತಿ' ಗದಗ

ಗದುಗಿನ 'ಶ್ರೀ ಗುರು ಪಂಚಾಕ್ಷರ ಸೇವಾ ಸಮಿತಿ'ಯ ಕಂಪನಿಯಿಂದ 'ಪಂಚಾಕ್ಷರಿ ಗವಾಯಿಗಾಳ ಜೀವನಾಧರಿತ ನಾಟಕ'ವೊಂದನ್ನು ಪ್ರಯೋಗಿಸಲಾಯಿತು. ಪ್ರಮೀಳಮ್ಮ ಗುಡೂರು, ಸುಭದ್ರಮ್ಮ ಮನ್ಸೂರ, ಕುಂದಾಪುರ ಮಾಲಾ, ಮಮತಾ ಗುಡೂರು ಮೊದಲಾದ ನಟಿಯರು ಆ ನಾಟಕದಲ್ಲಿ ನಟಿಸಿದ್ದರು. ಪಂಚಾಕ್ಷರಿ ಗವಾಯಿಗಳ ತಾಯಿಯ ಪಾತ್ರವನ್ನು ಸುಭದ್ರಮ್ಮ ಮನ್ಸೂರ ನಿರ್ವಹಿಸಿದರು. ಪ್ರಮೀಳಮ್ಮ ಗವಾಯಿಗಳ ಸಾಕುತಾಯಿಯ ಪಾತ್ರವನ್ನು ಮಾಡಿದರು. ಕುಂದಾಪುರ ಮಾಲಾ ದಾಸಿಯ ಪಾತ್ರವನ್ನು, ಮಮತಾ ಗುಡೂರು ಹಾಸ್ಯ ಪಾತ್ರವನ್ನು ನಿಭಾಯಿಸಿದರಂತೆ. ಪಂಚಾಕ್ಷರಿ ಗವಾಯಿಗಳು ವಿದ್ಯಾಭ್ಯಾಸಕ್ಕಾಗಿ ಮನೆಬಿಟ್ಟು ಹೋಗುವಾಗ ಅವರನ್ನು ಬೀಳ್ಕೊಡುವ ಸಂದರ್ಭದಲ್ಲಿ ಸಾಕುತಾಯಿ ಪಾತ್ರ ಮಾಡಿದ ಪ್ರಮೀಳಮ್ಮ ಕಣ್ಣೀರು ಹಾಕಿದ ಪ್ರಸಂಗ ಹೇಗಿತ್ತೆಂದರೆ, ಸ್ವತಃ ಗವಾಯಿಗಳಿಗೆ ಜನ್ಮ ನೀಡಿದ ತಾಯಿಯೇ ಅಳುತ್ತಿದ್ದಾಳೆ. ಎನ್ನುವಂತಿತ್ತಂತೆ. ನಾಟಕವನ್ನು ನೋಡಲು ಅಂದು ಆಗಮಿಸಿದ ಗದುಗಿನ ತೋಂಟದಾರ್ಯ ಮಠದ ಡಾ॥ ತೋಂಟದ ಸಿದ್ಧಲಿಂಗ

ಯತಿಗಳು ಹುಬ್ಬಳ್ಳಿಯ ಮೂರು ಸಾವಿರ ಮಠದ ರಾಜಯೋಗೀಂದ್ರ ಮಹಾಸ್ವಾಮಿಗಳು ಇನ್ನೂ ಹಲವಾರು ಪೂಜ್ಯರು ಸಂತೋಷಗೊಂಡು ಮೆಚ್ಚುಗೆ ವ್ಯಕ್ತಪಡಿಸಿದರು.

ನಾಟಕ ಮುಗಿದ ಮೇಲೆ ಮಾತನಾಡಿದ ಗದುಗಿನ ಡಾ॥ ತೋಂಟದ ಸಿದ್ಧಲಿಂಗ ಯತಿಗಳು ಪ್ರಮೀಳಮ್ಮನವರ ಅಭಿನಯವನ್ನು ನೋಡಿ 'ನೀನು ಗವಾಯಿಗಳ ಸಾಕುತಾಯಿಯಾಗಿ ಮಗನನ್ನು ವಿದ್ಯಾಭ್ಯಾಸಕ್ಕಾಗಿ ಬೀಳ್ಕೊಡುವಾಗ ದು:ಖದಿಂದ ಕಣ್ಣೀರು ಹಾಕಿದ್ದನ್ನು ಕಂಡು ಆ ತಾಯಿಯೇ ನಿನ್ನ ರೂಪದಲ್ಲಿ ಬಂದಳೇನೋ ಎಂಬಂತೆ ಮಾಡಿದೆ. ಶರಣರು ಅಳುವುದಿಲ್ಲ. ನಾವು ನಿನ್ನ ಪಾತ್ರದ ದು:ಖ ನೋಡಿ ನಾವೂ ಅತ್ತೇವು' ಎಂದು ಹೇಳಿ ಪ್ರಮೀಳಮ್ಮನವರನ್ನು ತಾಯಿ ಎಂದು ಸಂಬೋಧಿಸಿದರು. ಅಲ್ಲದೆ ಪಂಡಿತ ಪುಟ್ಟರಾಜ ಗವಾಯಿಗಳು 'ಅಭಿನಯ ಕಲಾಧರಿತ್ರಿ' ಎಂಬ ಬಿರುದನ್ನು ನೀಡಿ ಆಶೀರ್ವದಿಸಿದರು.

ಸುಮಾರು ಹದಿನೈದು ವರ್ಷ [೨೦೦೦]ಗಳ ಹಿಂದೆ ನಡೆದ ಘಟನೆಯೊಂದನ್ನು ಇಲ್ಲಿ ಸ್ಮರಿಸಲೇಬೇಕು. ಆಗ ಪ್ರಮೀಳಮ್ಮನವರಿಗೆ ವಯಸ್ಸಾಗಿತ್ತು. ಕಾರಣ ಅವರಿಗೆ ಅಭಿನಯಿಸಲು ಯಾರೂ ಕರೆಯುತ್ತಿರಲಿಲ್ಲ. ಹೀಗಾಗಿ ಪಾತ್ರಗಳು ಇಲ್ಲದೆ ಮನೆಯಲ್ಲಿ ಕುಳಿತು, ಕುಳಿತು ಜೀವನ ಬೇಸರವಾಗಿತ್ತು. ಆ ಸಮಯದಲ್ಲಿ ಸಹೋದರಿ ಮಮತಾ ನಾಟಕವಾಡಲು ಬೆಂಗಳೂರಿಗೆ ಹೋಗುತ್ತಿರುವಾಗ ತನ್ನೊಂದಿಗೆ ಅಕ್ಕ ಪ್ರಮೀಳಾ ಅವರನ್ನು ಕರೆದುಕೊಂಡು ಹೋದರು. ಅವತ್ತಿನವರೆಗೂ ಪ್ರಮೀಳಾ ಬೆಂಗಳೂರನ್ನು ನೋಡಿರಲಿಲ್ಲ. ಮೊದಲ ಸಲ ಬೆಂಗಳೂರಿಗೆ ತಂಗಿಯೊಂದಿಗೆ ಹೋದರು. ಬೆಂಗಳೂರಿನ 'ಗುಬ್ಬಿ ರಂಗಮಂದಿರ'ದಲ್ಲಿ ಗಂಗೂರ ಈಶ್ವರಪ್ಪನವರು ನಾಟಕಗಳನ್ನು ಆಡಿಸುತ್ತಿದ್ದರು. ಅವರು ಪ್ರಮೀಳಾ–ಮಮತಾ ಇವರಿಬ್ಬರನ್ನು ಗುಡೂರು ಸಹೋದರಿಯರೆಂದು ಕರೆಯುತ್ತಿದ್ದರಂತೆ. ಈಶ್ವರಪ್ಪನವರು ಎನ್.ಎಸ್. ಜೋಶಿ ಕವಿಗಳು ರಚಿಸಿದ 'ಚನ್ನಪ್ಪ ಚನೆಗೌಡ' ಸಾಮಾಜಿಕ ನಾಟಕವನ್ನು ಪ್ರಯೋಗಿಸಲು ಮುಂದಾದರು. ನಾಟಕದ ಚನ್ನಪ್ಪನ ತಾಯಿ ಈರಮ್ಮನ ಪಾತ್ರವನ್ನು ಪ್ರಮೀಳಾಗೆ ಕೊಟ್ಟರು. ಈ ಮೊದಲು ಈ ಪಾತ್ರವನ್ನು ಬೇರೆ ಬೇರೆಯವರು ಅಭಿನಯಿಸುತ್ತಿದ್ದರು ಅವರು ಇದ್ದಾಗಲೂ ಈರಮ್ಮನ ಭೂಮಿಕೆಯನ್ನು ಪ್ರಮೀಳಾಗೆ ನೀಡಿದರು. ಕಾರಣ ಅವರು ತಾಯಿ ಪಾತ್ರದಿಂದ ಈಗಾಗಲೇ ನಾಡಿನ ತುಂಬೆಲ್ಲ ಹೆಸರಾಗಿದ್ದರು. ಪ್ರಮೀಳಮ್ಮ ಇದೇ ನಾಟಕದ ಪಾರ್ವತಿ, ಲಲತಾ ಪಾತ್ರಗಳಿಂದಲೂ ಜನಪ್ರಿಯತೆ ಗಳಿಸಿದ್ದರು.

ಈರಮ್ಮಳಿಗೆ ಚನ್ನಪ್ಪ ಮತ್ತು ಭೀಮೇಶ ಎಂಬ ಇಬ್ಬರು ಗಂಡುಮಕ್ಕಳು ಇರುತ್ತಾರೆ. ಪ್ರಾಯಾವಸ್ಥೆಗೆ ಬಂದ ಮೇಲೆ ಇಬ್ಬರಿಗೂ ಒಂದೇ ಮನೆಯ ಅಕ್ಕ–ತಂಗಿಯರಾದ

ಪಾರ್ವತಿ, ಲಲಿತಾ ಅವರೊಂದಿಗೆ ಮದುವೆ ಮಾಡಲಾಗಿತ್ತು. ಚನ್ನಪ್ಪನ ಧರ್ಮ ಪತ್ನಿಯಾದ ಪಾರ್ವತಿ ಸಾತ್ವಿಕಳೂ ಗುಣವತಿಯೂ ಆಗಿದ್ದಳು. ಅವಳ ತಂಗಿ, ಭೀಮೇಶ ಹೆಂಡತಿ ಲಲಿತಾ ಗ್ರಾಮದ ಸಂಘವೊಂದರ ಚೇರ್‌ಮನ್‌ನಾಗಿದ್ದ ರಾಯಪ್ಪನನ್ನು ಪ್ರೀತಿಸುತ್ತಿರುತ್ತಾಳೆ. ಒಮ್ಮೆ ರಾಯಪ್ಪ-ಲಲಿತಾ ಮಾತನಾಡುತ್ತ ನಿಂತಿರುತ್ತಾರೆ. ಅದನ್ನು ನೋಡಿ ಪಾರ್ವತಿ 'ತಂಗಿ ಸಾಕು ಮಾಡು ನಿನ್ನ ಈ ಹುಚ್ಚಾಟ. ನಾವಿಬ್ಬರು ಎಂಥ ಮನೆತನಕ್ಕೆ ಸೇರಿದವರೆಂಬ ಎಚ್ಚರವಿರಲಿ ಎಂದು ಬೆದರಿಸಿದಳು'. ಆಗ ಅಲ್ಲಿಯೇ ಇದ್ದ ರಾಯಪ್ಪ, 'ಪಾರ್ವತಿ ಹೊಟ್ಟೆಕಿಚ್ಚಿನಿಂದ ನಮ್ಮಿಬ್ಬರ ನಡುವಿನ ಸಂಬಂಧವನ್ನು ಹಾಳು ಮಾಡಬೇಡ. ಬೇಕಾದರೆ ನಿನಗೂ ಸುಖ ನೀಡುವೆ ಎಂದನು'. ಅದನ್ನು ಕೇಳಿ ಪಾರ್ವತಿ ರೋಷದಿಂದ ಕೈಯಲ್ಲಿ ಕುಡುಗೋಲು ಹಿಡಿದು ಅವನನ್ನು ಹೊಡೆಯಲು ಮುಂದಾಗುತ್ತಾಳೆ. ಇದರಿಂದ ಅವಮಾನಿತನಾದ ರಾಯಪ್ಪನಿಗೆ ಪಾರ್ವತಿಯ ಬಗೆಗೆ ದ್ವೇಷ ಹುಟ್ಟಿ, ಅವಳ ಗಂಡನನ್ನು ಸಾಯಿಸಿದರೆ ಆಕೆ ಊರು ಬಿಟ್ಟು ಹೋಗುತ್ತಾಳೆ. ಆಗ ನಮ್ಮಿಬ್ಬರ ಸರಸಕ್ಕೆ ಅನುವಾಗುತ್ತದೆಂದು ಭಾವಿಸಿದನು.

ಒಂದು ದಿನ ರಾಯಪ್ಪ ಪಾರ್ವತಿಯ ಗಂಡನಾದ ಚನ್ನಪ್ಪನ ಹತ್ತಿರ ಬಂದು ನಿನ್ನ ಹೆಂಡತಿ ಕಾಲೇಜು ಕಲಿಯುತ್ತಿರುವಾಗ ಹಾಗೆ, ಹೀಗೆ ಎಂದೆಲ್ಲ ಅವಳ ಶೀಲ, ಚಾರಿತ್ರ್ಯದ ಬಗ್ಗೆ ಸುಳ್ಳು ಹೇಳಿ ಅವನ ತಲೆಯನ್ನು ಕೆಡಿಸುತ್ತಾನೆ. ಪತ್ನಿಯನ್ನು ಬಹುವಾಗಿ ಪ್ರೀತಿಸುತ್ತಿದ್ದ ಚನ್ನಪ್ಪ ರಾಯಪ್ಪನ ಮಾತು ಕೇಳಿ ತಲೆ ತಿರುಗಿ ಬೀಳುತ್ತಾನೆ. ಆಗ ಅವನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಾರೆ. ವೈದ್ಯರು ಚಿಕಿತ್ಸೆ ನೀಡಿ ಮಾತ್ರೆ, ಔಷಧಿ ಕೊಟ್ಟು ಕಳಿಸುತ್ತಾರೆ.

ರಾಯಪ್ಪ ತನ್ನ ಪ್ರಿಯತಮೆ ಲಲಿತಾಳ ಕೈಯಲ್ಲಿ ವಿಷಕೊಟ್ಟು, ಅದನ್ನು ಡಾಕ್ಟರ್‌ರು ಚನ್ನಪ್ಪನಿಗೆ ಕೊಟ್ಟ ಔಷಧ ಬಾಟಲಿಯಲ್ಲಿ ಸೇರಿಸು ಎಂದು ಹೇಳಿ ಕಳಿಸುತ್ತಾನೆ. ಮನೆಗೆ ಬಂದ ಲಲಿತಾ ಅಕ್ಕ ಪಾರ್ವತಿ ಹಾಲು ತರಲು ಒಳಗೆ ಹೋದ ಸಮಯದಲ್ಲಿ ಔಷಧದ ಬಾಟಲಿಗೆ ವಿಷ ಹಾಕಿದಳು. ಪಾರ್ವತಿ ಗ್ಲಾಸಿನಲ್ಲಿ ಹಾಲು ತಂದು ಬಾಟಲಿಯಲ್ಲಿದ್ದ ವಿಷಯುಕ್ತ ಔಷಧವನ್ನು ಹಾಲಿಗೆ ಸೇರಿಸಿ ಪತಿ ಚನ್ನಪ್ಪನಿಗೆ ಕುಡಿಸುತ್ತಾಳೆ. ವಿಷ ಕುಡಿದ ಚನ್ನಪ್ಪ ಸಾವನ್ನಪ್ಪುತ್ತಾನೆ.

ಪ್ರೀತಿಯ ಮಗನ ಮರಣದಿಂದ ಬಹುನೊಂದುಕೊಂಡ ತಾಯಿ ಈರಮ್ಮ ಸೊಸೆಯನ್ನು ದೂರುತ್ತಾಳೆ. ತನ್ನ ಮಗನಿಗೆ ಹಾಲಿನೊಂದಿಗೆ ವಿಷ ಬೆರೆಸಿ ಕುಡಿಸಿ ಕೊಂದಳೆಂಬ ಕಾರಣಕ್ಕಾಗಿ, ಪಾರ್ವತಿ ನಿನ್ನನ್ನು ಅತಿಯಾಗಿ ಪ್ರೀತಿಸುತ್ತಿದ್ದ ನಿನ್ನ ಗಂಡನನ್ನು ಕೊಂದು ಹಾಕಿದೆ. ಅವನೇನು ಅನ್ಯಾಯ ಮಾಡಿದ್ದ ನಿನಗೆ? ಅವನೊಂದಿಗೆ ಸಂಸಾರ ಮಾಡಲು ಇಷ್ಟ ಇರದಿದ್ದರೆ ಅತ್ತೆಮ್ಮ ಹೀಗೆ ಅಂತ ಹೇಳಬೇಕಿತ್ತು, ನಾನು ನನ್ನ ಮಗನಿಗೆ ಹಳ್ಳಿಯ ಸುಸಂಸ್ಕೃತ ಸುಂದರಿಯನ್ನು ತಂದು ಮದುವೆ ಮಾಡಿ, ಸುಖ

ಸಂಸಾರವನ್ನು ನೋಡಿ ಸಂತೋಷಪಡುತ್ತಿದ್ದೆ ಎಂದು ನುಡಿದು ಪುತ್ರನ ಅಗಲಿಕೆಯ ಶೋಕ ಹೆಚ್ಚಾಗಿ ಹೃದಯಾಘಾತವಾಗಿ ನೆಲಕ್ಕೆ ಬಿದ್ದು ಮರಣ ಹೊಂದುತ್ತಾಳೆ.

ತಾಯಿ ಈರಮ್ಮನ ಪಾರ್ಟನ್ನು ಪ್ರಮೀಳಮ್ಮ ಮಹೋನ್ನತವಾಗಿ ಮಾಡಿದರು. ಎಲ್ಲರ ಮನಮುಟ್ಟುವಂತಿದ್ದ ಪಾತ್ರವನ್ನು ನೋಡಿ ಬೆಂಗಳೂರಿನ ಕಲಾಭಿಮಾನಿಗಳು ರಂಗಮಂಟಪಕ್ಕೆ ಬಂದು ಕಲಾವಿದೆಗೆ ಕೈಕುಲುಕಿ ಮೆಚ್ಚುಗೆ ಸೂಚಿಸಿದರಂತೆ. ಈರಮ್ಮ ಪಾತ್ರದ ನಟಿ ಪ್ರಮೀಳಾಗೆ ಪ್ರತಿ ಪ್ರಯೋಗಕ್ಕೆ ಏಳು ನೂರರಿಂದ ಎಂಟನೂರು ರೂಪಾಯಿಗಳವರೆಗೆ ಪ್ರೋತ್ಸಾಹಕರ ಹಣ ಬರುತ್ತಿತ್ತೆಂಬುದು ಅವರ ಅಮೋಘ ಅಭಿನಯಕ್ಕೆ ಸಾಕ್ಷಿಯಾಗಿದೆ.

ಬೆಂಗಳೂರ ಮೂಲದ ಕಲಾ ಪ್ರೇಕ್ಷಕನಾದ ರವಿ ಎಂಬುವನು ಪ್ರಮೀಳಾ ಅವರ ತಾಯಿ ಈರಮ್ಮನ ಪಾತ್ರವನ್ನು ಬಹಳ ಮೆಚ್ಚಿಕೊಂಡು ಅವರಿಗೆ ಬೆಲೆಬಾಳುವ ರೇಶ್ಮೆಸೀರೆಯೊಂದನ್ನು ಉಡುಗೊರೆಯಾಗಿ ತಂದುಕೊಟ್ಟನಂತೆ. ಆಗ ಪ್ರಮೀಳಮ್ಮ 'ತಮ್ಮಾ ಇಷ್ಟೊಂದು ಬೆಲೆಬಾಳುವ ಸೀರೆ ನನಗೇಕೆ ಬೇಕಪ್ಪ, ಈ ವಯಸ್ಸಿನಲ್ಲಿ ನಾನು ಸಾದಾ ಸೇರೆ ಉಡುವವಳು' ಎಂದು ಹೇಳಿ ಮಾನವೀಯತೆಯನ್ನು ವ್ಯಕ್ತಪಡಿಸಿದರು. ಅದಕ್ಕೆ ಪ್ರತಿಯಾಗಿ ರವಿ 'ಇರಲಿ ಇಟ್ಟುಕೊಳ್ಳಿ ಅಮ್ಮಾ' ಎಂದು ಹೇಳಿ ಕಲಾ ಪ್ರೇಮವನ್ನು ಮೆರೆದರು.

ಒಮ್ಮೆ ಗುಬ್ಬಿ ಥೇಟರ್‌ಗೆ ಈ ನಾಟಕವನ್ನು ನೋಡಲು ನಟ, ಕಂಪನಿಯ ಮಾಲೀಕ ನಿರ್ದೇಶಕರಾದ ಸಿದ್ದು ನಾಲತವಾಡ ಅವರು ಹೋಗಿದ್ದರಂತೆ. ತಾಯಿ (ಈರಮ್ಮ) ಪಾತ್ರದ ಕಲಾವಿದೆ ಪ್ರಮೀಳಮ್ಮನವರ ನಟನೆಯನ್ನು ಕಂಡು ದಂಗಾಗಿ, ನಾಟಕ ಮುಗಿದ ಮೇಲೆ ಅವರನ್ನು ಭೇಟಿಯಾಗಿ 'ಅಕ್ಕಾ ನಾನು ಚನ್ನಪ್ಪ ಚನೆಗೌಡ ನಾಟಕವನ್ನು ಪ್ರಯೋಗಿಸುವೆ. ನೀನು ಚನ್ನಪ್ಪನ ತಾಯಿ ಈರಮ್ಮನ ಪಾತ್ರ ಮಾಡಬೇಕು ಎಂಬುದು ನನ್ನ ಅಪೇಕ್ಷೆ. ಅದಕ್ಕಾಗಿ ಬನ್ನಿ' ಎಂದು ತಮ್ಮ ಮಂಡಳಿಗೆ ಆಹ್ವಾನವಿತ್ತರಂತೆ. ಅದಕ್ಕೆ ಪ್ರಮೀಳಮ್ಮ ಒಪ್ಪಿಕೊಂಡರು.

ನಂತರ ಸಿದ್ದು ನಾಲತವಾಡ ಅವರ ಆಹ್ವಾನದ ಮೇರೆಗೆ ಪ್ರಮೀಳಾ, ಅವರ ನಾಟಕ ಮಂಡಳಿಗೆ ಹೋದರು. ಅಲ್ಲಿ ಕಣವಿ ಕವಿಗಳ 'ಚನ್ನಪ್ಪ ಚನೆಗೌಡ' ನಾಟಕದ ತಾಯಿ ಈರಮ್ಮನ ಪಾತ್ರವನ್ನು ಒಡೆಯರ ವಿಶ್ವಾಸಕ್ಕೆ ಅರ್ಹವಾದ ರೀತಿಯಲ್ಲಿ ನಟಿಸಿ ಅವರ ಪ್ರೀತಿಗೆ ಪಾತ್ರರಾದರು. ಜೊತೆಗೆ ಕಲಾಭಿಮಾನಿಗಳ ಗೌರವ ಸಂಪಾದಿಸಿದರು. ಅಲ್ಲದೆ, ಪಿ.ಬಿ. ಧುತ್ತರಗಿ ಕವಿಗಳ 'ತಾಯಿ ಕರುಳು' ನಾಟಕದ ಪ್ರಮುಖ ಪಾತ್ರವಾದ ತಾಯಿ ಗೌರಮ್ಮನ ಭೂಮಿಕೆಯನ್ನು ಅಮೋಘವಾಗಿ ನಟಿಸಿ ಹೆಸರಾದರು.

ಜೇವರ್ಗಿ ರಾಜಣ್ಣ ಇಲಕಲ್ಲ ನಗರದಲ್ಲಿ ಕ್ಯಾಂಪ್ ಮಾಡಿದ್ದರು. ಒಂದು ದಿನ ಅವರು ರಂಗಭೂಮಿಯ ಹಿರಿಯ ಕಲಾವಿದರನ್ನು ಸನ್ಮಾನಿಸಿ, ಗೌರವಿಸುವ ಕಾರ್ಯಕ್ರಮವೊಂದನ್ನು ಹಮ್ಮಿಕೊಂಡಿದ್ದರು. ಎಚ್.ಟಿ.ಅರಸು, ಪ್ರಮೀಳಮ್ಮ, ಪತ್ತಾರ ಶಾಂತಮ್ಮ ಮೊದಲಾದ ಕಲಾವಿದರನ್ನು ಅಂದು ಕರೆಯಿಸಿ ಗೌರವ ಸತ್ಕಾರ ನೀಡಲಾಯಿತು. ಸನ್ಮಾನ ಸ್ವೀಕರಿಸಿ ಅದಕ್ಕೆ ಉತ್ತರಿಸುತ್ತಿದ್ದಾಗ ಪ್ರಮೀಳಮ್ಮನವರು ಕಂದಗಲ್ಲ ಹನುಮಂತರಾಯ 'ರಕ್ತರಾತ್ರಿ' ನಾಟಕದ ಅಶ್ವತ್ಥಾಮನ ಪಾತ್ರಾಭಿನಯ ಹಾಗೂ ಸಂಭಾಷಣೆಯನ್ನು ಇಳಿವಯಸ್ಸಿನಲ್ಲೂ ಅಮೋಘವಾಗಿ ಮಾಡಿ ನೆರೆದ ಪ್ರೇಕ್ಷಕರಿಂದ ಚಪ್ಪಾಳೆ ಹಾಕಿಸಿಕೊಂಡರು. ಕೆಲವರು 'ಹೌದು ತಾಯಿ, ಹೌದು, ನಿನ್ನ ಪಾತ್ರ' ಎಂದು ತಲೆದೂಗಿದರಂತೆ. ಕಾರ್ಯಕ್ರಮ ಮುಗಿದ ಮೇಲೆ ಜೇವರ್ಗಿ ರಾಜಣ್ಣನವರು ತಮ್ಮ ಕಂಪನಿಯ ಎಲ್ಲ ನಟಿಯರನ್ನು ಕರೆಯಿಸಿ 'ಪ್ರಮೀಳಾ ತಾಯಿಯ ಆಶೀರ್ವಾದ ತೆಗೆದುಕೊಳ್ಳಿ, ಅಂದಾಗ ನೀವು ಅವರಂತೆ ದೊಡ್ಡ ನಟಿಯಾಗುವಿರಿ, ಅವರ ಆಶೀರ್ವಾದ ನಿಮ್ಮ ಮೇಲೆ ಯಾವಾಗಲೂ ಇರುತ್ತದೆ ಎಂದು ಹೇಳಿ ಪ್ರಮೀಳಮ್ಮನವರಿಂದ ಆಶೀರ್ವಾದ ಕೊಡಿಸಿದರಂತೆ.

ಅಂದು ಪ್ರಮೀಳಮ್ಮನವರ ಅದ್ಭುತ ಅಭಿನಯವನ್ನು ನೋಡಿದ ರಾಜಣ್ಣನವರು ಮುಂದೆ ತಾವು ಥುತ್ತರಗಿ ಅವರ 'ತಾಯಿ ಕರುಳು' ನಾಟಕವನ್ನು ಪ್ರಯೋಗಿಸಲು ನಿರ್ಧರಿಸಿರುವ ವಿಷಯವನ್ನು ತಿಳಿಸಿ, ತಾವು ನಾಟಕದ ಗೌರಮ್ಮನ ಪಾತ್ರ ಮಾಡಲು ಬರಬೇಕೆಂದು ಆಹ್ವಾನ ನೀಡಿದರು. ಅದಕ್ಕೆ ಒಪ್ಪಿಕೊಂಡ ಪ್ರಮೀಳಮ್ಮನವರು ರಾಜಣ್ಣನವರ ಕಂಪನಿಗೆ ಹೋಗಿ 'ತಾಯಿ ಕರುಳು' ನಾಟಕದ ಗೌರಮ್ಮ ತಾಯಿಯ ಪಾರ್ಟನ್ನು ಮನಮೋಹಕವಾಗಿ ನಟಿಸಿದರು. ಅಲ್ಲದೆ 'ಸಿಂಧೂರ ಲಕ್ಷ್ಮಣ'ದ ನರಸವ್ವ ಪಾತ್ರದಲ್ಲೂ ಮಿಂಚಿದರು.

ಕುಂಟೋಜಿಯ ನಾಗಯ್ಯ ಪ್ರಮೀಳಾ ಅವರ ಅಭಿನಯ, ಸಂಭಾಷಣೆ ಮೆಚ್ಚಿ ತಾವು ಆಡಿಸಬೇಕೆಂದಿದ್ದ 'ಚನ್ನಪ್ಪ ಚನೆಗೌಡ' ನಾಟಕದ ಈರಮ್ಮ, 'ತಾಯಿ ಕರುಳು' ನಾಟಕದ ಗೌರಮ್ಮ ಪಾತ್ರಳಿಗೆ ಅವರನ್ನು ಬುಕ್ ಮಾಡಿಕೊಂಡು ಹೋದರಂತೆ. ಒಪ್ಪಂದ ಪ್ರಕಾರ ಪ್ರಮೀಳಮ್ಮ ಎರಡೂ ನಾಟಕಗಳ ತಾಯಿ ಪಾತ್ರಗಳನ್ನು ಮಹೋನ್ನತವಾಗಿ ನಟಿಸಿ ಮಾಲೀಕರ ಪ್ರೀತಿ, ಪ್ರೇಕ್ಷಕರ ಗೌರವಕ್ಕೆ ಕಾರಣರಾದರು.

'ಕರ್ನಾಟಕ ನಾಟಕ ಅಕಾಡೆಮಿಯ' ಈಗಿನ ಅಧ್ಯಕ್ಷರಾದ ಶ್ರೀ ಎಲ್.ಬಿ.ಶೇಖ್‌ಮಾಸ್ತರರು ಒಮ್ಮೆ ಪ್ರಮೀಳಾ ಅವರ 'ಮಲಮಗಳು'ನಾಟಕದ ಕಾವೇರಿ ಪಾತ್ರದ ಅಭಿನಯವನ್ನು ನೋಡಿ ಸಂತೋಷಪಟ್ಟು, ಇಪ್ಪತ್ತು ರೂಪಾಯಿಗಳನ್ನು ಪ್ರೋತ್ಸಾಹ ರೂಪದಲ್ಲಿ ನೀಡಿ 'ಪಮ್ಮಕ್ಕ ವಯಸ್ಸಿನಾಗ ನನ್ನ ಕಣ್ಣಿಗೆ ಬೀಳದೆ, ಈ

ಇಳಿವಯಸ್ಸಿನಲ್ಲಿ ಕಣ್ಣಿಗೆ ಬಿದ್ದೆಯಲ್ಲಾ' ಎಂದು ಅಭಿಮಾನದಿಂದ ಹೇಳಿದರಂತೆ. ಇಂಥ ವಯಸ್ಸಿನಲ್ಲಿ ಹೀಗೆ ಅಮೋಘವಾಗಿ ಅಭಿನಯಿಸುವ ನೀನು ಯೌವನಾವಸ್ಥೆಯಲ್ಲಿ, ಪ್ರಾರಂಭದ ದಿನಗಳಲ್ಲಿ ಹೇಗಿದ್ದಿರಬಹುದು. ಇಂಥ ನಟಿ ನನಗೆ ಮೊದಲು ಸಿಕ್ಕಿದ್ದರೆ ಮಂಡಳಿಗೆ ಹೆಸರು ಬರಬಹುದಿತ್ತಲ್ಲ ಎಂಬ ಭಾವನೆಯಿಂದ ಮೇಲಿನ ಮಾತನ್ನು ಆಡಿದ್ದರು.

ದಿನಾಂಕ ೧೯-೦೫-೨೦೦೮ರಂದು ಬೆಂಗಳೂರಿನಲ್ಲಿ 'ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿ ಬೆಂಗಳೂರು' ಇವರ ವತಿಯಿಂದ 'ಲೋಕೇಶ ನೆನಪು' ಎಂಬ ಕಾರ್ಯಕ್ರಮ ಜರುಗಿತು. ಆ ಸಂದರ್ಭದಲ್ಲಿ ಶ್ರೀಮತಿ ಗಿರಿಜಾ ಲೋಕೇಶರು ಪ್ರಮೀಳಮ್ಮನವರನ್ನು ಆಹ್ವಾನಿಸಿದ್ದರು. ಆಗ ಜಯರಾಜ (ಜಯಣ್ಣ) ಹೊಸಮನಿ ಹಾಗೂ ಪ್ರಮೀಳಮ್ಮ ಇರ್ವರು ಮಹಾನ್ ಕಲಾವಿದರು. 'ಸಿಂಧೂರ ಲಕ್ಷ್ಮಣ' ನಾಟಕದ ಒಂದು ಸನ್ನಿವೇಶವನ್ನು ಮಾಡಿ ತೋರಿಸಿದರು. ಜಯಣ್ಣ ನಾಟಕದ ವೀರಯ್ಯನ ಪಾತ್ರದಲ್ಲಿ, ಪ್ರಮೀಳಮ್ಮ ನರಸವ್ವನ ಪಾತ್ರದಲ್ಲಿ ಮಿಂಚಿ, ನೆರೆದ ಪ್ರೇಕ್ಷಕರನ್ನು ಆನಂದಗೊಳಿಸಿದರು. ಈ ಕಾರಣಕ್ಕಾಗಿ ಶ್ರೀಮತಿ ಗಿರಿಜಾ ಲೋಕೇಶ ಅವರಿಬ್ಬರನ್ನು ಅಭಿನಂದಿಸಿದ್ದು ಸ್ಮರಣೀಯ ಕ್ಷಣ. ಅದನ್ನು ಪ್ರಮೀಳಮ್ಮ ಅಭಿಮಾನದಿಂದ ನೆನಪಿಸಿಕೊಳ್ಳುತ್ತಾರೆ.

ಸುಮಾರು ೨೦೦೮ನೆಯ ಇಸ್ವಿ ಇರಬಹುದು. ದಾವಣಗೆರೆ ನಗರದಲ್ಲಿ ಕನ್ನಡ ನಾಡಿನ ರಂಗಭೂಮಿಯ ಕಲಾವಿದರ ಸಮ್ಮೇಳನ ನಡೆಯಿತು. ಆಗ ಕರ್ನಾಟಕದ ಎಲ್ಲಾ ಕಲಾವಿದರು ಅಲ್ಲಿಗೆ ಆಗಮಿಸಿದ್ದರು. ಗುಡೂರು ಪ್ರಮೀಳಮ್ಮನವರು ಹೋಗಿದ್ದರು. ಪ್ರಮೀಳಮ್ಮನವರ ಸ್ನೇಹಿತೆ, ರಂಗ ಪ್ರೇರಕಿಯಾದ ನಟಿ ಜಯಲಕ್ಷ್ಮಿ ಪಾಟೀಲರು ಕೂಡ ಆ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಇವರಿಬ್ಬರ ನಡುವೆ ಬಹು ಆತ್ಮೀಯತೆಯ ನಂಟು ಇತ್ತು. ಪ್ರಮೀಳಾ ಅವರು ಜಯಲಕ್ಷ್ಮಿಯನ್ನು ಅಕ್ಕ ಎಂದು ಪ್ರೀತಿ, ಗೌರವದಿಂದ ಕರೆಯುತ್ತಾರೆ. ದಾವಣಗೆರೆಯ ಆ ಸಮ್ಮೇಳನದಲ್ಲಿ 'ಕರ್ನಾಟಕ ನಾಟಕ ಅಕಾಡೆಮಿ'ಯ ಆಗಿನ ಅಧ್ಯಕ್ಷರಾಗಿದ್ದ ಶ್ರೀ ಶ್ರೀನಿವಾಸ ಜಿ. ಕಪ್ಪಣ್ಣ ಅವರು ಭಾಗವಹಿಸಿದ್ದರು. ಆಗ ರಂಗನಟಿ ಜಯಲಕ್ಷ್ಮಿಯವರು ಅಕಾಡೆಮಿಯ ಅಧ್ಯಕ್ಷರ ಮುಂದೆ ಗೆಳತಿ ಪ್ರಮೀಳಾ ಅವರ ಅಭಿನಯ, ಕೀರ್ತಿ, ಹೆಸರು ಮೊದಲಾದವನ್ನು ಹೇಳಿ ಇವರಿಗೆ ಸಿನೇಮಾ ಧಾರಾವಾಹಿಗಳಲ್ಲಿ ನಟಿಸಲು ಅವಕಾಶ ಕೊಡಿಸಿ ಕೊಡಿ ಎಂದು ಪ್ರಾರ್ಥಿಸಿಕೊಂಡರಂತೆ. ಜಯಲಕ್ಷ್ಮಿಯವರ ವಿನಂತಿಯ ಮೇರೆಗೆ ಸಿನೇಮಾ, ಧಾರಾವಾಹಿಗಳಲ್ಲಿ ನಟಿಸುವೀರಾ..? ಎಂದು ಕೇಳಿದರಲ್ಲದೆ ಆ ಕ್ಷಣದಲ್ಲಿ ನಾಡಿನ ಚಲನಚಿತ್ರ ರಂಗದ ಶ್ರೇಷ್ಠ ನಿರ್ದೇಶಕರಾದ ಶ್ರೀಗಿರೀಶ ಕಾಸರವಳ್ಳಿ ಅವರಿಗೆ ಫೋನ್ ಮಾಡಿ, ಪ್ರಮೀಳಮ್ಮನವರ ಅಭಿನಯದ ಬಗೆಗೆ ಹೇಳಿ ಅವರಿಗೆ ಚಲನಚಿತ್ರ ಹಾಗೂ

ಕಿರುತೆರೆಯಲ್ಲಿ ಅಭಿನಯಿಸಲು ಅವಕಾಶ ಕೊಡಿ ಎಂದು ಹೇಳುವುದರೊಂದಿಗೆ ಪ್ರಮೀಳಮ್ಮನವರ ಫೋನ್ ನಂಬರ್ ಕೊಟ್ಟರಂತೆ. ಅವರ ಈ ಶಿಫಾರಸ್ಸಿನ ಮೇರೆಗೆ ಪ್ರಮೀಳಾ ಅವರಿಗೆ ಸಿನೇಮಾ, ಕಿರುತೆರೆಗಳಲ್ಲಿ ಅವಕಾಶಗಳು ಲಭಿಸಿದವು. ತಮಗೆ ಇಂಥ ಅವಕಾಶಗಳನ್ನು ಕೊಡಿಸಿಕೊಡುವಲ್ಲಿ ಶ್ರಮಿಸಿದ, ಸಹಕರಿಸಿದ ಮಹನೀಯರನ್ನು ಅತ್ಯಂತ ಭಕ್ತಿಭಾವದಿಂದ ಸ್ಮರಿಸುತ್ತಾರೆ.

ಪ್ರಮೀಳಾ ಅವರು ಕಲಾವಿದರ ಸಮ್ಮೇಳನದಲ್ಲಿ 'ಸಿಂಧೂರ ಲಕ್ಷ್ಮಣ'ನಾಟಕದ ನರಸವ್ವನ ಪಾತ್ರವನ್ನು ಅತ್ಯಂತ ಯಶಸ್ವಿಯಾಗಿ ನಟಿಸಿ, ಕಾರ್ಯಕ್ರಮದಲ್ಲಿ ಪಾಲ್ಗೊಂಡ ನಾಡಿನ ಎಲ್ಲ ಕಲಾವಿದರನ್ನು ರಂಜಿಸಿದರು. ನಾಟಕ ಅಕಾಡೆಮಿಯ ಅಧ್ಯಕ್ಷರಾಗಿದ್ದ ಶ್ರೀ ಶ್ರೀನಿವಾಸ ಕಪ್ಪಣ್ಣವರು ಪ್ರಮೀಳಮ್ಮನವರ ಮೋಹಕ ನಟನೆಯನ್ನು ನೋಡಿ ತುಂಬಾ ಮೆಚ್ಚಿಕೊಂಡರಂತೆ. ಈ ಘಟನೆ ಪ್ರಮೀಳಮ್ಮನವರಿಗೆ ಚಲನಚಿತ್ರ ಹಾಗೂ ಕಿರುತೆರೆಗೆ ಹೋಗಲು ಹೆಬ್ಬಾಗಿಲು ತೆರೆಯಿತು.

## ನಿರ್ದೇಶಕಿ

ರಂಗಭೂಮಿಯ ಮಿನುಗುತಾರೆಯಾದ ಗುಡೂರ ಪ್ರಮೀಳಮ್ಮ ಕೇವಲ ರಂಗನಟಿಯಾಗಿ ಮೆರೆದು ಇತಿಹಾಸ ನಿರ್ಮಿಸದೆ, ನಾಟಕಗಳನ್ನು ನಿರ್ದೇಶಿಸುವ ಮೂಲಕವೂ ಹೆಸರು ಮಾಡಿದ್ದಾರೆ. ಶ್ರೀ ಹನುಮಂತಗೌಡ ಮುದಿಗೌಡರ ಅವರಿಂದ ರಚಿತವಾದ 'ಹಲಗಲಿ ಬಂಡಾಯ'ಎನ್ನುವ ಐತಿಹಾಸಿಕ ನಾಟಕವು ರಂಗಭೂಮಿಯಲ್ಲಿ ಹಲವಾರು ಪ್ರಯೋಗಗಳನ್ನು ಯಶಸ್ವಿಯಾಗಿ ಕಂಡಿದೆ. ಬಾಗಲಕೋಟೆ ಜಿಲ್ಲೆಯ ಪ್ರಪ್ರಥಮ ಸ್ವಾತಂತ್ರ್ಯ ಸಂಗ್ರಾಮದ (೧೮೫೭) ನೈಜ ಘಟನೆ ಆಧಾರಿತ ನಾಟಕವಿದು. 'ಹಲಗಲಿ ಬಂಡಾಯ' ಎಂಬ ಹೆಸರಿನ ಈ ನಾಟಕವನ್ನು ಪ್ರಮೀಳಮ್ಮನವರು ಇನ್ನೋರ್ವ ರಂಗಕಲಾವಿದೆಯಾದ ಇಲಕಲ್ಲ ಶಾಂತಮ್ಮ ಪತ್ತಾರ ಅವರೊಂದಿಗೆ ಸೇರಿಕೊಂಡು ಬಹುಸಮರ್ಥವಾಗಿ ನಿರ್ದೇಶಿಸಿದ್ದಾರೆ. ಅದು ಕರ್ನಾಟಕ ಏಕೀಕರಣದ ಸುವರ್ಣೋತ್ಸವ ವರ್ಷವಾದ ೨೦೦೬ರಲ್ಲಿ 'ಕರ್ನಾಟಕ ನಾಟಕ ಅಕಾಡೆಮಿ'ಯ ವತಿಯಿಂದ ಬಾಗಲಕೋಟ 'ಜಿಲ್ಲಾಡಳಿತ ಮತ್ತು ಬಾಗಲಕೋಟೆಯ 'ಕನ್ನಡ ಮತ್ತು ಸಂಸ್ಕೃತಿ ಇಲಾಖೆ' ಇವುಗಳ ಸಹಯೋಗದಲ್ಲಿ ಆಯೋಜಿಸಿದ್ದ 'ಸುವರ್ಣ ಸಂಭ್ರಮ ನಾಟಕೋತ್ಸವ'ದ ಅಂಗವಾಗಿ 'ಹಲಗಲಿ ಬಂಡಾಯ' ನಾಟಕವನ್ನು ಪ್ರದರ್ಶನ ಮಾಡಲಾಯಿತು. ಸೂಳೇಭಾವಿಯ 'ರಾನಾಸಂ ಹವ್ಯಾಸಿ ಕಲಾ ಸಂಸ್ಥೆ'ಯು ೨೦೦೬ರ ಅಕ್ಟೋಬರ್ ೫,೬,೭,೮ ಹಾಗೂ ೧೧ ನೆಯ ದಿನಾಂಕಗಳಂದು ಕ್ರಮವಾಗಿ ಜಮಖಂಡಿ, ಮುಧೋಳ, ಬೀಳಗಿ, ಬಾಗಲಕೋಟೆ ಮತ್ತು ಇಲಕಲ್ಲ ನಗರಗಳಲ್ಲಿ 'ಹಲಗಲಿ ಬಂಡಾಯ' ನಾಟಕವನ್ನು ಪ್ರಯೋಗಿಸುವ ಮೂಲಕ ರಂಗಾಭಿಮಾನಿಗಳಿಗೆ ಮನರಂಜನೆ ನೀಡಿತು.

'ಹಲಗಲಿ ಬಂಡಾಯ' ನಾಟಕ ಮಾತ್ರವಲ್ಲದೆ, ತಮ್ಮ ಸ್ವಂತ ನಾಟಕ ಮಂಡಳಿಯಲ್ಲಿ ಪ್ರದರ್ಶಿಸಿದ ರೇಣುಕಾ ಎಲ್ಲಮ್ಮ, ಮಲಮಗಳು, ಹಡೆದವ್ವ, ಗೌಡ್ರ ಗದ್ಲ ಮುಂತಾದ ನಾಟಕಗಳನ್ನು ಪ್ರಮೀಳಮ್ಮನವರೆ ನಿರ್ದೇಶಿಸಿ ಪ್ರಯೋಗಿಸಿದರು.

## ಕಂಪನಿಯ ಮಾಲೀಕರು

ಪ್ರಮೀಳಮ್ಮನವರು ಸ್ವಂತ ನಾಟಕ ಮಂಡಳಿಯೊಂದನ್ನು ಸ್ಥಾಪಿಸಿ ಆ ಮೂಲಕವು ರಂಗ ಕೈಂಕರ್ಯ ಮಾಡಿದ್ದಾರೆ. 'ಶ್ರೀ ಹುಲ್ಲೇಶ್ವರ ನಾಟ್ಯ ಸಂಘ, ಗುಡೂರು' ಎಂಬುದು ಪ್ರಮೀಳಾ ಅವರ ಒಡೆತನದ ಕಂಪನಿ. ಈ ನಾಟಕ ಮಂಡಳಿಯಲ್ಲಿ ಕೇವಲ ಸ್ತ್ರೀ ಕಲಾವಿದೆಯರು ಇದ್ದರು. ಶ್ರೀ ಕರನಂದಿ ಬಸವರಾಜಪ್ಪನವರ ಹತ್ತಿರವಿದ್ದ ರಂಗ ಪರಿಕರಗಳನ್ನು ತಂದು ನಾಟಕಗಳನ್ನು ತಮ್ಮ ಸಂಘದಲ್ಲಿ ಆಡಿಸಿದರು. ಬಸವಲಿಂಗ ಶಾಸ್ತ್ರಿಗಳ 'ರೇಣುಕಾ ಎಲ್ಲಮ್ಮ, ಪಿ.ಬಿ. ಧುತ್ತರಗಿ ಕವಿಗಳ 'ಮಲಮಗಳು, ಎಚ್.ಎನ್. ಹೂಗಾರ ಕವಿಗಳು ಬರೆದ 'ಹಡೆದವ್ವ', ಕಂದಗಲ್ಲ ಹನಮಂತರಾಯರ 'ರಕ್ತರಾತ್ರಿ, ಈಶಪ್ಪ ಅವರ ಗೌಡ್ರ ಗದ್ಲ' ಇನ್ನು ಮೊದಲಾದ ಜನಪ್ರಿಯ ನಾಟಕಗಳನ್ನು ಪ್ರದರ್ಶಿಸಿದರು.

ಪ್ರಮೀಳಮ್ಮ ತಾವು ಪ್ರಯೋಗಿಸಿದ ಎಲ್ಲ ನಾಟಕಗಳನ್ನು ತಾವೇ ನಿರ್ದೇಶಿಸಿದ್ದಾರೆ. ಅವರು 'ರೇಣುಕಾ ಎಲ್ಲಮ್ಮ' ನಾಟಕದಲ್ಲಿ ಪರಶುರಾಮ, 'ರಕ್ತರಾತ್ರಿ'ಯಲ್ಲಿ ಅಶ್ವತ್ಥಾಮ' 'ಗೌಡ್ರಗದ್ಲ'ದಲ್ಲಿ ದೇವೇಗೌಡ, 'ಮಲಮಗಳು' ನಾಟಕದಲ್ಲಿ ರಂಗಣ್ಣ ಈ ಪುರುಷ ಪಾತ್ರಗಳನ್ನು ಪ್ರೇಕ್ಷಕಾಭಿಮಾನಿಗಳ ಹೃದಯ ಮಂದಿರದಲ್ಲಿ ಶಾಶ್ವತವಾಗಿ ನೆಲೆ ನಿಲ್ಲುವಂತೆ ನಟಿಸಿದ್ದಾರೆ. ಆ ಸ್ತ್ರೀ ಕಲಾವಿದರ ತಂಡದಲ್ಲಿ ಮಮತಾ ಗುಡೂರು, ಪತ್ತಾರ ಶಾಂತಮ್ಮ, ರೇಣುಕಾ ಪತ್ತಾರ, ಜನ್ನತ್ ಬದಾಮಿ, ಜೋಶಿ ಶಾಂತಾ, ಶಿರಹಟ್ಟಿ ಶಾಂತಾ, ಅಂಜಲಿ ಮಾಲಾ ಮುಂತಾದ ಜನಪ್ರಿಯ ಕಲಾವಿದೆಯರು ಅಲ್ಲಿ ನಟಿಸಿ ಹೆಸರುವಾಸಿಯಾಗಿದ್ದಾರೆ. ಶಿರಹಟ್ಟಿ ಮೂಲದ ಅಶೋಕ ಎಂಬುವವರು ಪೇಟಿ ಮಾಸ್ತರ್ ಆಗಿ ಕಾರ್ಯನಿರ್ವಹಿಸಿದ್ದಾರೆ.

ಕಂಪನಿಯು ಅಮೀನಗಡ, ಕಮತಗಿ, ರಬಕವಿ, ಮಸ್ಕಿ, ಕವಿತಾಳ ಇನ್ನೂ ಅನೇಕ ಊರುಗಳಲ್ಲಿ ತನ್ನ ಜನಪ್ರಿಯ ನಾಟಕಗಳನ್ನು ಅದ್ದೂರಿಯಾಗಿ ಪ್ರಯೋಗಿಸಿ ರಂಗಪ್ರೇಮಿಗಳ ಮನಗೆದ್ದಿತು.

**'ಶ್ರೀ ಹುಲ್ಲೇಶ್ವರ ನಾಟ್ಯ ಸಂಘ'**ದಲ್ಲಿ ನಟಿಸುತ್ತಿದ್ದ ನಟಿಯರಿಗೆ ದಿನಾಲೂ ಅವರವರ ಪಾತ್ರಕ್ಕನುಸಾರವಾಗಿ ಸಂಬಳ ಕೊಡಲಾಗುತ್ತಿತ್ತು. ನಾಯಕ, ಗೌಡನ ಪಾತ್ರಕ್ಕೆ ನೂರು ರೂಪಾಯಿ, ಮತ್ತೆ ಕೆಲವು ಪಾತ್ರಗಳಿಗೆ ಎಂಬತ್ತು ರೂಪಾಯಿ ಇನ್ನೂ ಹಲವು ಪಾರ್ಟುಗಳಿಗೆ ಅರವತ್ತು ರೂಪಾಯಿ ಎಂದು ಪಗಾರ ನಿರ್ಧರಿಸಲಾಗಿತ್ತು. ಪ್ರತಿದಿನ

ನಾಟಕ ಮುಗಿದ ತಕ್ಷಣವೇ ಸಂಬಳ ಕೊಡುತ್ತಿದ್ದರು. ನಾಡಿನ ದೊಡ್ಡ ದೊಡ್ಡ ವೃತ್ತಿ ಕಂಪನಿಗಳಲ್ಲಿ ಕಲಾವಿದರುಗಳಿಗೆ ವಾರಕ್ಕೊಮ್ಮೆ, ತಿಂಗಳಿಗೊಮ್ಮೆ ಸಂಬಳ ಕೊಡುವ ವ್ಯವಸ್ಥೆ ಇತ್ತು. ಆದರೆ ಪ್ರಮೀಳಮ್ಮನವರು ಹಾಗೆ ಮಾಡದೆ ತಮ್ಮ ಸಂಘದಲ್ಲಿ ಕೆಲಸ ಮಾಡುತ್ತಿದ್ದವರಿಗೆ ದಿನಾಲೂ ಪಗಾರ ನೀಡುವ ವಿನೂತನ ಪದ್ದತಿಯನ್ನು ಜಾರಿಗೊಳಿಸಿದರು. ತಾವೂ ಓರ್ವ ಕಲಾವಿದೆಯಾಗಿ, ಅವರ ಆರ್ಥಿಕ ಸಮಸ್ಯೆಗಳು ಎಂಥವು ಎಂಬುದನ್ನು ಅರಿತುಕೊಂಡಿದ್ದ ಅವರು ಆ ಸಮಸ್ಯೆಗಳು ತಮ್ಮ ಕಂಪನಿಯ ಕಲಾವಿದೆಯರಿಗೆ ಬರಬಾರದು ಎನ್ನುವ ಮುಂದಾಲೋಚನೆ, ಸದುದ್ದೇಶದಿಂದ ನಿತ್ಯ ಹಣ ಕೊಡುವ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತಂದು ಕಲಾವಿದೆಯರ, ಅಲ್ಲಿ ಕಲಾಸೇವೆ ಸಲ್ಲಿಸುತ್ತಿದ್ದ ಇತರ ಕಲಾವಿದರ ಪ್ರೀತಿಗೆ ಕಾರಣರಾದರು.

ಮಂಡಳಿಯಲ್ಲಿ ಸೇವೆ ಸಲ್ಲಿಸುತ್ತಿದ್ದವರಿಗೆ ಎರಡು ಹೊತ್ತು ಊಟ ಕೊಡಲಾಗುತ್ತಿತ್ತು. ಬೆಳಿಗ್ಗೆ ಉಪಹಾರ, ಮಧ್ಯಾಹ್ನ ಹಾಗೂ ರಾತ್ರಿ ರೊಟ್ಟಿ, ಕಾಯಿಪಲ್ಲೆ, ಅನ್ನ, ಸಾರು ನೀಡಲಾಗುತ್ತಿತ್ತು. ಸ್ವಂತ ಮನೆಯವರೆ ಅಡುಗೆ ಮಾಡುತ್ತಿದ್ದರು. ಕೆಲವು ವೇಳೆ ಖಾನಾವಳಿಯಿಂದ ಊಟ ತರಿಸಿದ್ದು ಉಂಟು. ಯಾವ ಕಾರಣಕ್ಕೂ ಅಲ್ಲಿದ್ದವರಿಗೆ ಊಟದ ವಿಷಯದಲ್ಲಿ ತೊಂದರೆಯಾಗಲಿಲ್ಲವಂತೆ. ಕಂಪನಿಯ ಕಲಾವಿದೆಯರಲ್ಲಿ ಹೊಂದಾಣಿಕೆ, ಅನ್ಯೋನ್ಯತೆ ಇತ್ತು. ಅವರೆಲ್ಲ ಪ್ರತಿಭಾವಂತರಾಗಿದ್ದರು. ಕಲಾವಿಯರ ಅದ್ಭುತ ನಟನೆಯಿಂದಾಗಿಯೇ ಸುಮಾರು ಆರು ತಿಂಗಳ ಕಾಲ ಮಂಡಳಿ ಸಾಂಗವಾಗಿ ನಡೆಯಿತು. ಆ ನಂತರ ಕಂಪನಿ ಆರ್ಥಿಕ ಸಮಸ್ಯೆಯನ್ನು ಎದುರಿಸತೊಡಗಿತು. ಗತ್ಯಂತರವಿಲ್ಲದೆ ಕಂಪನಿಯನ್ನು ಬಂದ್ ಮಾಡಲಾಯಿತು.

ಕಷ್ಟಕರ ದಿನಗಳಲ್ಲಿ ಕಂಪನಿ ನಡೆಸುವುದು ದುಸ್ತರವಾದುದು. ದುಬಾರಿ ಕಾಲದಲ್ಲಿ ೪೦–೫೦ ಕಲಾವಿದರನ್ನು ಕಲೆಹಾಕಿಕೊಂಡು ಅವರಿಗೆ ಊಟ, ಸಂಬಳ ಕೊಟ್ಟು ನಾಟಕವಾಡಿಸುವುದು ಎಷ್ಟೊಂದು ತೊಂದರೆದಾಯಕ ಎಂಬುದು ಪ್ರಜ್ಞಾವಂತರಿಗೆ ತಿಳಿದ ವಿಷಯ. ಯಾವುದೋ ಕಾರ್ಯಕ್ರಮಕ್ಕೆ ಮನೆಗೆ ಬಂದ ಹತ್ತಾರು ರಕ್ತಸಂಬಂಧಿಗಳನ್ನೊ, ಅತಿಥಿಗಳನ್ನೊ ಎರಡು–ಮೂರು ದಿನಗಳವರೆಗೆ ಉಪಚರಿಸುವಷ್ಟರಲ್ಲಿ ಸುಸ್ತು ಹೊಡೆದಿರುತ್ತೇವೆ. ಅಬ್ಬಾ---- ಸಾಕಪ್ಪಾ--- ಇಂಥ ಕಾರ್ಯಕ್ರಮಗಳನ್ನು ಇನ್ನೊಮ್ಮೆ ಮಾಡುವುದೆ ಬೇಡ ಎಂದು ನಿಟ್ಟುಸಿರು ಹಾಕುತ್ತೇವೆ. ವರ್ತಮಾನದ ಸ್ಥಿತಿ ಹೀಗಿರುವಾಗ ಹೆಣ್ಣಾದ ಪ್ರಮೀಳಮ್ಮನವರು ಒಂದು ನಾಟಕ ಸಂಘವೊಂದನ್ನು ಸ್ಥಾಪಿಸಿ, ಹತ್ತಾರು ಕಡೆಗಳಲ್ಲಿ ನಾಟಕಗಳನ್ನು ಪ್ರಯೋಗಿಸಿರುವುದು, ಮಂಡಳಿಯ ಎಲ್ಲಾ ಕಲಾವಿದರನ್ನು ಸಂಬಾಳಿಸಿರುವುದು ಸಾಮಾನ್ಯ ವಿಷಯವೇನಲ್ಲ. ಗಂಡೆದೆಯ ಗಂಡಸರು ಇದನ್ನು ಮಾಡುವುದಕ್ಕೆ ಹಿಂಜರಿಯುತ್ತಿರುವ ದಿನಗಳಲ್ಲಿ

ಅಬಲೆ ಎನಿಸಿದ ಪ್ರಮೀಳಮ್ಮನವರು ಗಂಡು ಧೈರ್ಯ ಮಾಡಿ 'ಶ್ರೀ ಹುಲ್ಲೇಶ್ವರ ನಾಟ್ಯ ಸಂಘ' ವನ್ನು ಸ್ಥಾಪಿಸಿ, ಅದರ ಮೂಲಕ ಆರು ತಿಂಗಳ ಕಾಲ ನಾಟಕವಾಡಿಸಿ ರಂಗಸೇವೆ ಸಲ್ಲಿಸಿದ್ದು ಸ್ಮರಣೀಯ, ಸ್ತುತ್ಯಾರ್ಹ.

## ಚಲನಚಿತ್ರ

ಪ್ರಮೀಳಮ್ಮನವರ ಅಮೋಘ ಅಭಿನಯ ರಂಗಭೂಮಿಗೆ ಮಾತ್ರ ಸೀಮಿತವಾಗಲಿಲ್ಲ. ಅವರ ಮೋಹಕ ನಟನೆಯ ಹಿರಿಮೆಯ ಕಂಪು ಕನ್ನಡ ಚಲನಚಿತ್ರ ರಂಗದವರೆಗೂ ಪಸರಿಸಿತು. ಪ್ರಮೀಳಾ ಅವರ ಪರಿಪಕ್ವ ಅಭಿನಯವನ್ನು ಬಳಸಿಕೊಳ್ಳಲು ಮುಂದಾಗಿ ಅವರನ್ನು ಕೈಮಾಡಿ ಕರೆಯಿತು. ಇವರ ನಟನೆಯ ಬಗ್ಗೆ ಕೇಳಿ ತಿಳಿದಿದ್ದ ಕನ್ನಡ ಸಿನೇಮಾ ಕ್ಷೇತ್ರದ ಶ್ರೇಷ್ಠ ನಿರ್ದೇಶಕರಾದ ಗಿರೀಶ ಕಾಸರವಳ್ಳಿ ಅವರು ಒಂದು ದಿನ ಪ್ರಮೀಳಮ್ಮನವರಿಗೆ ಫೋನ್ ಮಾಡಿ 'ನೀವು, ನಾವು ನಿರ್ಮಿಸುತ್ತಿರುವ 'ಗುಲಾಬಿ ಟಾಕೀಸ್' ಸಿನೇಮಾದಲ್ಲಿ ನಟಿಸಲು ಬನ್ನಿ' ಎಂದು ಹೇಳಿದರಂತೆ. ಚಲನಚಿತ್ರದಲ್ಲಿ ನಟಿಸಲು ಅವಕಾಶ ಸಿಕ್ಕಿದ್ದಕ್ಕಾಗಿ ಪ್ರಮೀಳಮ್ಮ ಅಚ್ಚರಿ ಹಾಗೂ ಸಂತೋಷ ವ್ಯಕ್ತಪಡಿಸಿದರು.

'ಗುಲಾಬಿ ಟಾಕೀಸ್' ಚಿತ್ರದ ಶೂಟಿಂಗ್ ಉಡುಪಿ ಜಿಲ್ಲೆಯ ಸುತ್ತ ಮುತ್ತಲ ಭಾಗದಲ್ಲಿ ನಡೆಯಿತು. ಅದರಲ್ಲಿ ಪ್ರಮೀಳಮ್ಮ ಮೀನು ಹಿಡಿಯುವ ಅಜ್ಜಿಯ ಪಾತ್ರವನ್ನು ಅತ್ಯದ್ಭುತವಾಗಿ ಮಾಡಿ ನಿರ್ದೇಶಕರಿಂದ ಹೌದು ಎನಿಸಿಕೊಂಡರು. ಈ ಸಿನೇಮಾದಲ್ಲಿ ರಂಗಭೂಮಿ, ಚಲನಚಿತ್ರ ಕ್ಷೇತ್ರದಲ್ಲಿ ಮಿಂಚಿದ ಸಧ್ಯ ಕರ್ನಾಟಕ ಸರ್ಕಾರದ 'ಕನ್ನಡ ಮತ್ತು ಸಂಸ್ಕೃತಿಯ ಇಲಾಖೆಯ' ಸಚಿವೆಯಾದ ಉಮಾಶ್ರೀ ಅವರು ಕೂಡ ನಟಿಸಿದ್ದಾರೆ. ಪ್ರಮೀಳಮ್ಮನವರು ಅಜ್ಜಿಯ ಪಾತ್ರಕ್ಕಾಗಿ ಆಗ ಐದನೂರು ರೂಪಾಯಿ ಸಂಭಾವನೆ ಪಡೆದರಂತೆ.

ಅವರು 'ಕಾರಂತ ಅಜ್ಜನಿಗೆ ಬರೆದ ಪತ್ರ' ಎಂಬ ಮತ್ತೊಂದು ಕನ್ನಡ ಚಲನಚಿತ್ರದಲ್ಲಿಯೂ ನಟಿಸಿದ್ದಾರಂತೆ. ಅದರಲ್ಲಿಯೂ ಪ್ರಮೀಳಮ್ಮ ಅಜ್ಜಿಯ ಪಾತ್ರವನ್ನು ಹೃದಯ ಸ್ಪರ್ಶಿಯಾಗುವಂತೆ ಮಾಡಿದ್ದಾರೆ. ಅದಕ್ಕಾಗಿ ಹದಿನೈದು ನೂರು ರೂಪಾಯಿಗಳನ್ನು ಪಡೆದರು.

## ಕಿರುತೆರೆ (ದೂರದರ್ಶನ)

ಪ್ರಮೀಳಾ ಅವರ ಬಗ್ಗೆ ಅಭಿಮಾನದಿಂದ ಹೇಳುವ ಮತ್ತೊಂದು ವಿಷಯವೆಂದರೆ– ದೂರದರ್ಶನ (ಕಿರುತೆರೆ)ದ ಧಾರಾವಾಹಿಗಳಲ್ಲಿಯೂ ನಟಿಸಿದ್ದು. ಗಿರೀಶ ಕಾಸರವಳ್ಳಿ ನಿರ್ದೇಶನದ ಕನ್ನಡ ಚಿತ್ರಗಳಲ್ಲಿ ಅಭಿನಯಿಸಿದ್ದ ಪ್ರಮೀಳಮ್ಮನವರು ಅವರ ಧರ್ಮಪತ್ನಿ ವೈಶಾಲಿ ಕಾಸರವಳ್ಳಿ ನಿರ್ದೇಶನದ 'ಮಹಾನವಮಿ', 'ಮುತ್ತಿನ

ತೋರಣ', 'ಮತ್ತೆ ಬರುವನು ಚಂದಿರ' ಧಾರಾವಾಹಿಗಳಲ್ಲಿ ನಟಿಸಿದ್ದಾರೆ. 'ಮಹಾನವಮಿ' ಧಾರವಾಹಿಯಲ್ಲಿ ಬರುವ ಮಾಟಗಾರ್ತಿ ಪಾತ್ರಕ್ಕೆ ದಿನಕ್ಕೆ ಸಾವಿರ ರೂಪಾಯಿಗಳ ಸಂಭಾವನೆ ಪಡೆದ ಇವರು 'ಮುತ್ತಿನ ತೋರಣ'ದ ಅಜ್ಜಿಯ ನಟನೆಗಾಗಿ ದಿನಕ್ಕೆ ಒಂದು ಸಾವಿರ ರೂಪಾಯಿಗಳನ್ನು, 'ಮತ್ತೆ ಬರುವನು ಚಂದಿರ' ಧಾರಾವಾಹಿಯ ಮುದುಕಿಯ ಪಾತ್ರದ ನಟನೆಗಾಗಿ ದಿನಕ್ಕೆ ಹದಿನೈದು ನೂರು ರೂಪಾಯಿಗಳ ಸಂಭಾವನೆ ಪಡೆದಿದ್ದಾರಂತೆ. 'ಮಹಾನವಮಿ' ಮತ್ತು 'ಮುತ್ತಿನ ತೋರಣ' ಧಾರಾವಾಹಿಗಳು 'ಈ ಕನ್ನಡ' ಚಾನಲ್‌ನಲ್ಲಿ ಪ್ರಸಾರವಾಗಿವೆ.

ಒಟ್ಟಾರೆ ಪ್ರಮೀಳಮ್ಮನವರ ಬಣ್ಣದ ಬದುಕು ವೈವಿಧ್ಯತೆಯಿಂದ ಕೂಡಿದುದಾಗಿದೆ. ಕೇವಲ ರಂಗನಟಿಯಾಗಿ ಪ್ರಭುತ್ವ ಮೆರೆಯದೆ, ಚಿತ್ರನಟಿಯಾಗಿ, ಕಿರುತೆರೆಯ ನಟಿಯಾಗಿಯೂ ಮಿಂಚಿದುದು ಅವರ ಅಮೋಘ ಅಭಿನಯದ ಧ್ಯೋತಕ ಎನ್ನಬೇಕು. ಕಲಾವಿದೆಯಾಗಿ ಮಾತ್ರ ಕಲಾಸೇವೆಗೈಯದೆ, ನಾಟಕ ನಿರ್ದೇಶನ ಮಾಡಿ, ಸ್ವಂತ ಕಂಪನಿ ಸ್ಥಾಪಿಸಿ, ನಾಟಕಗಳನ್ನು ಪ್ರದರ್ಶಿಸುವ ಮೂಲಕವೂ ರಂಗಭೂಮಿಗೆ ಕೈಂಕರ್ಯ ಸಲ್ಲಿಸಿದ್ದಾರೆ.

# ದೃಶ್ಯ–೪

# ಪ್ರಶಸ್ತಿ–ಸನ್ಮಾನ–ಪ್ರಶಂಸೆ

ಪ್ರಮೀಳಮ್ಮ ಕನ್ನಡ ರಂಗಭೂಮಿಯ ಪ್ರತಿಭಾನ್ವಿತ ಕಲಾವಿದೆ. ಆಲ್‌ರೌಂಡರ್ ನಟಿ ಎನಿಸಿಕೊಂಡ ಅವರ ನಟನೆ ನಿಜಕ್ಕೂ ಅಮೋಘ. ಅವರ ಶ್ರೇಷ್ಠ ಮಟ್ಟದ ಪ್ರದರ್ಶನಕ್ಕೆ ಅರ್ಹ ಪ್ರಶಸ್ತಿಗಳು ಪ್ರಾಪ್ತವಾಗಿವೆ. ಪ್ರಮೀಳಾ ಅವರ ಮನೋಜ್ಞ ಅಭಿನಯಕ್ಕೆ ಪ್ರಶಸ್ತವಾದ ಪುರಸ್ಕಾರಗಳು ಸಂದಿಸಿವೆ. ರಂಗಭೂಮಿಗೆ ನಿ:ಸ್ವಾರ್ಥ ಸೇವೆ ಸಲ್ಲಿಸಿದ ಅವರನ್ನು ಅನೇಕ ಸಂಘ–ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ. ಕೆಲವರಂತೂ ಪ್ರಮೀಳಮ್ಮನವರ ಹೃದಯಸ್ಪರ್ಶಿ ಅಭಿನಯವನ್ನು ಮುಕ್ತ ಕಂಠದಿಂದ ಹೊಗಳಿದ್ದಾರೆ. ಒಟ್ಟಾರೆ ಪ್ರಮೀಳಮ್ಮನವರಿಗೆ ಸಿಕ್ಕ ಪ್ರಶಸ್ತಿಗಳನ್ನು ಮಾಡಿದ ಸನ್ಮಾನಗಳನ್ನು, ವಿದ್ವಾಂಸರು ವ್ಯಕ್ತಪಡಿಸಿದ ಪ್ರಶಂಸೆಗಳನ್ನು ತಿಳಿಸಿಕೊಡುವುದು ಈ ದೃಶ್ಯದ ಉದ್ದೇಶವಾಗಿದೆ.

## ಪ್ರಶಸ್ತಿಗಳು (ಬಿರುದುಗಳು)

೧. **'ಭಾವ ಭಾಗ್ಯಶ್ರೀ'**:– ಎನ್ನುವ ಬಿರುದು ಪ್ರಮೀಳಮ್ಮನವರಿಗೆ ದಿನಾಂಕ ೨೨–೦೮–೧೯೬೭ರಂದು ಲಭಿಸಿತು. ಇದನ್ನು ಕೊಟ್ಟವರು ನಾಟ್ಯ ಕವಿರಾಜ ಬಿರುದಿನ ಎಚ್.ಟಿ. ಮಹಾಂತೇಶಶಾಸ್ತ್ರಿಗಳು. ಕಮತಗಿಯ ಬಿ. ಆರ್. ಅರಿಷಿಣಗೋಡಿಯವರ 'ಶ್ರೀ ಹುಚ್ಚೇಶ್ವರ ನಾಟ್ಯ ಸಂಘ' ಬಿಜಾಪುರ ಕ್ಯಾಂಪಿನಲ್ಲಿ, ಎಚ್. ಟಿ. ಮಹಾಂತೇಶಶಾಸ್ತ್ರಿಗಳು ರಚಿಸಿದ 'ಏರಿದ ನಂಜು' ನಾಟಕವನ್ನು ಪ್ರದರ್ಶಿಸಿತು. ನಾಟಕದ ರಚನಾ ಕರ್ತೃಗಳು, ನಿರ್ದೇಶಕರು ಆದ ಶ್ರೀ ಎಚ್.ಟಿ. ಮಹಾಂತೇಶಶಾಸ್ತ್ರಿಗಳು 'ಊರ್ಮಿಳಾ' ಪಾತ್ರದ ಪ್ರಮೀಳಮ್ಮನವರ ಭಾವಪೂರ್ಣವಾದ ನಟನೆಯನ್ನು ಕಂಡು "ಈ ಭಾವನೆಗಳನ್ನು ಇಲ್ಲಿಯವರೆಗೆ ಎಲ್ಲಿ ಬಚ್ಚಿಟ್ಟಿದೆ, ಇಂದು ನಿನ್ನಲ್ಲಿರುವ ಎಲ್ಲ ಭಾವನೆಗಳನ್ನು ಹೊರಹಾಕಿ ಅತ್ಯದ್ಭುತವಾಗಿ ಅಭಿನಯಿಸಿರುವೆ" ಎಂದು ಪ್ರಶಂಸೆ ವ್ಯಕ್ತಪಡಿಸಿ ದಿನಾಂಕ ೨೨–೦೮–೧೯೬೭ರಂದು 'ಭಾವ ಭಾಗ್ಯಶ್ರೀ' ಎನ್ನುವ ಬಿರುದನ್ನು ನೀಡಿದರಂತೆ.

ಈ ಪ್ರಶಸ್ತಿಯು ಅರಿವೆ (ಬಟ್ಟೆ) ಮೇಲೆ ಬರೆಯಲ್ಪಟ್ಟಿದೆ. ಇದೊಂದು

ವಿನೂತನವಾದ ಪ್ರಶಸ್ತಿಯಾಗಿದೆ. ಈ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಶ್ರೀ ಮಲ್ಲಿಕಾರ್ಜುನ ಶ್ರೀಗಳು ಬಿಜಾಪುರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ವಸ್ತ್ರದ ಹಾಗೂ ಶ್ರೀ ಕಬಾಡೆ (ಶಾಸಕರು) ಮೊದಲಾದವರು ಉಪಸ್ಥಿತರಿದ್ದರು. ಆ ಪ್ರಶಸ್ತಿ ಪತ್ರದಲ್ಲಿ "ಕನ್ನಡ ಅಭಿನಯಾಗಸವಲ್ಲಿ ಈ ಕಲಾವಿದೆ ಮಿನುಗುವ ಮಹಾನಕ್ಷತ್ರಗಳಲ್ಲೊಬ್ಬರೆಂದು ಧೈರ್ಯವಾಗಿ ಹೇಳಬಹುದು. ನಮ್ಮ ರಂಗ ಸರಸ್ವತಿಯ ಭಾವ ನಾಲಿಗೆಯಾಗಿ, ಸಕಲ ಸಂಪದಭರಿತರಾಗಿ, ಶತವರ್ಷ ವಿಜಯ ದುಂದುಭಿ ಮೊಳಗಿಸುತ್ತ ಬಾಳಲೆಂದು ಆ ನಟರಾಜ ಸರಸ್ವತಿಯಲ್ಲಿ ಹಾರೈಸಿ ಹರಸುತ್ತಿದ್ದೇವೆ" ಎಂದಿದೆ.

೨. **'ನಾಟ್ಯ ಸರಸ್ವತಿ':-** ಇದು ಪ್ರಮೀಳಾ ಅವರ ಅಮೋಘ ಅಭಿನಯಕ್ಕೆ ಸಂದ ಎರಡನೆಯ ಪ್ರಶಸ್ತಿ. ಈ ಬಿರುದನ್ನು ರಾಯಚೂರಿನ 'ಕಲಾಭಿಮಾನಿಗಳ ಬಳಗ'ವು ನೀಡಿ ಗೌರವಿಸಿದೆ. ಪ್ರಶಸ್ತಿ ಪತ್ರವು "ಶ್ರೀ ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ' ಇವರ ಜನಪ್ರಿಯ ನಾಟಕಗಳಲ್ಲಿ ಪ್ರಮುಖ ಪಾತ್ರಗಳನ್ನು ವಹಿಸಿ, ಆಯಾ ಪಾತ್ರಗಳಿಗನುಗುಣವಾದ ಅರ್ಥಪೂರ್ಣ, ಸಂಕೇತಮಯ, ಸೂಕ್ಷ್ಮ ಹಾವ-ಭಾವಗಳಿಂದ, ನಟನಾಚಾತುರ್ಯದಿಂದ ಜನಮನವನ್ನು ಅರಳಿಸಿ, ಆನಂದಗೊಳಿಸುತ್ತಿರುವ ಶ್ರೀಮತಿ ಪ್ರಮೀಳಾಬಾಯಿ ಗುಡೂರು ಇವರ ಬಹುಮುಖ ಅಭಿನಯ ಸಾಮರ್ಥ್ಯಕ್ಕೆ ಮೆಚ್ಚಿ 'ನಾಟ್ಯ ಸರಸ್ವತಿ' ಎಂಬ ಬಿರುದನ್ನು ಗೌರವದೊಂದಿಗೆ ಕೊಡಲಾಗಿದೆ" ಎಂದಿದೆ. ಇದನ್ನು ದಿನಾಂಕ ೮-೧೦-೧೯೬೭ರಂದು ಪ್ರಮೀಳಮ್ಮ ಗುಡೂರು ಅವರಿಗೆ ನೀಡಿ ಗೌರವಿಸಿದರು.

೩. **ಶ್ರೇಷ್ಠ ನಟಿ:-** ಈ ಪ್ರಶಸ್ತಿಯನ್ನು ಉಡುಪಿಯ 'ನಾಟಕ ಸ್ಪರ್ಧಾ ಸಮಿತಿ'ಯವರು ದಿನಾಂಕ ೨೭-೧೨-೧೯೮೬ರಂದು ಕೊಟ್ಟು ಪುರಸ್ಕರಿಸಿದ್ದಾರೆ. ಈ ಸಮಿತಿಯು ಪ್ರತಿವರ್ಷ ನಾಡಿನ ನಾಟಕ ಮಂಡಳಿಗಳಿಂದ ಅರ್ಜಿ ಆಹ್ವಾನಿಸಿ, ಅವುಗಳ ಮೂಲಕ ಎಂಟು ನಾಟಕಗಳನ್ನು ಆಡಿಸಿ ನಾಟಕದ ಪಾತ್ರಧಾರಿಗಳಿಗೆ ಬಹುಮಾನ ಕೊಡಲಾಗುತ್ತಿತ್ತು. ೧೯೮೬ರ ನಾಟಕ ಸ್ಪರ್ಧೆಯಲ್ಲಿ ಕಂಪ್ಲಿಯ 'ಅಭಿನವ ಕಲಾರಂಗ'ದವರು 'ಮುಂದೇನು?' ಎಂಬ ನಾಟಕವನ್ನು ಪ್ರದರ್ಶಿಸಿದರು. ಪ್ರಮೀಳಮ್ಮನವರು ನಾಟಕದ 'ಶಾಂತಮ್ಮ'ನ ಪಾತ್ರವನ್ನು ಮಹೋನ್ನತವಾಗಿ ನಟಿಸಿದರು. ಐದು ಜನ ನ್ಯಾಯ ನಿರ್ಣಾಯಕರು ಪ್ರಮೀಳಮ್ಮನ ಪಾತ್ರವನ್ನು ಮೆಚ್ಚಿ 'ಶ್ರೇಷ್ಠ ನಟಿಯ ಪ್ರಥಮ ಬಹುಮಾನ'ವನ್ನು ನೀಡಿದರು. ಶ್ರೇಷ್ಠ ನಟಿ ಬಹುಮಾನ ಪತ್ರವು ಹೀಗಿದೆ. "This is to certify that smt. Prameela gudur of Abhinava Kalaranga has won first prize for best actress as "ಶಾಂತಮ್ಮ" in "ಮುಂದೇನು" in the Karnataka state level Kannada Drama competition conducted by us in the year 1986"

೪. **ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ:–** ೧೯೯೩ನೆಯ ಸಾಲಿನ 'ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ'ಯು ಪ್ರಮೀಳಮ್ಮನವರಿಗೆ ಸಂದಿದೆ. ಪ್ರಶಸ್ತಿ ಪತ್ರವು "ರಂಗಭೂಮಿಗೆ ಸಲ್ಲಿಸಿದ ಅಮೂಲ್ಯ ಸೇವೆಗಾಗಿ ಶ್ರೀಮತಿ ಪ್ರಮೀಳಾ ಗುಡೂರು (ಇಟಗಿ) ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ" ಎಂದಿದೆ.

ಪ್ರಶಸ್ತಿ ಪ್ರದಾನ ಸಮಾರಂಭವು ದಿನಾಂಕ ೧೧-೦೬-೧೯೯೪ರಂದು ದಾವಣಗೆರೆಯ ಬಾಪೂಜಿ ರಂಗಮಂದಿರದಲ್ಲಿ ಜರುಗಿತು. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಆಗಿನ ಸಚಿವರಾದ ಆರ್.ಎನ್. ನಾಯ್ಕರು ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಡಾ. ಚಂದ್ರಶೇಖರ ಕಂಬಾರ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಆಗ ನಾಟಕ ಅಕಾಡೆಮಿ ಅಧ್ಯಕ್ಷರಾದ ಶ್ರೀಮತಿ ಚಿಂದೋಡಿ ಲೀಲಾ, ನಾಡೋಜ ಏಣಗಿ ಬಾಳಪ್ಪ ಮೊದಲಾದವರು ಉಪಸ್ಥಿತರಿದ್ದರು.

೫. **ಅಭಿನಯ ಕಲಾಧರಿತ್ರಿ:–** ಗದಗ ನಗರದ ಶ್ರೀ ಗುರು ಪಂಚಾಕ್ಷರ ಸೇವಾ ಸಮಿತಿಯವರು ಕೊಡಮಾಡಿದ ಪ್ರಶಸ್ತಿ ಇದು. "ಸಂಗೀತ ಲೋಕದ ಧೃವತಾರೆಯಾಗಿ, ಲಲಿತಾ ಕಲಾ ರಂಗಗಳ ಸಂಜೀವಿನಿ ಸ್ವರೂಪರಾಗಿ ಬೆಳಗಿದ ಪರಮಪೂಜ್ಯ ಲಿಂ. ಗಾನಯೋಗಿ ಪಂಚಾಕ್ಷರ ಗುರುಗಳ ಸಂಸ್ಮರಣಾನುಷ್ಠಾನಕ್ಕೆ ಮೀಸಲಾಗಿ ಮೈದಾಳಿದ ಶ್ರೀ ಗುರು ಪಂಚಾಕ್ಷರ ಸೇವಾ ಸಮಿತಿ (ರಿ) ಗದಗ, ಇದು ಸಂಗೀತ, ಸಾಹಿತ್ಯ, ನಾಟ್ಯ, ಕೀರ್ತನ, ಚಿತ್ರ ಮುಂತಾದ ಕಲೆಗಳಿಗೆ ಹಾಗೂ ಧಾರ್ಮಿಕ, ಸಾಮಾಜಿಕ ರಂಗಗಳಲ್ಲಿ ಸೇವೆ ಸಲ್ಲಿಸುತ್ತಿರುವವರನ್ನು ಗುರುತಿಸಿ, ಸನ್ಮಾನಿಸಿ, ಗೌರವಿಸುವ ಸತ್ ಸಂಕಲ್ಪದಲ್ಲಿ ನಿರತವಾಗಿದೆ.

"ಮಾನ್ಯ ಶ್ರೀಮತಿ ಪ್ರಮೀಳಾಬಾಯಿ ಗುಡೂರು ತಾವು ನಾಟ್ಯ ರಂಗದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವುದನ್ನು ಪರಾಂಬರಿಸಿ ತಮಗೆ 'ಅಭಿನಯ ಕಲಾಧರಿತ್ರಿ' ಪ್ರಶಸ್ತಿಯನ್ನಿತ್ತು ಸನ್ಮಾನಿಸುತ್ತ ಲಲಿತಕಲಾ ತಪಸ್ವಿ ಪೂಜ್ಯ ಪಂಚಾಕ್ಷರ ಗುರುಗಳ ಕೃಪಾ ಸಮೃದ್ಧಿ ತಮಗೊದಗಲಿ, ದೀರ್ಘ ಕಾಲ ತಮ್ಮ ಸೇವೆ ನಾಡಿಗೆ ಒದಗಲಿ ಎಂದು ಹಾರೈಸುತ್ತೇವೆ" ಎನ್ನುವ ಈ ಪ್ರಶಸ್ತಿ ಪತ್ರವನ್ನು ಪಂಡಿತ ಪುಟ್ಟರಾಜ ಗವಾಯಿಗಳು ಆಶೀರ್ವಾದ ರೂಪದಲ್ಲಿ ಪ್ರಮೀಳಮ್ಮನವರಿಗೆ ದಯಪಾಲಿಸಿದರು. ಆ ಸಂದರ್ಭದಲ್ಲಿ ಗದುಗಿನ ತೋಂಟದಾರ್ಯ ಮಠದ ಡಾ॥ ತೋಂಟದ ಸಿದ್ಧಲಿಂಗ ಯತಿಗಳು, ಹುಬ್ಬಳಿಯ ಮೂರು ಸಾವಿರ ಮಠದ ಶ್ರೀ ರಾಜಯೋಗಿಂದ್ರ ಮಹಾಸ್ವಾಮಿಗಳು ಹಾಗೂ ಇತರೆ ಗಣ್ಯರು ಉಪಸ್ಥಿತರಿದ್ದರು.

೬. **ನಾಟಕ ಕಲಾ ಪ್ರಶಸ್ತಿ:–** ಇದು ಪ್ರಮೀಳಮ್ಮನವರ ಪ್ರತಿಭೆಗೆ ಸಂದ ಇನ್ನೊಂದು ಪ್ರಶಸ್ತಿ. ಕೊಪ್ಪಳ ಜಿಲ್ಲೆಯ ಹಿರೇಬಗನಾಳ ಗ್ರಾಮದ 'ಶ್ರೀ ಗವಿಸಿದ್ದೇಶ್ವರ ನಾಟ್ಯ

ಸಂಘ'ದವರು 'ಶ್ರೀ ಗವಿಸಿದ್ದೇಶ್ವರ ಮಹಾತ್ಮೆ' ಎಂಬ ನಾಟಕವನ್ನು ಪ್ರದರ್ಶಿಸಿದರು. ಆ ನಾಟಕದಲ್ಲಿ ಪ್ರಮೀಳಮ್ಮ 'ಗುರುಲಿಂಗಮ್ಮ'ನ ಪಾತ್ರವನ್ನು ಅತ್ಯುತ್ತಮವಾಗಿ ನಿರ್ವಹಿಸಿದರು. ಅದಕ್ಕಾಗಿ ಆ ಸಂಘದವರು ಶ್ರೀ. ಮ.ನಿ.ಪ್ರ. ಶಿವಶಾಂತವೀರ ಸ್ವಾಮಿಗಳು, ಶ್ರೀ.ಮ.ನಿ.ಪ್ರ. ಗವಿಸಿದ್ದೇಶ್ವರ ಮಹಾಸ್ವಾಮಿಗಳು ಹಾಗೂ ಶ್ರೀ ಶಿವಶಾಂತವೀರ ಶರಣರು ಇವರ ಸನ್ನಿಧಿಯಲ್ಲಿ ಪ್ರಮೀಳಮ್ಮನವರಿಗೆ 'ನಾಟಕ ಕಲಾ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದರು.

೭. **ಕಲಾರತ್ನ ಪ್ರಶಸ್ತಿ:–** ಕರ್ನಾಟಕ ಪ್ರತಿಭಾವರ್ಧಕ ಅಕಾಡೆಮಿ ಹಾಗೂ ಬೆಳ್ಳಿಚುಕ್ಕಿ ಅಪೂರ್ವ ಕಲಾ ಸಂಸ್ಥೆ ಇವುಗಳ ಸಂಯುಕ್ತಾಶ್ರಯದಲ್ಲಿ ಜರುಗಿದ ೫೨ನೆಯ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

"ಶ್ರೀಮತಿ ಪ್ರಮೀಳಮ್ಮ ಗುಡೂರು ಅವರು ರಂಗಭೂಮಿ ಕ್ಷೇತ್ರದಲ್ಲಿ ಸಲ್ಲಿಸಿದ ಅಪ್ರತಿಮ ಸಾಧನೆಗೆ ಹಾಗೂ ಅವರ ಜೀವಿತಾವಧಿಯ ಅಮೂಲ್ಯ ಕೊಡುಗೆಗಾಗಿ ರಾಜ್ಯ ಮಟ್ಟದ 'ಕಲಾರತ್ನ–೨೦೦೭' ಪ್ರಶಸ್ತಿ ಪುರಸ್ಕಾರ"

ಈ ಪ್ರಶಸ್ತಿಯನ್ನು ಪ್ರಧಾನ ಮಾಡುವ ಸಮಾರಂಭದ ದಿವ್ಯ ಸಾನಿಧ್ಯವನ್ನು ಶ್ರೀ ಕೊಳದಮಠ ಮಹಾಸಂಸ್ಥಾನದ ಪರಮ ಪೂಜ್ಯ ಶಿವಾನುಭವ ಚರಮೂರ್ತಿಗಳಾದ ಶ್ರೀ. ಮ.ನಿ.ಪ್ರ. ಡಾ॥ ಶಾಂತವೀರ ಮಹಾಸ್ವಾಮಿಜಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕಾಂಗ್ರೆಸ್‌ನ ಹಿರಿಯ ಮುಖಂಡರಾದ ಸನ್ಮಾನ್ಯ ಶ್ರೀ ಹಾರ್ನಳ್ಳಿ ರಾಮಸ್ವಾಮಿ, ಕರ್ನಾಟಕ ಸರ್ಕಾರದ ಮಾಜಿ ಸಚಿವರುಗಳಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ, ಶ್ರೀಮತಿ ರಾಣಿ ಸತೀಶ್ ಮೊದಲಾದ ಗಣ್ಯರು ಪಾಲ್ಗೊಂಡಿದ್ದರು.

೮. **ರಂಗರತ್ನ ಪ್ರಶಸ್ತಿ:–**ಇದನ್ನು 'ಸಾಂಸ್ಕೃತಿಕ ಭಾರತಿ ಸಂಸ್ಥೆ'ಯವರು ಕೊಡಮಾಡಿದ್ದಾರೆ. ಈ ಸಂಸ್ಥೆಯು ಅರ್ಪಿಸುವ 'ಸಂಕ್ರಾಂತಿ ಉತ್ಸವ–೨೦೦೮ ರ ಅಭಿನಂದನಾ ಸಮಾರಂಭದಲ್ಲಿ ನಟಿ ಪ್ರಮೀಳಮ್ಮ 'ರಂಗರತ್ನ' ಪ್ರಶಸ್ತಿಯನ್ನು ಶ್ರೀ ಕೊಳದಮಠ ಮಹಾಸಂಸ್ಥಾನದ ಪರಮ ಪೂಜ್ಯ ಶಿವಾನುಭಾವ ಚರಮೂರ್ತಿಗಳಾದ ಶ್ರೀ.ಮ.ನಿ.ಪ್ರ.ಡಾ॥ ಶಾಂತವೀರ ಮಹಾಸ್ವಾಮಿಜಿ ಅವರಿಂದ ಸ್ವೀಕರಿಸಿದರು. ಆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸನ್ಮಾನ್ಯ ಶ್ರೀ ಎ. ಕೃಷ್ಣಪ್ಪ, ಶ್ರೀಮತಿ. ಎ. ಪಂಕಜ, ಶ್ರೀ ಎಂ. ಗೋವಿಂದರಾಜು ಮೊದಲಾದವರು ಉಪಸ್ಥಿತರಿದ್ದರು.

ಪ್ರಶಸ್ತಿ ಪತ್ರ ಇಂತಿದೆ. "ಶ್ರೀಮತಿ ಪ್ರಮೀಳಮ್ಮ ಗುಡೂರು ಇವರು ರಂಗಭೂಮಿ ಕ್ಷೇತ್ರದಲ್ಲಿ ಸಲ್ಲಿಸಿದ ಅಪ್ರತಿಮ ಸಾಧನೆಗೆ ಹಾಗೂ ಅವರ ಜೀವಿತಾವಧಿಯ

ಅಮೂಲ್ಯ ಕೊಡುಗೆಗಾಗಿ ರಾಜ್ಯಮಟ್ಟದ 'ರಂಗರತ್ನ ಪ್ರಶಸ್ತಿ–೨೦೦೮ ಪ್ರಶಸ್ತಿ ಪುರಸ್ಕಾರ."

೯. **ಡಾ|| ಗುಬ್ಬಿ ವೀರಣ್ಣ ಪ್ರಶಸ್ತಿ:–** ನಾಟಕ, ರಂಗಭೂಮಿ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ನೀಡುವ ಪ್ರತಿಷ್ಠಿತ ಪ್ರಶಸ್ತಿ ಇದಾಗಿದೆ. ಪ್ರತಿವರ್ಷವೂ ಇದನ್ನು ಕೊಡಲಾಗುತ್ತಿದೆ. ೨೧೧೧ನೇ ಸಾಲಿನ ಗುಬ್ಬಿ ವೀರಣ್ಣ ಪ್ರಶಸ್ತಿಯನ್ನು ಪ್ರಮೀಳಮ್ಮನವರು ಪಡೆದಿದ್ದಾರೆ. ಪ್ರಶಸ್ತಿ ಪತ್ರವು ಈ ಕೆಳಗಿನಂತಿದೆ.

"ವೃತ್ತಿ ರಂಗಭೂಮಿಯಲ್ಲಿ ವೈವಿಧ್ಯಮಯ ಪಾತ್ರಗಳ ಮೂಲಕ ಜನಾನುರಾಗ ಗಳಿಸಿರುವ ಶ್ರೀಮತಿ ಪ್ರಮೀಳಮ್ಮ ಗುಡೂರು ಜನಿಸಿದ್ದು ೧೯೩೭ರಲ್ಲಿ, ೧೯೫೦ ವಸಂತ ಸಾನಾಕೋಡರ 'ವಸಂತ ಕಲಾ ನಾಟ್ಯ ಸಂಘದ ಮುಖಾಂತರ ವೃತ್ತಿ ರಂಗಭೂಮಿಯನ್ನು ಪ್ರವೇಶಿಸಿದ ಪ್ರಮೀಳಮ್ಮ, ಪಡೇಸೂರಿನ ಶ್ರೀ ಸಿದ್ಧಲಿಂಗೇಶ್ವರ ನಾಟ್ಯ ಸಂಘ, ಕಮತಗಿಯ ಶ್ರೀ ಹುಚ್ಚೇಶ್ವರ ನಾಟ್ಯ ಸಂಘಗಳ ನಾಟಕಗಳಲ್ಲಿ ನಟಿಸಿದ್ದಾರೆ. ಎಚ್.ಟಿ. ಮಹಾಂತೇಶ ಶಾಸ್ತ್ರಿಗಳ 'ಏರಿದ ನಂಜು' ನಾಟಕದ 'ಊರ್ಮಿಳಾ' ಪಾತ್ರಕ್ಕೆ 'ಭಾವ ಭಾಗ್ಯಶ್ರೀ' ಪ್ರಶಸ್ತಿ ಪಡೆದುದು ಪ್ರಮೀಳಮ್ಮನವರಲ್ಲಿ ರಂಗಭೂಮಿಯ ನಂಟು ಗಟ್ಟಿಗೊಳ್ಳಲು ಸಹಕಾರಿಯಾಗಿದೆ. ನಂತರ ಶ್ರೀ ಶೈಲ ಮಲ್ಲಿಕಾರ್ಜುನ ನಾಟ್ಯ ಸಂಘದ 'ಸಿಂಧೂರ ಲಕ್ಷ್ಮಣ' ನಾಟಕದಲ್ಲಿನ 'ನರಸವ್ವನ' ಪಾತ್ರ, ಗುಡಗೇರಿ ಕಂಪನಿಯ 'ಹೈಬ್ರಿಡ್ ಹೆಣ್ಣು' ನಾಟಕದ ಸುಮಿತ್ರಾ ದೇಸಾಯಿ ಪಾತ್ರ, 'ಜಹಾಗೀರದಾರ ಜಗಳ' ನಾಟಕದ ಕಾತ್ಯಾಯನಿ ದೇಸಾಯಿ ಪಾತ್ರ ಇವರಿಗೆ ಮತ್ತಷ್ಟು ಹೆಸರು ತಂದುಕೊಟ್ಟವು".

೧೯೮೦ರಲ್ಲಿ ತಂದೆ ತಾಯಿಗಳಿಬ್ಬರನ್ನು ಕಳೆದುಕೊಂಡ ಪ್ರಮೀಳಮ್ಮ, ಮನೆತನದ ಜವಾಬ್ದಾರಿ ಹೊತ್ತು ವೃತ್ತಿನಾಟಕ ಸಂಸ್ಥೆಗಳಿಂದ ಹವ್ಯಾಸಿ ರಂಗಭೂಮಿಯತ್ತ ತೆರಳಿ ಕಂದಗಲ್ಲ ಹನುಮಂತರಾಯರು ರಚಿಸಿದ 'ರಕ್ತರಾತ್ರಿ' ನಾಟಕದಲ್ಲಿ ಅಶ್ವತ್ಥಾಮ ಮತ್ತು ದುರ್ಯೋಧನರ ಪಾತ್ರಗಳನ್ನು ನಿರ್ವಹಿಸುತ್ತಾರೆ. ಈ ನಡುವೆ ಬೀದಿ ನಾಟಕಗಳಲ್ಲೂ ತಮ್ಮ ಪ್ರತಿಭೆಯನ್ನು ದುಡಿಸಿಕೊಂಡಿದ್ದಾರೆ. ಮಳೆನೀರು ಸಂಗ್ರಹಣ ಜಲಜಾಥಾ ಕಾರ್ಯಕ್ರಮದಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಾಮಾನ್ಯ ಜನರಿಗೆ ಮಳೆ ನೀರು ಸಂಗ್ರಹಣೆಯ ಅರಿವು ಮೂಡಿಸುವುದಕ್ಕಾಗಿ ನೂರಾರು ಬೀದಿ ನಾಟಕಗಳನ್ನು ಮಾಡಿದ್ದಾರೆ. ೭೪ರ ಇಳಿವಯಸ್ಸಿನಲ್ಲಿ ಕುಟುಂಬ ನಿರ್ವಹಣೆಗಾಗಿ ವೃತ್ತಿಕಂಪನಿಗಳ ಆಹ್ವಾನವನ್ನು ಸ್ವೀಕರಿಸುತ್ತ 'ತಾಯಿ ಕರುಳು' ನಾಟಕದ ಗೌರಮ್ಮನಾಗಿ, 'ಚನ್ನಪ್ಪ ಚನೆಗೌಡ' ನಾಟಕದ ಈರಮ್ಮನಾಗಿ, 'ಸಿಂಧೂರ ಲಕ್ಷ್ಮಣ' ನಾಟಕದ ನರಸವ್ವಳಾಗಿ ಅಭಿನಯಿಸಿ ಪ್ರೇಕ್ಷಕರ ಅಭಿಮಾನ ಗಳಿಸಿದ್ದಾರೆ.

ಈ ನಡುವೆ ಸಿನಿಮಾ ಮತ್ತು ಕಿರುತೆರೆಗಳಲ್ಲಿ ಅಭಿನಯಿಸುವ ಅವಕಾಶವೂ ಲಭಿಸಿತು. ಇವರು ಗಿರೀಶ ಕಾಸರವಳ್ಳಿಯವರ 'ಗುಲಾಬಿ ಟಾಕೀಸ್' ಚಲನಚಿತ್ರದಲ್ಲಿ ಅಭಿನಯಿಸಿದ್ದು, ವೈಶಾಲಿ ಕಾಸರವಳ್ಳಿಯವರ 'ಮುತ್ತಿನ ತೋರಣ' ಮತ್ತು 'ಮಹಾನವಮಿ' ಧಾರಾವಾಹಿಗಳಲ್ಲಿ ತಮ್ಮ ನೈಜ ಅಭಿನಯವನ್ನು ನೀಡಿ ಕರ್ನಾಟಕದ ಮನೆ ಮಾತಾಗಿದ್ದಾರೆ. ಆದರೆ ಧಾರಾವಾಹಿನಿಯೊಂದರ ಅಭಿನಯಕ್ಕೆ ತೆರಳುವ ಸಂದರ್ಭದಲ್ಲಿ ಪಾರ್ಶ್ವವಾಯುವಿಗೆ ತುತ್ತಾದ ಈ ಕಲಾವಿದೆ, ನಟಿಸುವ ಆಸೆ-ಅನಿವಾರ್ಯತೆಗಳನ್ನು ಪಕ್ಕಕ್ಕಿಟ್ಟು ನಡೆಯಲು-ಮಾತನಾಡಲು ಆಗದ ಪರಿಸ್ಥಿತಿಯಲ್ಲಿ ಮೌನದ ಕಗ್ಗತ್ತಲಲ್ಲಿ ಕುಳಿತುಬಿಟ್ಟಿರುವುದು ಕನ್ನಡ ಸಾಂಸ್ಕೃತಿಕ ಲೋಕಕ್ಕಾದ ಒಂದು ದೊಡ್ಡ ಆಘಾತ.

ಹುಟ್ಟು ಕಲಾವಿದೆ ಶ್ರೀಮತಿ ಪ್ರಮೀಳಮ್ಮ ಗುಡೂರು ಅವರಿಗೆ ೨೦೧೦ನೇ ಸಾಲಿನ 'ಡಾ.ಗುಬ್ಬಿ ವೀರಣ್ಣ ಪ್ರಶಸ್ತಿ'ಯನ್ನು ಕನ್ನಡ ನಾಡಿನ ಜನತೆಯ ಪರವಾಗಿ ನೀಡಿ ಸತ್ಕರಿಸಲು ಕರ್ನಾಟಕ ಸರ್ಕಾರ ಹೆಮ್ಮೆ ಪಡುತ್ತಿದೆ.

ಈ ಪ್ರಶಸ್ತಿಯನ್ನು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ದಿನಾಂಕ ೨೨-೦೨-೨೦೧೨ರಂದು ಪ್ರಮೀಳಮ್ಮನವರಿಗೆ ನೀಡಿ ಗೌರವಿಸಲಾಯಿತು.

## ಸನ್ಮಾನ

ಪ್ರಮೀಳಮ್ಮನವರು ಸುಮಾರು ಆರುವರೆ ದಶಕಗಳ ಕಾಲ ರಂಗಭೂಮಿಗೆ ಸಲ್ಲಿಸಿದ ಅಮೋಘ ಸೇವೆಯನ್ನು ಗುರುತಿಸಿ ನಾಡಿನ ಹಲವಾರು ಸಂಘ-ಸಂಸ್ಥೆಯವರು ಪ್ರಶಸ್ತಿ ಪತ್ರ, ಸನ್ಮಾನ ಪತ್ರ, ಅಭಿನಂದನಾ ಪತ್ರ ಮತ್ತು ಪ್ರಮಾಣ ಪತ್ರಗಳನ್ನು ನೀಡಿ ಸತ್ಕರಿಸಿವೆ.

❖ ರಾಯಚೂರಿನ ಮಿತ್ರಕಲಾ ಮಂಡಳಿಯ ಅಧ್ಯಕ್ಷರಾಗಿದ್ದ ಶ್ರೇಷ್ಠ ಸಾಹಿತಿ ಶಾಂತರಸ ಅವರು ದಿನಾಂಕ ೩೦-೦೮-೧೯೭೪ರಂದು ಪ್ರಮೀಳಮ್ಮನವರ 'ನಾಟ್ಯ, ಶ್ರೇಷ್ಠ ಮಟ್ಟದ ಅಭಿನಯ' ಸೇವೆಯನ್ನು ನೆನೆದು ಸನ್ಮಾನಾರ್ಥವಾಗಿ ಪ್ರಶಸ್ತಿ ಪತ್ರವೊಂದನ್ನು ಪ್ರೀತಿ, ಗೌರವಗಳಿಂದ ಅರ್ಪಿಸಿದ್ದಾರೆ.

❖ ೧೯೯೫ರಲ್ಲಿ ಬೀಳಗಿಯ 'ಕಂದಗಲ್ಲ ಹನುಮಂತರಾಯರ ಸ್ಮಾರಕ ರಂಗ ವೇದಿಕೆ'ಯ ಆಶ್ರಯದಲ್ಲಿ 'ಕಂದಗಲ್ಲ ಹನುಮಂತರಾಯರ ರಾಜ್ಯ ಮಟ್ಟದ ನಾಟಕೋತ್ಸವ'ವು ಬೀಳಗಿಯಲ್ಲಿ ಜರುಗಿತು. ಆ ಸಂದರ್ಭದಲ್ಲಿ ಕನ್ನಡ ರಂಗಭೂಮಿಗೆ ಅಮೋಘ ಸೇವೆ ಸಲ್ಲಿಸಿದ ಪ್ರಯುಕ್ತ ಪ್ರಮೀಳಾಬಾಯಿ ಗುಡೂರು ಅವರನ್ನು ಸತ್ಕರಿಸಿ ಪ್ರಶಸ್ತಿ ಪತ್ರವನ್ನು ನೀಡಲಾಯಿತು.

❖ ದಿನಾಂಕ ೧೮-೦೯-೨೦೦೦ರಿಂದ ೨೪-೯-೨೦೦೦ರವರೆಗೆ ಪಿ.ಬಿ. ಧುತ್ತರಗಿ ಅವರ ನಾಟಕಗಳ 'ಧುತ್ತರಗಿ ರಂಗೋತ್ಸವ' ಇಲಕಲ್ಲಿನ ಸ್ನೇಹ ರಂಗದ ವತಿಯಿಂದ ನಡೆಯಿತು. ಆಗ ನಟಿ ಪ್ರಮೀಳಮ್ಮನವರನ್ನು ಸತ್ಕರಿಸಲಾಯಿತು.

❖ ಕಮತಗಿಯ ಶ್ರೀ ಹುಚ್ಚೇಶ್ವರ ನಾಟ್ಯ ಸಂಘದ ಒಡೆಯರಾದ ಶ್ರೀ ಬಿ. ಆರ್. ಅರಿಷಿಣಗೋಡಿಯವರು ಹಾಗೂ ಹಾವೇರಿಯ ಜನಪ್ರಿಯ ಶಾಸಕರಾದ ಶ್ರೀ ಬಸವರಾಜ ಶಿವಣ್ಣನವರ ಇವರು ಸಹಯೋಗದೊಂದಿಗೆ ನೀಡಿದ ಸನ್ಮಾನ ಪತ್ರವನ್ನು ತಾರೀಖು ೦೪-೦೭-೨೦೦೧ರಂದು ಪಂಡಿತ ಪುಟ್ಟರಾಜ ಗವಾಯಿಗಳು ಕಲಾವಿದೆ ಪ್ರಮೀಳಾಬಾಯಿ ಗುಡೂರು ಅವರಿಗೆ ಆಶೀರ್ವದಿಸಿದರು.

❖ ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ ಹಾರೂಗೇರಿಯ "ರಂಗತರಂಗ ವೇದಿಕೆ'ಯವರು ೨೭-೦೭-೨೦೦೧ರಿಂದ ೦೨-೦೮-೨೦೦೧ರವರೆಗೆ ರಾಜ್ಯಮಟ್ಟದ ಪೌರಾಣಿಕ ನಾಟಕೋತ್ಸವವನ್ನು ಏರ್ಪಡಿಸಿದ್ದರು. ಆದಿಶಕ್ತಿ ರೇಣುಕಾ, ಚಿತ್ರಾಂಗದೆ, ಕುರುಕ್ಷೇತ್ರ, ಜಗಜ್ಯೋತಿ ಬಸವೇಶ್ವರ, ರಕ್ತರಾತ್ರಿ, ಜೈ ಪದ್ಮಾವತಿ, ಅಕ್ಕಮಹಾದೇವಿ ಮೊದಲಾದ ನಾಟಕಗಳನ್ನು ಅಲ್ಲಿ ಪ್ರಯೋಗಿಸಲಾಯಿತು. ಪ್ರಮೀಳಮ್ಮನವರು ನಾಟಕೋತ್ಸವದಲ್ಲಿ ಭಾಗವಹಿಸಿದ್ದರು. ಅದಕ್ಕಾಗಿ 'ರಂಗತರಂಗ ವೇದಿಕೆ'ಯವರು ಅವರಿಗೆ ಸನ್ಮಾನ ಪತ್ರ ನೀಡಿ ಸತ್ಕರಿಸಿದ್ದಾರೆ.

❖ ರಂಗಶಿಲ್ಪಿ ದಿ. ರಾಚಪ್ಪ ಗುರುಶಾಂತಪ್ಪ ಕರನಂದಿ ಅವರ 'ಶಿವ ಕೃಪಾ ನಾಟ್ಯ ಮಂದಿರ'ದ ಸುವರ್ಣ ಮಹೋತ್ಸವ ಹಾಗೂ ಕವಿ, ಕಲಾವಿದರ, ಸಂಘದೊಡೆಯರ ಸನ್ಮಾನ ಸಮಾರಂಭವು ಗುಳೇದಗುಡ್ಡದಲ್ಲಿ ದಿ.೦೫-೦೪-೨೦೦೫ರಂದು ನಡೆಯಿತು. ಆ ಸಂದರ್ಭದಲ್ಲಿ ಪ್ರಮೀಳಮ್ಮ ಗುಡೂರು ಅವರನ್ನು ಸನ್ಮಾನಿಸಲಾಯಿತು.

❖ 'ಕನ್ನಡ ಮತ್ತು ಸಂಸ್ಕೃತಿ ಇಲಾಖೆ' ಬೆಂಗಳೂರು ಇದರ ಆಶ್ರಯದಲ್ಲಿ ಇಲಕಲ್ಲ ನಗರದಲ್ಲಿ 'ವೃತ್ತಿ ರಂಗಭೂಮಿ ಕಲಾವಿದರ ಸಮಾವೇಶ'ವು ದಿನಾಂಕ ೧೯ ಹಾಗೂ ೨೦ ಮಾರ್ಚ್ ೨೦೦೫ರಲ್ಲಿ ಜರುಗಿತು. ಆಗ ಪ್ರಮೀಳಮ್ಮನವರನ್ನು ಗೌರವಿಸಲಾಯಿತು.

❖ 'ಕರ್ನಾಟಕ ನಾಟಕ ಅಕಾಡೆಮಿ'ಯು 'ಗ್ರಾಮ ರಂಗ ಸಂಭ್ರಮ ಆಚರಣೆಯ' ಅಂಗವಾಗಿ ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡದಲ್ಲಿ ೨೦-೦೪-೨೦೦೫ರಿಂದ ೨೪-೦೪-೨೦೦೫ರವರೆಗೆ 'ಪೌರಾಣಿಕ ನಾಟಕೋತ್ಸವ'ವನ್ನು ಹಮ್ಮಿಕೊಂಡಿತ್ತು. ಪ್ರಮೀಳಾ ಅವರು ಆ ನಾಟಕೋತ್ಸವದಲ್ಲಿ ಪಾಲ್ಗೊಂಡು ಅಭಿನಯಿಸಿದ್ದರು. ಅದಕ್ಕಾಗಿ ನಾಟಕ ಅಕಾಡೆಮಿಯು ಅಭಿನಂದನಾ ಪತ್ರವನ್ನು ನೀಡಿ ಅವರನ್ನು ಅಭಿನಂದಿಸಿತು.

❖ ಬಾಗಲಕೋಟೆ ಜಿಲ್ಲಾಡಳಿತ, ನಗರಾಭಿವೃದ್ಧಿ ಕೋಶ, ನಿರ್ಮಿತಿ ಕೇಂದ್ರ

ಮತ್ತು ನಿರಂತರ ಫೌಂಡೇಶನ್ ಮೈಸೂರು ಇವರ ಸಹಯೋಗದಲ್ಲಿ ಬಾಗಲಕೋಟೆಯಲ್ಲಿ ದಿ ೧೬-೦೫-೨೦೦೫ರಿಂದ ೨೭-೦೬-೨೦೦೫ರವರೆಗೆ 'ಮಳೆನೀರು ಸಂಗ್ರಹಣೆ ಮತ್ತು ಸದ್ಬಳಕೆ' ಕುರಿತ ಜಲಜಾಥವೊಂದನ್ನು ಆಯೋಜಿಸಲಾಗಿತ್ತು. ಜಲಜಾಗೃತಿ ಅಭಿಯಾನದಲ್ಲಿ ಪ್ರಮೀಳಮ್ಮನವರು ಕಲಾವಿದರಾಗಿ ಜಲಯೋಧರಾಗಿ ಕಾರ್ಯನಿರ್ವಹಿಸಿ, ಜಿಲ್ಲೆಯ ಮಳೆನೀರು ಸಂಗ್ರಹಣೆ ಆಂದೋಲನದಲ್ಲಿ ಪ್ರಶಂಸನೀಯವಾದ ಕೆಲಸ ಮಾಡಿದ್ದಾರೆ. ಆ ನಿಮಿತ್ಯ ಬಾಗಲಕೋಟೆ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಕೆ.ಎನ್. ಪ್ರಭಾಕರ ಅವರು ಪ್ರಮಾಣ ಪತ್ರವೊಂದನ್ನು ನೀಡಿ ಗೌರವಿಸಿದ್ದು ಸ್ಮರಣೀಯ.

❖ 'ವಿಶ್ವಜ್ಯೋತಿ ಶ್ರೀ ಪಂಚಾಕ್ಷರ ನಾಟ್ಯ ಸಂಘ (ಗದಗ) ಜೇವರ್ಗಿ ಕಂಪನಿಯು ಇಲಕಲ್ಲ ಪಟ್ಟಣದಲ್ಲಿ 'ಕುಂಟಕೋಣ ಮೂಕಜಾಣ' ಎಂಬ ಸಾಮಾಜಿಕ ನಾಟಕವನ್ನು ಪ್ರದರ್ಶಿಸಿತು. ನಾಟಕದ ೫೦ನೇ ಪ್ರಯೋಗದ ಸುವರ್ಣ ಮಹೋತ್ಸವದ ಆಚರಣೆಯ ದಿನವಾದ ೧೨-೦೭-೨೦೦೭ರಂದು ಮಂಡಳಿಯ ಮಾಲೀಕರಾದ ಶ್ರೀ ರಾಜಣ್ಣ ಜೇವರ್ಗಿ ಅವರು ಪ್ರಮೀಳಮ್ಮನವರನ್ನು ಗೌರವಪೂರಕವಾಗಿ ಸತ್ಕರಿಸಿದರು. ಆಗ ಪವಿತ್ರಾ ಲೋಕೇಶ, ಜಯಂತಿ ಮೊದಲಾದ ಚಿತ್ರರಂಗದ ಗಣ್ಯರು ಉಪಸ್ಥಿತರಿದ್ದರು.

❖ ಬಿ.ಬಿ.ಎಂ.ಪಿ. ಭಾರತ ಯಾತ್ರಾ ಕೇಂದ್ರ ಮತ್ತು ಮಹಾರಾಣಿ ಕಾಲೇಜು ಜಂಟಿಯಾಗಿ ಬೆಂಗಳೂರು ನಗರದಲ್ಲಿ ಹಮ್ಮಿಕೊಂಡ 'ವಿಶ್ವ ಮಹಿಳಾ ದಿನಾಚರಣೆ' ಕಾರ್ಯಕ್ರಮದಲ್ಲಿ ಪ್ರಮೀಳಾ ಗುಡೂರು ಅವರನ್ನು ಸನ್ಮಾನಿಸಲಾಯಿತು. ಆ ಸಂದರ್ಭದಲ್ಲಿ ಕಾಲೇಜಿನ ಪ್ರಾಚಾರ್ಯೆಯಾದ ಭಾಗ್ಯಲಕ್ಷ್ಮಿ, ನಾಟಕಕಾರ ಶಿವಪ್ರಕಾಶ, ಮಾಜಿ ಸಚಿವೆ ರಾಣಿ ಸತೀಶ, ಕೆ.ವಿ. ನಾಗರಾಜ ಮೂರ್ತಿ ಮೊದಲಾದವರು ಪಾಲ್ಗೊಂಡಿದ್ದರು.

❖ ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿ ಬೆಂಗಳೂರು' ಇವರು ೧೯-೦೫-೨೦೦೮ರಂದು ಬೆಂಗಳೂರಿನಲ್ಲಿ 'ಲೋಕೇಶ ನೆನಪು' ಎನ್ನುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಆಗ ನಟಿ ಪ್ರಮೀಳಮ್ಮ ಅವರನ್ನು ಸನ್ಮಾನಿಸಿದರು.

❖ 'ಶ್ರೀ ಸಂಗಮೇಶ್ವರ ನಾಟ್ಯ ಸಂಘ ಗುಡಗೇರಿ' ಇದರ ೪೫ನೆಯ ವಾರ್ಷಿಕೋತ್ಸವ ಆಚರಣೆಯ ಕಾರ್ಯಕ್ರಮ ಕೂಡಲ ಸಂಗಮದಲ್ಲಿ ೧೭ ನವ್ಹೆಂಬರ್ ೨೦೦೮ರಂದು ಜರುಗಿತು. ಅಂದು ರಂಗಭೂಮಿಯಲ್ಲಿ ಸೇವೆ ಸಲ್ಲಿಸಿದ ಕಲಾವಿದ-ಕಲಾವಿದೆಯರನ್ನು ಸನ್ಮಾನಿಸಿದರು. ಪ್ರಮೀಳಮ್ಮ ಸಹ ಅಂದು ಸನ್ಮಾನ ಸ್ವೀಕರಿಸಿದರು. ಆಗ ಡಾ. ರಾಜಕುಮಾರ ಅವರ ಧರ್ಮಪತ್ನಿ ಪಾರ್ವತಮ್ಮ ರಾಜಕುಮಾರ ಅವರು ಹಾಗೂ ಚಿತ್ರರಂಗದ, ರಂಗಭೂಮಿಯ ಶ್ರೇಷ್ಠ ನಟ-ನಟಿಯರು ಹಾಜರಿದ್ದರು.

❖ ಕನ್ನಡ ವೃತ್ತಿರಂಗದ ಶ್ರೇಷ್ಠ ಕಂಪನಿಗಳಲ್ಲಿ ಒಂದಾದ 'ಕೆ.ಬಿ.ಆರ್. ಡ್ರಾಮಾ ಕಂಪನಿ'ಯ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಪ್ರಮೀಳಮ್ಮನವರನ್ನು ಸನ್ಮಾನಿಸಿ, ಸೇವಾ ಸನ್ಮಾನ ಪತ್ರವನ್ನು ಸಮರ್ಪಿಸಲಾಗಿದೆ. ಆ ಪತ್ರ ಇಂತಿದೆ.

"ಕನ್ನಡ ವೃತ್ತಿ ರಂಗಭೂಮಿಯ ಸೇವೆಯಲ್ಲಿ ೮೦ ವರ್ಷಗಳ ಸಾರ್ಥಕ ಸೇವೆಯನ್ನು ಪೂರ್ಣಗೊಳಿಸಿದ ಕೆ.ಬಿ.ಆರ್. ಡ್ರಾಮಾ ಕಂಪನಿಯ ಅಮೃತ ಮಹೋತ್ಸವವನ್ನು ದಿನಾಂಕ ೨೮ ಆಗಸ್ಟ್ ೨೦೦೯ರಂದು ಬೆಂಗಳೂರಿನ ಶ್ರೀ ಶಿವರಾತ್ರೀಶ್ವರ ಕೇಂದ್ರದಲ್ಲಿ ಪರಮಪೂಜ್ಯ ಶ್ರೀ ಶ್ರೀ ಶಿವರಾತ್ರಿ ದೇಶಿ ಕೇಂದ್ರ ಮಹಾಸ್ವಾಮಿಗಳು ಮತ್ತು ಪರಮಪೂಜ್ಯ ಶ್ರೀ ಬಸವ ಪ್ರಭು ಮೃತ್ಯುಂಜಯ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ಭಾರತದ ಮಾಜಿ ರಾಷ್ಟ್ರಪತಿ ಭಾರತರತ್ನ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಉದ್ಘಾಟಿಸಿದರು. ಕೆ.ಬಿ.ಆರ್. ಡ್ರಾಮಾ ಕಂಪನಿಯಲ್ಲಿ ಅಭಿನಯವೂ ಸೇರಿದಂತೆ, ಕಂಪನಿಯ ಸುಖ–ದು:ಖಗಳಲ್ಲಿ ಪಾಲ್ಗೊಂಡ ಕಲಾವಿದರಾದ ಸನ್ಮಾನ್ಯ ಶ್ರೀ ಶ್ರೀಮತಿ ಪ್ರಮೀಳಮ್ಮ ಗುಡೂರು ಅವರನ್ನು ದಿನಾಂಕ ೦೩, ಅಕ್ಟೋಬರ್ ೨೦೦೯ರಂದು ನಡೆದ 'ಅಮೃತ ಮಹೋತ್ಸವ' ಕಾರ್ಯಕ್ರಮದಲ್ಲಿ ಪದ್ಮಶ್ರೀ ಚಿಂದೋಡಿ ಲೀಲಾ ಅವರು ಪ್ರಮೀಳಮ್ಮನವರನ್ನು ಗೌರವಿಸಿ ನೀಡಿದ ಸನ್ಮಾನ ಪತ್ರ.

ಅಲ್ಲದೆ ಇನ್ನೂ ಹತ್ತು ಹಲವಾರು ಕಡೆಗಳಲ್ಲಿ ಸನ್ಮಾನಗೊಂಡಿದ್ದಾರೆ.

## ಪ್ರಶಂಸೆ

ತಮ್ಮ ಅದ್ವಿತೀಯ ಪ್ರತಿಭೆ, ಅಮೋಘ ಅಭಿನಯದಿಂದ ರಂಗಭೂಮಿಯಲ್ಲಿ ಮಿಂಚಿ, ಆ ಮೂಲಕ ರಂಗಭೂಮಿಯನ್ನು ಬೆಳಗಿದ ಪ್ರಮೀಳಮ್ಮನವರ ಸಾಧನೆ, ಕೊಡುಗೆ, ನಟನೆ ಇವುಗಳನ್ನು ಸಾಹಿತಿಗಳು, ರಂಗವಿದ್ವಾಂಸರು, ಕಂಪನಿಯ ಮಾಲೀಕರು, ಕಲಾವಿದರು, ಲೇಖಕರು, ಪತ್ರಿಕಾ ಮಾಧ್ಯಮದವರು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ. ಅವರೆಲ್ಲರೂ ವ್ಯಕ್ತಪಡಿಸಿದ ಪ್ರಶಂಸೆಯ ಅಭಿಪ್ರಾಯಗಳನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ.

● ಕಮತಗಿಯ ಬಿ. ಆರ್. ಅರಿಷಿಣಗೋಡಿಯವರ 'ಶ್ರೀ ಹುಚ್ಚೇಶ್ವರ ನಾಟ್ಯ ಸಂಘ'ವು ಹುಬ್ಬಳ್ಳಿಯಲ್ಲಿ 'ಬಸ್ ಕಂಡೆಕ್ಟರ್' ನಾಟಕವನ್ನು ಪ್ರದರ್ಶಿಸಿತು. ಕನ್ನಡದ ವರಕವಿ ದ.ರಾ. ಬೇಂದ್ರೆ ಅವರು ನಾಟಕವನ್ನು ನೋಡಿ, ಅದರಲ್ಲಿ ಉಮಾ (ಪ್ರಮೀಳಮ್ಮ)ಳ ಪಾತ್ರವನ್ನು ಮೆಚ್ಚಿಕೊಂಡು, ನಾಟಕದ ಕೊನೆಯಲ್ಲಿ ಮಾತನಾಡುತ್ತ "ಉಮಾಳ ಪಾತ್ರದಲ್ಲಿ ಕಲಾವಿದೆ ತುಂಬ ಆಕರ್ಷಿಸುತ್ತಾಳೆ. ಉಮಾ ಶ್ರೀಮಂತಿಕೆಯ ಅಹಂಕಾರ, ವಿದ್ಯಾಹಂಕಾರ, ಯೌವ್ವನ ಅಹಂಕಾರಗಳಲ್ಲಿ ಮೆರೆಯುತ್ತ ಕೊನೆಗೆ

ಜೀವನದಲ್ಲಿ ಸೋಲೊಪ್ಪಿಕೊಂಡು ಪಶ್ಚಾತ್ತಾಪಪಡುತ್ತಾಳೆ. ಈ ಪಾತ್ರದ ಅಭಿನಯ ಮೆಚ್ಚುವಂತಹದು" ಎಂದು ಹೊಗಳಿದ್ದಾರೆ.

● ಕನ್ನಡದ ಖ್ಯಾತ ಹಾಸ್ಯ ಸಾಹಿತಿ ಬೀಚಿ ಅವರು ಒಮ್ಮೆ ಪ್ರಮೀಳಮ್ಮನವರ 'ವಿಲನ್ ಪಾತ್ರ' ನೋಡಿ ವೇದಿಕೆಯ ಮೇಲೆ ಬಂದು 'ಇಂಥ ಕಲಾವಿದೆಯರು ಇಂದು ಸಿಗುವುದು ಅಪರೂಪ' ಎಂದು ಅತಿಯಾಗಿ ಪ್ರಶಂಸಿದರಂತೆ.

● 'ಸತಿ–ಪತಿ' ನಾಟಕದ ಸುಶೀಲಾಳ ಪಾತ್ರ ನೋಡಿ ಹುಬ್ಬಳ್ಳಿಯ ಪ್ರಸಿದ್ಧ ವೈದ್ಯರಾದ ಡಾ.ಆರ್.ವ್ಹಿ.ಪಾಟೀಲರು "ಈ ಕಲಾವಿದೆಯ ಪಾತ್ರ ನಾನು ಶಸ್ತ್ರ ಚಿಕಿತ್ಸೆ ಮಾಡುವಾಗ ಎಷ್ಟು ಲಕ್ಷ್ಯ ಕೊಡುತ್ತೇನೋ ಅಷ್ಟೇ ಗಮನಕೊಟ್ಟು ನೋಡಿದ್ದೇನೆ. ಅವಳ ಅಭಿನಯ ಭಾರೀ ಆನಂದವನ್ನು ಉಂಟು ಮಾಡಿದೆ" ಎಂದು ಹೇಳಿದ್ದಾರೆ.

● ೧೯೬೬ರಲ್ಲಿ ಕಮತಗಿ ಕಂಪನಿ ಬಿಜಾಪೂರದಲ್ಲಿ ವಾಸ್ತವ್ಯ ಮಾಡಿದ್ದಾಗ ಎಚ್.ಟಿ. ಮಹಾಂತೇಶಶಾಸ್ತ್ರಿಗಳ 'ಏರಿದ ನಂಜು' ನಾಟಕವನ್ನು ಪ್ರಯೋಗಿಸಿತು. ನಾಟಕ ನಿರ್ದೇಶನ ಮಾಡಿದ್ದ ಮಹಾತೇಶಶಾಸ್ತ್ರಿಗಳು ಪ್ರಮೀಳಾ ಅವರ ಊರ್ಮಿಳಾ ಪಾತ್ರವನ್ನು ಕಂಡು ಸಂತಸಪಟ್ಟು "ಈ ಭಾವನೆಗಳನ್ನು ಇಲ್ಲಿಯವರೆಗೆ ಎಲ್ಲಿ ಬಚ್ಚಿಟ್ಟಿದೆ. ಇಂದು ನಿನ್ನಲ್ಲಿರುವ ಎಲ್ಲ ಭಾವನೆಗಳನ್ನು ಹೊರಹಾಕಿ ಅತ್ಯದ್ಭುತವಾಗಿ ಅಭಿನಯಿಸಿರುವೆ" ಎಂದು ಪ್ರಶಂಸೆ ವ್ಯಕ್ತಪಡಿಸಿ 'ಭಾವ ಭಾಗ್ಯಶ್ರೀ ಎಂಬ ಬಿರುದನ್ನು ನೀಡಿದರು.

● ಪಿ.ಬಿ. ಧುತ್ತರಗಿ ಅವರ 'ಸಿಂಧೂರ ಲಕ್ಷ್ಮಣ' ನಾಟಕದ ಪ್ರಮೀಳಮ್ಮನವರ 'ನರಸವ್ವ' ಪಾತ್ರದ ಜನಪ್ರಿಯತೆ, ಹೆಸರು ಕೇಳಿ ಧುತ್ತರಗಿಯವರು ಗದಗ ನಗರಕ್ಕೆ ಬಂದು "ಪ್ರಮೀಳಮ್ಮ ನೀನು ಸರೋಜಾಳಿಗಿಂತ ಚೆನ್ನಾಗಿ ಪಾತ್ರ ಮಾಡುತ್ತಿರುವಂತೆ. ಈ ವಿಷಯ ನನಗೆ ಮಾತ್ರವಲ್ಲ, ಎಲ್ಲರ ಕಿವಿಗೆ ಬಿದ್ದಿದೆ. ಅದಕ್ಕಾಗಿ ನಾನು ಇಂದು ನಿನ್ನ ಪಾರ್ಟನ್ನು ನೋಡುತ್ತೇನೆ ಎಂದು ಹೇಳಿ, ಅವತ್ತು ಪ್ರಮೀಳಾಳ ಪಾತ್ರ ನೋಡಿ "ನಿನ್ನ ಧ್ವನಿಯಲ್ಲಿ ಒಂದು ಜೀವ ಇದೆ. ಅದರಿಂದಾಗಿ ನಿನ್ನ ಪಾತ್ರಗಳು ಯಶಸ್ವಿಯಾಗುತ್ತವೆ" ಎಂದು ಅಭಿಮಾನದಿಂದ ಹೊಗಳಿದರು.

● ಪ್ರಮೀಳಮ್ಮ ಸೂಡಿಯ ಬಸವಂತಪ್ಪ ಪಟ್ಟಣಶೆಟ್ಟಿ ಅವರ 'ಶ್ರೀ ಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ'ದಲ್ಲಿ ನಟಿಸುತ್ತಿದ್ದ ಸಂದರ್ಭವದು. ಕಂಪನಿಗೆ ಸೇರಿದ ಮೊದಲಲ್ಲಿ ಅವರಿಗೆ ಪಾತ್ರಗಳು ಇರಲಿಲ್ಲ. ಮಂಡಳಿ ಹುಬ್ಬಳ್ಳಿಯಲ್ಲಿ ಇದ್ದಾಗ ಗುಡಿಗೇರಿ ಎನ್. ಬಸವರಾಜರು ಅಲ್ಲಿಗೆ ಆಕಸ್ಮಿಕವಾಗಿ ಬಂದಿದ್ದರು. ಪಾತ್ರಗಳು ಸಿಗದೆ ಸುಮ್ಮನೆ ಇದ್ದ ಪ್ರಮೀಳಾ ಅವರ ದು:ಸ್ಥಿತಿಯನ್ನು ಕಂಡು ಆಶ್ಚರ್ಯದಿಂದ ಬಸವರಾಜರು 'ಶೆಟ್ಟರೆ ಇಂಥ ಪ್ರಸಿದ್ಧ ಕಲಾವಿದೆಗೆ ಪಾತ್ರವಿಲ್ಲ ಎಂದರೆ ಹೇಗೆ? ಇವಳು ಈ ನಾಡು ಮೆಚ್ಚಿದ

ಕಲಾವಿದೆ. ಅವಳಿಗೆ ನಟಿಸಲು ಅವಕಾಶ ಕೊಡದೆ ಸುಮ್ಮನೆ ಕೂರಿಸಿ ಅವಳ ಪ್ರತಿಭೆಯನ್ನು ಕೊಲ್ಲಬೇಡಿ, ಅವಳನ್ನು ಬಿಟ್ಟು ಬಿಡಿ, ಬೇರೆ ಕಂಪನಿಗೆ ಹೋಗುತ್ತಾಳೆ' ಎಂದು ಪ್ರಮೀಳಮ್ಮನವರ ಪ್ರತಿಭೆಯನ್ನು ಮುಕ್ತವಾಗಿ ಶ್ಲಾಘಿಸಿದರು.

- 'ಕರ್ನಾಟಕ ನಾಟಕ ಅಕಾಡೆಮಿ'ಯ ಈಗಿನ ಅಧ್ಯಕ್ಷರಾದ ಎಲ್.ಬಿ. ಶೇಖಮಾಸ್ತರರು ಪ್ರಮೀಳಾ ಅವರು ಅಭಿನಯಿಸಿದ 'ಮಲಮಗಳು' ನಾಟಕದ ಕಾವೇರಿ ಪಾತ್ರವನ್ನು ಕಂಡು ಮೆಚ್ಚಿಕೊಂಡು ಇಪ್ಪತ್ತು ರೂಪಾಯಿಯನ್ನು ಪ್ರೋತ್ಸಾಹ ರೂಪದಲ್ಲಿ ಆಹೇರಿ ಮಾಡಿ 'ಪಮ್ಮಕ್ಕ ವಯಸ್ಸಿನಾಗ ನನ್ನ ಕಣ್ಣಿಗೆ ಬೀಳದೆ, ಈ ಇಳಿ ವಯಸ್ಸಿನಲ್ಲಿ ಕಣ್ಣಿಗೆ ಬಿದ್ದೆಯಲ್ಲಾ . . . ಎಂದು ಅಭಿಮಾನದಿಂದ ಹೊಗಳಿದರು.

- ೧೯-೦೫-೨೦೦೮ರಂದು ಬೆಂಗಳೂರಿನಲ್ಲಿ 'ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿ ಬೆಂಗಳೂರು' ಇವರ ವತಿಯಿಂದ ಲೋಕೇಶ ನೆನಪು ಎಂಬ ಕಾರ್ಯಕ್ರಮ ಜರುಗಿತು. ಆ ಸಂದರ್ಭದಲ್ಲಿ ಶ್ರೀಮತಿ ಗಿರಿಜಾ ಲೋಕೇಶ ಅವರು ಪ್ರಮೀಳಮ್ಮನವರನ್ನು ಆಹ್ವಾನಿಸಿದ್ದರು. ಆಗ ಪ್ರಮೀಳಮ್ಮ ಹಾಗೂ ಜಯರಾಜ ಹೊಸಮನಿ ಇರ್ವರು, 'ಸಿಂಧೂರ ಲಕ್ಷ್ಮಣ' ನಾಟಕದ ಸನ್ನಿವೇಶವೊಂದನ್ನು ಮಾಡಿದರು. ಪ್ರಮೀಳಮ್ಮ ನರಸವ್ವಳಾಗಿ, ಜಯರಾಜ ವೀರಯ್ಯನ ಪಾತ್ರವನ್ನು ಅಮೋಘವಾಗಿ ನಟಿಸಿದರು. ಅವರ ಹೃದಯಸ್ಪರ್ಶಿ ಅಭಿನಯವನ್ನು ನೋಡಿ ಮೆಚ್ಚಿಕೊಂಡ ಶ್ರೀಮತಿ ಗಿರಿಜಾ ಲೋಕೇಶರು ಅವರನ್ನು ಅಭಿನಂದಿಸಿದರು.

- ಪ್ರಮೀಳಮ್ಮನವರ ಪುರುಷ ಪಾತ್ರದ ನಟನೆಯನ್ನು ನೋಡಿ, ಅವುಗಳ ಯಶಸ್ಸನ್ನು ಕಂಡು ಸಹಕಲಾವಿದರಾದ ಕೀರ್ತೆಪ್ಪ ಕೊಪ್ಪರದ, ಅಬ್ಬಾಸ ಅಲಿ ಅಳವಂಡಿ, ಗುಡುಸಾಬ ಇಲಕಲ್ಲ, ಮಹಾಂತೇಶ ಮುಂತಾದವರು 'ಏನು? ನೀನು ಪುರುಷ ಪಾತ್ರ ಮಾಡುವುದರಿಂದಲೂ ಹೆಸರಾಗಿರುವಿ, ಏನು ನಿನ್ನ ಡಿಮ್ಯಾಂಡ್' ಎಂದು ಹೊಗಳುತ್ತಿದ್ದರಂತೆ.

- ಯಲ್ಲಪ್ಪ ಎನ್ನುವರು ಅರಿಷಿಣಗೋಡಿಯವರ ಕಂಪನಿ ಕಲಾವಿದರು. ಸ್ವಂತ ಕಂಪನಿ ಸ್ಥಾಪಿಸಿ ರಂಗಸೇವೆ ಕೈಗೊಂಡವರು. ತಮ್ಮ ಮಂಡಳಿಯ ರಾಜಮ್ಮ ದಾವಣಗೆರೆ, ಪಾಪಮ್ಮ ಮೊದಲಾದವರನ್ನು ಒಮ್ಮೆ ಹುಬ್ಬಳ್ಳಿಗೆ ಕರೆದುಕೊಂಡು ಬಂದು ಪ್ರಮೀಳಮ್ಮನವರ ಅಭಿನಯವನ್ನು ತೋರಿಸಿ 'ಅವರು ಹೆಜ್ಜೆ ಕಿತ್ತು ಇಡುವುದನ್ನು ನೋಡಿ, ಅವರಂತೆ ನಟಿಸಿ ಅವರ ಹಾಗೆಯೇ ಬೆಳೆಯಿರಿ' ಎಂದು ನಿರ್ದೇಶಿಸುವ ಮೂಲಕ ಪ್ರಮೀಳಮ್ಮನವರ ನಟನಾ ಸಾಮರ್ಥ್ಯವನ್ನು ಸ್ತುತಿಸಿದರು.

- "ಪ್ರಮೀಳಮ್ಮ ಅವರು ಹತ್ತು-ಹದಿನೈದು ನಾಟಕ ಸಂಘಗಳಲ್ಲಿ ಸೇವೆ ಸಲ್ಲಿಸಿ ಜನರ ಮೆಚ್ಚಿಗೆ ಪಡೆದು ಹೆಸರಾಂತ ಕಲಾವಿದೆ ಎಂದು ಪ್ರಶಸ್ತಿಗಳನ್ನು ಪಡೆದಿದ್ದಾರೆ.

ನಮ್ಮ ಸಂಘದಲ್ಲಿಯೂ ಕೂಡ ಕೆಲವು ಕಾಲ ಸೇವೆ ಸಲ್ಲಿಸಿದ್ದಾರೆ" ಎಂದು ಪದ್ಮಶ್ರೀ ಪ್ರಶಸ್ತಿ ವಿಜೇತ ನಟಿ ಚಿಂದೋಡಿ ಲೀಲಾ ಅವರು ಹೇಳಿದ್ದನ್ನು ಇಲ್ಲಿ ಸ್ಮರಿಸುವುದು ಸೂಕ್ತ.

● "She is perfect senior artist. She has been acting in historical, religious and social drams from her teenage if self for the last 45 years" ಎಂದು ಗುಡಗೇರಿ ಕಂಪನಿಯ ಮಾಲೀಕರಾದ ಎನ್. ಬಸವರಾಜರು ಹೇಳಿದ್ದಾರೆ.

● "ಇವರು ನಮ್ಮ ಸಂಘದಲ್ಲಿ ೧೯೬೧ರಿಂದ ೧೯೮೦-೮೧ರವರೆಗೆ ಪಾತ್ರ ಮಾಡಿದ್ದಾರೆ. ಹಾಸ್ಯ, ಹೀರೋಯಿನ್ (ನಾಯಕಿ) ಖಳನಾಯಕಿ ಪಾತ್ರಗಳಲ್ಲಿ ಅಭಿನಯಿಸಿ ಕಲಾಪ್ರೇಮಿಗಳ ಮೆಚ್ಚುಗೆ ಗಳಿಸಿದ್ದಾರೆ" ಎಂಬುದು ಬಿ.ಆರ್. ಅರಿಷಿಣಗೋಡಿ ಅವರ ಅಭಿಪ್ರಾಯ.

● "ಪ್ರಮೀಳಮ್ಮನವರು ರಂಗಭೂಮಿಗೆ ಮನ್ನಣೆ ಕೊಟ್ಟವರು. ಅದಕ್ಕಾಗಿಯೇ ಅಭಿನಯಕ್ಕೆ ಪೂರ್ವದಲ್ಲಿ ಬಣ್ಣ ಹಚ್ಚಿಕೊಳ್ಳುವಾಗಲೆ ಭಕ್ತಿ ಭಾವದಿಂದ ರಂಗಭೂಮಿಗೆ ನಮಸ್ಕರಿಸುತ್ತಿದ್ದರು. ಅವರು ಪಾತ್ರವನ್ನು ಅನುಭವಿಸಿ ಮಾಡುತ್ತಿದ್ದರು. ಸಂಭಾಷಣೆಯನ್ನು ಸ್ಪುಟವಾಗಿ ಹೇಳುವ ಕಲೆ ಅವರದು" ಎಂದು ಹುನಗುಂದ ತಾಲೂಕಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಕಲಾವಿದ ಮಹಾಂತೇಶ ಗಜೇಂದ್ರಗಡ ಅವರು ತಮ್ಮ ಮನದಾಳದ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ.

● ರಂಗ ಲೇಖಕರಾದ ಶ್ರೀ ಗವೀಶ ಹಿರೇಮಠರು "ಪ್ರಮೀಳಾ ಗುಡೂರು ಕನ್ನಡ ರಂಗಭೂಮಿಯಲ್ಲಿ ಒಂದು ವಿಶಿಷ್ಟ ಹೆಸರು. ಕೆಲವೇ ಮಿನುಗು ನಕ್ಷತ್ರಗಳಲ್ಲಿ ಈ ತಾರೆಯೊಬ್ಬರು. ತಮ್ಮ ಅಭಿನಯ ಕಲೆಯಿಂದ, ಪ್ರತಿಭೆಯಿಂದ, ಅನುಭವದಿಂದ ನಾಡಿನ ವೃತ್ತಿಕಂಪನಿಗಳನ್ನು ಬೆಳಗಿದವರು. ವಿಶೇಷವಾಗಿ ಬಿ. ಆರ್. ಅರಿಷಿಣಗೋಡಿಯವರ ಕಂಪನಿ ಈ ಕಲಾವಿದೆಯ ಸೇವೆಯಿಂದ, ಅಭಿನಯ ಕಲೆಯಿಂದ ಬಹಳಷ್ಟು ಬೆಳಕು ಕಂಡಿತು. ತಮ್ಮ ಬದುಕಿನುದ್ದಕ್ಕೂ ನಂಬಿಕೊಂಡು ಬಂದ ರಂಗಭೂಮಿಯೇ ಸರ್ವಸ್ವವೆಂದು ಶ್ರದ್ಧೆ, ಶ್ರಮ, ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಿದವರು. ಕಷ್ಟ-ನಷ್ಟಗಳನ್ನು ಅನುಭವಿಸುತ್ತ ಬಂದವರು. ತಾವು ನರಳುತ್ತಲೇ ರಂಗಭೂಮಿಯನ್ನು ಚೇತನಗೊಳಿಸಿದರು. ಇಂಥ ನಿಷ್ಠಾವಂತರಿಂದಲೇ ರಂಗಭೂಮಿಯ ಗೌರವ ಉಳಿದಿದೆ. ಈ ಕಲಾವಿದೆಯ ಪಾತ್ರಗಳು ಬೆಳಕು ಹರಡಿ ರಂಗಭೂಮಿಯನ್ನು ಪ್ರಜ್ವಲಿಸಿವೆ. ಒಟ್ಟಿನಲ್ಲಿ ಒಂದೇ ಮಾತಿನಲ್ಲಿ ಹೇಳುವುದಾದರೆ, ಬೆಳಕು ಹರಿಯುವಾಗ ಮೂಡುವ ಬೆಳ್ಳಿ ಚುಕ್ಕೆ ಈ ಕಲಾವಿದೆ." ಎಂದು ಹೇಳಿದ್ದಲ್ಲದೆ,

ಅವರನ್ನು 'ಪ್ರತಿಭಾ ಕಿರಣ' ಎನ್ನುವ ವಿಶೇಷಣದಿಂದ ಕರೆದು ಅದೇ ಶೀರ್ಷಿಕೆಯಲ್ಲಿ ಮೌಲಿಕ ಲೇಖನವನ್ನು ಬರೆದಿದ್ದಾರೆ.

● 'ಕರ್ನಾಟಕ ನಾಟಕ ಅಕಾಡೆಮಿ'ಯ ಮಾಜಿ ಸದಸ್ಯರು, ಪ್ರಜಾವಾಣಿ ಹಾಗೂ ಸುಧಾ ಪತ್ರಿಕೆಗಳ ಸುದ್ದಿ ಸಂಪಾದಕರಾದ ಶ್ರೀ ಗುಡಿಹಳ್ಳಿ ನಾಗರಾಜರು "ಅಸ್ಖಲಿತ ಸಂಭಾಷಣೆ, ಬೀಡುಬೀಸಾದ ಚೆಲ್ಲುತನ ಪ್ರಮೀಳಾ ಗುಡೂರರ ಅಭಿನಯದ ಯಶಸ್ಸಿನ ಗುಟ್ಟು. ಗಟ್ಟಿಗಿತ್ತಿ ಪಾತ್ರದ ಜೊತೆಗೆ ಗಂಡು ಪಾತ್ರಕ್ಕೂ ಪ್ರಮೀಳಮ್ಮ ಹೆಸರುವಾಸಿ, 'ಗೌಡ್ರ ಗದ್ಲ'ನಾಟಕದ ಗೌಡ, 'ಮಲಮಗಳು' ನಾಟಕದ ರಂಗಣ್ಣ, 'ಹಡೆದವ್ವ'ದ ಚಕಾರಿ, 'ರಕ್ತರಾತ್ರಿ'ಯಲ್ಲಿ ದುರ್ಯೋಧನ, ಅಶ್ವತ್ಥಾಮ, ಪುರುಷ ಪಾತ್ರಗಳಿಂದಲೂ ಹೆಸರುವಾಸಿಯಾಗಿದ್ದಾರೆ." ಎಂದು ಬರೆದಿದ್ದಾರೆ. ಗುಡಿಹಳ್ಳಿ ನಾಗರಾಜ ಅವರೇ, ೦೯-೦೫-೨೦೦೮ರಂದು ಬೆಂಗಳೂರಿನಲ್ಲಿ ಹಮ್ಮಿಕೊಂಡ 'ಲೋಕೇಶ ನೆನಪು' ಉತ್ಸವದಂದು 'ರಕ್ತರಾತ್ರಿ'ನಾಟಕದ ಶಕುನಿ ಪಾತ್ರ ಮಾಡಿದ ತೊಗಲುಗೊಂಬೆ ಆಟದ ಖ್ಯಾತಿಯ ಬೆಳಗಲ್ ವೀರಣ್ಣನವರನ್ನು, ಪಿ.ಬಿ. ಧುತ್ತರಗಿ ವಿರಚಿತ 'ಸಿಂಧೂರ ಲಕ್ಷ್ಮಣ' ನಾಟಕದಲ್ಲಿ ಲಕ್ಷ್ಮಣನ ತಾಯಿ ನರಸವ್ವನ ಪಾತ್ರವನ್ನು ಪ್ರಮೀಳಮ್ಮ ತಮ್ಮ ಬೊಚ್ಚುಬಾಯಿಯಲ್ಲೂ ಅದ್ಭುತವಾಗಿ ಅಭಿನಯಿಸಿದ್ದಲ್ಲದೆ, ಸಂಭಾಷಣೆಯಲ್ಲೇ ಉಂಟು ಮಾಡುವ ಭಾವ ತೀವ್ರತೆ, ರೋದನವಂತೂ ಅನನ್ಯವಾಗಿತ್ತು. ಜಯರಾಜು ಹೊಸಮನಿ ಅವರ ಕುಲಕರ್ಣಿ ಪಾತ್ರ ಅದ್ಭುತವಾಗಿತ್ತು. ಪಿ.ಬಿ. ಧುತ್ತರಗಿಯವರ 'ದೇವಿ ಮಹಾತ್ಮೆ' ನಾಟಕದ ಮಹಿಷಾಸುರನ ಪಾತ್ರವನ್ನು ಅತ್ಯದ್ಭುತವಾಗಿ ಅಭಿನಯಿಸಿದ ಕುಮಾರಸ್ವಾಮಿ ನಾಟಕ ಕಂಪನಿಯ ಜಹಿಾವುಲ್ಲಾ ಅವರನ್ನು, ಜಮದಗ್ನಿ - ರೇಣುಕೆಯಾಗಿ ಮೆರೆದ ಹುಬ್ಬಳ್ಳಿಯ ತಾರಾಜೋಡಿ ಅಬ್ದುಲ್‌ಸಾಬ ಅಣ್ಣಿಗೇರಿ - ಪುಷ್ಪಮಾಲಾ ಅಣ್ಣಿಗೇರಿ ಅವರನ್ನು, ಅನುಭಾವಿ ನಾಗಲಿಂಗನ ಪಾತ್ರ ಶ್ರೇಷ್ಠ ನಟ ಎಂ.ಎಸ್. ಕೊಟ್ರೇಶ ಅವರನ್ನು, ಲವಕುಶ ನಾಟಕದ ರಾಧಾ-ರುಕ್ಮಿಣಿ ಪಾತ್ರದ ಅವಳಿ ಸಹೋದರಿ (ಚಿತ್ರನಟಿ ಶ್ರುತಿ ಅವರ ತಾಯಂದಿರು), ಪ್ರಕಾಶ ಕಡಪಟ್ಟಿ ಕಂಪನಿ ಅವರ 'ಭೂಮಿ ತೂಕದ ಹೆಣ್ಣು' ನಾಟಕದ ಜಯರಾಜ ಹೊಸಮನಿ ಹಾಗೂ ಲಲಿತಾ ಅವರ ಹಾಸ್ಯ ಪಾತ್ರಗಳು, ಅಲ್ಲದೆ ಹೊಸಪೇಟೆಯ ಅಭಿನಂದನಾ, ಹುಬ್ಬಳ್ಳಿಯ ಮೇಘನಾ ಇವರುಗಳ ಅಭಿನಯ, ಮಾತುಗಾರಿಕೆ ಅಮೋಘವಾಗಿತ್ತು. ಅಂತೆಯೇ ಈ ಎಲ್ಲ ಕಲಾವಿದರ ಪರಿಣಾಮಕಾರಿಯಾದ ಹೃದಯಸ್ಪರ್ಶಿ ನಟನೆಯನ್ನು 'ದಂತಕತೆಯಾದ ಅಭಿನಯದ ಮಾದರಿಗಳು'ಎಂದು ಬಹುಔಚಿತ್ಯ ಪೂರ್ಣವಾಗಿ ಹೇಳಿದ್ದಾರೆ.

● 'ವಿಕ್ರಾಂತ ಕರ್ನಾಟಕ' ವಾರ ಪತ್ರಿಕೆಯು ೨೦೦೯ ಮಾರ್ಚ್ ೨೭ ಹಾಗೂ ಏಪ್ರಿಲ್ ೦೩ರಂದು ಪ್ರಮೀಳಮ್ಮನವರ ರಂಗಸಾಧನೆ ಕುರಿತು ಕಗ್ಗರೆ ಪ್ರಕಾಶರು ಬರೆದ ಲೇಖನವನ್ನು ಪ್ರಕಟಿಸಿತು. ಲೇಖಕರು 'ಇವರ ಕಂಠಸಿರಿಯೂ ಸಂಗೀತದ ಸುಮಧುರ

ಕಾವ್ಯದಂತೆ ಕೇಳಿಬರುತ್ತದೆ' ಎಂದು ಪ್ರಮೀಳಮ್ಮನವರ ಸಂಭಾಷಣೆಯ ಮಹೋನ್ನತಿಯನ್ನು ವರ್ಣಿಸಿದ್ದಾರೆ.

● ಕೆ. ಅನ್ನಪೂರ್ಣ ಎಸ್. ರಾವ್. ಅವರು "ಪ್ರಮೀಳಮ್ಮನವರ ಅನುಭವದ ಮಾತು, ನೋವು, ದುಗುಡ, ದುಮ್ಮಾನ, ಸಂತೋಷ, ದು:ಖ ಎಲ್ಲ ರಸಗಳಿಗೆ ಹೊಂದುವಂತೆ ಧ್ವನಿಯ ಏರುಪೇರುಗಳನ್ನು ಸಡಿಲಗೊಳಿಸದೆ ಅಭಿವ್ಯಕ್ತಿಸಿದ್ದು ಎಲ್ಲರ ಮೆಚ್ಚುಗೆ ಗಳಿಸುವಂತಾಗಿದೆ."

ಇವಲ್ಲದೆ ಇನ್ನೂ ಹಲವಾರು ಸಂಘ-ಸಂಸ್ಥೆಯವರು ಪ್ರಮೀಳಮ್ಮನವರ ಸಾಧನೆ, ಕೊಡುಗೆ, ಪ್ರತಿಭೆ, ಸೇವೆ-ಇವನ್ನು ಲಕ್ಷಿಸಿ ಸತ್ಕರಿಸಿ ಗೌರವಿಸಿವೆ. ಅಲ್ಲದೆ ಅನೇಕರು ಮುಕ್ತ ಕಂಠದಿಂದ ಶ್ಲಾಘಿಸಿದ್ದಾರೆ.

## ದೃಶ್ಯ – ೫

# ಪ್ರಮೀಳಮ್ಮನವರ ವ್ಯಕ್ತಿತ್ವ

ವ್ಯಕ್ತಿ ಮುಖ್ಯವಲ್ಲ, ವ್ಯಕ್ತಿತ್ವ ದೊಡ್ಡದು. ವಿಶಿಷ್ಟ ವ್ಯಕ್ತಿತ್ವದಿಂದ ವ್ಯಕ್ತಿ ಅಮರನಾಗುತ್ತಾನೆ. ದೈಹಿಕವಾಗಿ ಸದೃಢನಾಗಿರುವುದು ವ್ಯಕ್ತಿತ್ವವೆನಿಸದು. ದೈಹಿಕ–ಮಾನಸಿಕ ಸದೃಢತೆಯೊಂದಿಗೆ ಸಕಾರಾತ್ಮಕ ಗುಣಾದರ್ಶಗಳನ್ನೊಳಗೊಂಡು, ಹೃದಯ ವೈಶಾಲ್ಯತೆ, ಸಾಧನಾತ್ಮಕ ಮನೋಭಾವ, ಸೇವಾ ಮನೋಭಾವವುಳ್ಳದ್ದು ವ್ಯಕ್ತಿತ್ವವೆನಿಸುವುದು.

ರಂಗಸಾಧಕಿಯಾದ ಪ್ರಮೀಳಮ್ಮನವರದು ಒಂದು ವಿಶೇಷ ವ್ಯಕ್ತಿತ್ವ. ಅದುವೇ ಅವರನ್ನು ಇಷ್ಟೊಂದು ಉತ್ಕೃಷ್ಟ ಮಟ್ಟಕ್ಕೊಯ್ಯುದುದು. ಹೃದಯ ವೈಶಾಲ್ಯತೆ, ಮಾನವೀಯತೆ, ಉಪಕಾರ ಸ್ಮರಣೆ, ಹಿರಿಯರ ಬಗೆಗಿನ ಗೌರವ ಭಾವನೆ, ಸ್ವಾಭಿಮಾನ, ಕಲಾಭಿಮಾನ, ಅಮೋಘ ಅಭಿನಯ ಇವೆಲ್ಲ ಅಂಶಗಳು ಅವರ ವ್ಯಕ್ತಿತ್ವದಲ್ಲಿ ಕಾಣಿಸಿಕೊಳ್ಳುತ್ತವೆ. ಈ ಎಲ್ಲ ಆದರ್ಶ ಗುಣಗಳಿಂದಾಗಿಯೇ ಪ್ರಮೀಳಮ್ಮನವರ ಸುಂದರ ವ್ಯಕ್ತಿತ್ವ ರೂಪಿತವಾಗಿದೆ.

ಔದಾರ್ಯತನ, ಹೃದಯ ವಿಶಾಲತೆ ಪ್ರತಿಯೊಬ್ಬರಲ್ಲೂ ಅಗತ್ಯವಾದುದು. ಜಾಗತೀಕರಣದ ಈ ಸಂದರ್ಭದಲ್ಲಿ ಎಲ್ಲ ರಕ್ತ ಸಂಬಂಧಗಳು ಶಿಥಿಲಗೊಂಡು ನಿರ್ನಾಮವಾಗುತ್ತಿವೆ. ಅಕ್ಕನನ್ನು, ತಂಗಿ, ತಂಗಿಯನ್ನು ಅಕ್ಕ ಕಂಡರೆ ಆಗದ, ತಂಗಿಯ ಬಾಳಿಗೆ ಅಕ್ಕ, ಅಕ್ಕಳ ಬಾಳಿಗೆ ತಂಗಿ ಬೆಂಕಿಯಿಡುತ್ತಿರುವ ಇವತ್ತಿನ ಕಾಲದಲ್ಲಿ ಪ್ರಮೀಳಾ–ಮಮತಾ ಸಹೋದರಿಯರ ಪ್ರೀತಿ, ವಾತ್ಸಲ್ಯ, ಪ್ರಮೀಳಾ ತಂಗಿ ಮಮತಾಳ ಬಗ್ಗೆ, ಮಮತಾ ಅಕ್ಕ ಪ್ರಮೀಳಾ ಬಗೆಗೆ ಹೊಂದಿದ ಔದಾರ್ಯತನ ಇಂದಿನ ಸಹೋದರಿಯರಿಗೆ ಅನುಕರಣೀಯವಾಗಬೇಕಿದೆ.

ಅವರಿಬ್ಬರು ರಂಗಭೂಮಿಯ ಶ್ರೇಷ್ಠ ನಟಿಯರು. ಅಕ್ಕಳ ನಟನೆಯ ಬಗ್ಗೆ ತಂಗಿ, ತಂಗಿಯ ಅಭಿನಯ ಕುರಿತು ಅಕ್ಕ ವ್ಯಕ್ತಪಡಿಸಿದ, ವ್ಯಕ್ತಪಡಿಸುತ್ತಿರುವ ಅಭಿಪ್ರಾಯಗಳು ಅವರ ದೊಡ್ಡತನಕ್ಕೆ ಸಾಕ್ಷಿಯಾಗಿವೆ. ಸಹೋದರಿ ಮಮತಾಳಿಗೆ ಅರಿಷಿಣಗೋಡಿಯವರ ಕಂಪನಿಯಲ್ಲಿ ಹೆಚ್ಚು ಪಾತ್ರಗಳು ಸಿಗದ ಕಾರಣ ಮಾಲೀಕರೊಂದಿಗೆ ಭಿನ್ನಾಭಿಪ್ರಾಯ ಹೊಂದಿ ಪ್ರಮೀಳಾ ಆ ಮಂಡಳಿ ಬಿಟ್ಟಿದ್ದು,

ಮಮತಾ ತಾನು ಅಭಿನಯಿಸುತ್ತಿದ್ದ ಶ್ರೀ ಶೈಲ ಮಲ್ಲಿಕಾರ್ಜುನ ನಾಟ್ಯ ಸಂಘದ ಮಾಲೀಕರಾದ ಬಸವಂತಪ್ಪ ಪಟ್ಟಣಶೆಟ್ಟರಿಗೆ, ನನ್ನ ಅಕ್ಕಳಿಗೆ ನಿಮ್ಮ ಕಂಪನಿಯಲ್ಲಿ ಪಾತ್ರ ಮಾಡಲು ಅವಕಾಶ ಕೊಟ್ಟರೆ ನಾನು ಇಲ್ಲಿ ಮುಂದುವರೆಯುತ್ತೇನೆ, ಇಲ್ಲದಿದ್ದರೆ ಬೇರೆ ಕಂಪನಿಗೆ ಹೋಗುತ್ತೇನೆ ಹೇಳಿದ್ದು, ಅವರಿಬ್ಬರ ನಡುವಿನ ನಿಜವಾದ ಸಹೋದರಿ ಪ್ರೀತಿಗೆ ಇದಕ್ಕಿಂತ ಉತ್ತಮ ದೃಷ್ಟಾಂತ ಬೇಕೆ?

'ಮಮತಾ ಒಳ್ಳೆಯ ನಟಿ. ಆಕೆ ಎಲ್ಲ ಪಾತ್ರಗಳಿಗೂ ಸೈ. ಯಾವ ಪಾತ್ರವನ್ನು ಕೊಟ್ಟರೂ ಅದನ್ನು ಚೆನ್ನಾಗಿ ಮಾಡಿ ತೋರಿಸುವ ಕಲಾವಿದೆ. ಆಕೆ ನನಗಿಂತಲೂ ಶ್ರೇಷ್ಠಳು. ಈಗಂತೂ ಅವಳ ಹೆಸರು ಜನಪ್ರಿಯ' ಎಂದು ತಂಗಿಯನ್ನು ಹೊಗಳಿದ್ದು, ಪ್ರಮೀಳಮ್ಮನವರ ಹೃದಯ ವೈಶಾಲ್ಯತೆಯನ್ನು ಎತ್ತಿತೋರಿಸುತ್ತದೆ.

ಪ್ರಮೀಳಮ್ಮನವರ ಔದಾರ್ಯತೆಗೆ ಇನ್ನೊಂದು ಉದಾಹರಣೆಯನ್ನು ಇಲ್ಲಿ ಕೊಡುವುದು ಸೂಕ್ತವೆನಿಸುತ್ತದೆ. ಗುಡಿಗೇರಿ ಬಸವರಾಜರ ಕಂಪನಿ ದಾವಣಗೆರೆಯಲ್ಲಿ ವಾಸ್ತವ್ಯ ಮಾಡಿತ್ತು. ಆರ್.ಡಿ. ಕಾಮತ್‌ರ 'ಹೈಬ್ರಿಡ್ ಹೆಣ್ಣು'ನಾಟಕವನ್ನು ಅದ್ಧೂರಿಯಾಗಿ ಪ್ರಯೋಗಿಸಿ ನೂರು ಪ್ರಯೋಗಗಳನ್ನು ಕಂಡಿತು. ಆ ಸಮಯಕ್ಕೆ ಪ್ರಮೀಳಮ್ಮ ಮಾಲೀಕರ ಆಹ್ವಾನದ ಮೇರೆಗೆ ಅಲ್ಲಿಗೆ ಹೋದರು. ಅಲ್ಲಿಯವರೆಗೂ ನಾಟಕದ 'ಸುಮಿತ್ರಾ ದೇಸಾಯಿ' ಪಾತ್ರವನ್ನು ದಾವಣಗೆರೆಯ ರಾಜಮ್ಮ ಮಾಡಿದ್ದರು. ಬಸವರಾಜರು ೧೦೧ನೆಯ ಪ್ರಯೋಗದಂದು ಸುಮಿತ್ರಾ ದೇಸಾಯಿ ಪಾತ್ರವನ್ನು ಪ್ರಮೀಳಮ್ಮ ನೀನು ಮಾಡು ಎಂದಾಗ, ಪ್ರಮೀಳಮ್ಮ 'ನನಗೆ ೦೫ ದಿವಸ ಕಲಾವಕಾಶ ಬೇಕು ಅಂದರಂತೆ, ಯಾಕೆಂದರೆ ಇಷ್ಟು ದಿನಗಳವರೆಗೆ ಆ ಪಾತ್ರ ಮಾಡಿದ ರಾಜಮ್ಮನವರೆ ೧೦೧ನೆಯ ಪ್ರಯೋಗದಲ್ಲಿ ಅಭಿನಯಿಸಲಿ. ಅಂದು ದೊಡ್ಡವರು ಬಂದಿರುತ್ತಾರೆ. ಅವಳ ಪಾತ್ರನೋಡಿ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಅವಳಿಗೂ ಸಂತೋಷವಾಗುತ್ತದೆ. ಆದರೆ ನಾನು ನಟಿಸಿದರೆ ಅವಳಿಗೆ ನೋವಾಗುತ್ತದೆ. ಅವಳೇ ಮಾಡಲಿ, ಬೇಕಾದರೆ ನಾನು ಮರುದಿನ ಅಭಿನಯಿಸುತ್ತೇನೆ' ಎಂದು ಹೇಳಿ ಔದಾರ್ಯವನ್ನು ಮೆರೆದರು.

'ಸಿಂಧೂರು ಲಕ್ಷ್ಮಣ'ದ ನರಸವ್ವನ ಪಾತ್ರದಿಂದ ನಾಡಿನ ತುಂಬೆಲ್ಲ ಮನೆಮಾತಾದ ಪ್ರಮೀಳಮ್ಮನವರು ತಮ್ಮ ಈ ಪಾತ್ರದ ಯಶಸ್ಸಿಗೆ ಪ್ರೇರಕ ಶಕ್ತಿ ಧುತ್ತರಗಿ ಸರೋಜಮ್ಮನವರು. ಅವರ ಪಾತ್ರ ನೋಡಿ, ಅದನ್ನು ಅನುಕರಸಿಯೇ ನಾನು ಯಶಸ್ಸಿಗೆ ಬಂದೆ ಎಂದು ಹೇಳುವ ಅವರ ಉದಾರ ಗುಣ ಮೆಚ್ಚಬೇಕಾದುದು. ಸರೋಜಮ್ಮನವರು ನಿಧನರಾದ ವಿಷಯ ಕೇಳಿ ಕೆಲಕಾಲ ಗರಬಡಿದಂತೆ ಸ್ತಂಭಿಭೂತರಾಗಿ ಗಳಗಳನೆ ಕಣ್ಣೀರು ಹಾಕಿ ಅತ್ತುಬಿಟ್ಟರು. ಇದು ಅವರಲ್ಲಿನ ಮಾನವೀಯತೆಯ ತುಡಿತವನ್ನು ಮಿಡಿಯುತ್ತದೆ.

ಪ್ರಮೀಳಮ್ಮ ಗುರು–ಹಿರಿಯರ ಮೇಲೆ ತೋರಿದ, ತೋರಿಸುತ್ತಿರುವ ಗೌರವ ಭಾವನೆ ಅಪಾರ. ಗದುಗಿನ ಎಚ್.ಟಿ. ಮಹಾಂತೇಶಶಾಸ್ತ್ರಿಗಳು ಪ್ರಮೀಳಮ್ಮನವರ ನಾಟಕ ಗುರುಗಳು. ತಮ್ಮ ಯಶಸ್ಸಿಗೆ ಕಾರಣರಾದ ಗುರುಗಳನ್ನು ನೆನೆಯುವ ಪ್ರಮೀಳಮ್ಮನವರ ಉಪಕಾರ ಸ್ಮರಣೆ ಇತರರಿಗೆ ಅನುಕರಣೀಯವಾಗಬೇಕು. 'ನನಗೆ ನನ್ನ ಗುರುಗಳು ಪಾತ್ರವನ್ನು ಒಳಹೊಕ್ಕು ಮಾಡುವುದರಿಂದ ಪಾತ್ರವನ್ನು ಪರಿಣಾಮಕಾರಿಯಾಗಿ ಮಾಡಲು ಸಾಧ್ಯ ಎಂದು ಹೇಳಿದ್ದರು. ಅವರು ಹೇಳಿದಂತೆ ನಾನು ಪಾತ್ರವನ್ನು ಅನುಭವಿಸಿ, ಅದರ ಒಳಹೊಕ್ಕು ಅಭಿನಯಿಸಿದ ಕಾರಣ ಯಶಸ್ಸು ಸಾಧ್ಯವಾಯಿತು.' ಎಂದು ಗುರುವಿನ ಉಪಕಾರವನ್ನು ಭಕ್ತಿಭಾವದಿಂದ ಸ್ಮರಿಸುತ್ತಾರೆ.

ಚಿತ್ರನಟ ಧೀರೇಂದ್ರಗೋಪಾಲ ಅವರೊಂದಿಗೆ 'ಮಲಮಗಳು'ನಾಟಕದಲ್ಲಿ ನಟಿಸಿದ್ದಾರೆ. ಪ್ರಮೀಳಮ್ಮನ ಕಲ್ಯಾಣಿ ಪಾತ್ರನ್ನು ಮೆಚ್ಚಿದ ಧೀರೇಂದ್ರಗೋಪಾಲರು ತಮಗೆ ಬಂದ ಆಹೇರಿ ಹಣವನ್ನು 'ಈ ಪಾತ್ರವನ್ನು ಎಷ್ಟು ಚೆನ್ನಾಗಿ ಮಾಡುವೆ ಎಂದು ಮೆಚ್ಚುಗೆ ಸೂಚಿಸಿ, ನನ್ನ ಆಹೇರಿ ಹಣವನ್ನು ತಾಯಿ ಕಲ್ಯಾಣಿಗೆ ಅರ್ಪಿಸುವೆ' ಎಂದು ಹೇಳಿ ಕೊಡುತ್ತಿದ್ದರಂತೆ. ಆ ಉಪಕಾರವನ್ನು ನೆನಪಿಸಿಕೊಳ್ಳುತ್ತಾರೆ ಪ್ರಮೀಳಮ್ಮ.

೨೦೦೫ರಲ್ಲಿ ಬಾಗಲಕೋಟೆ ಜಿಲ್ಲಾ ಆಡಳಿತವು 'ಜಲಜಾಥಾ' ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಪ್ರಮೀಳಮ್ಮನವರು ಅದರಲ್ಲಿ ಭಾಗವಹಿಸಿದ್ದರು. ಅಲ್ಲಿಯವರೆಗೆ ಪ್ರಮೀಳಮ್ಮನವರಿಗೆ ವೃದ್ಧಾಪ್ಯ ವೇತನ ಬಂದಿರಲಿಲ್ಲ. ಈ ವಿಷಯ ಗೊತ್ತಾದ ಮೇಲೆ ಜಿಲ್ಲಾಧಿಕಾರಿಗಳಾದ ಶ್ರೀ ಕೆ. ಎಸ್. ಪ್ರಭಾಕರ್ ಅವರು ಹುನಗುಂದ ತಹಸೀಲ್ದಾರ ಶ್ರೀ ಸಿದ್ದಪ್ಪ ಅವರೊಂದಿಗೆ ಮಾತನಾಡಿ ವೃದ್ಧಾಪ್ಯ ವೇತನ ಸಿಗುವಂತೆ ಮಾಡಿದರಂತೆ. ಈ ವಿಷಯವನ್ನು ಪ್ರಮೀಳಮ್ಮ ಸಂತೋಷದಿಂದ ಸ್ಮರಿಸುತ್ತಾರೆ.

ಕಷ್ಟಕಾಲದಲ್ಲಿ ಸಹಕರಿಸಿ, ತಮ್ಮ ಪ್ರತಿಭೆ ಮೆಚ್ಚಿ ೧೦ ಸಾವಿರ ನೀಡಿದ ನಟ ಕರಿಬಸವಯ್ಯ, ೦೫ ಸಾವಿರ ಕೊಟ್ಟ ಚಿಂದೋಡಿ ಲೀಲಮ್ಮ, ೦೫ ಸಾವಿರ ನೀಡಿದ ಗಿರಿಜಾ ಲೋಕೇಶ, ೧೦ ಸಾವಿರ ಧನಸಹಾಯ ಮಾಡಿದ ಅರುಣ ನಂದನ ಹಾಗೂ ಪ್ರತಿ ತಿಂಗಳು ೫೦೦ ರೂಪಾಯಿಗಳನ್ನು ಕಳಿಸುತ್ತಿರುವ ಬೆಂಗಳೂರಿನ ಜಿ.ಕೆ. ಸುರೇಶ ಇವರೆಲ್ಲರನ್ನು ನೆನೆಯುವ ಪ್ರಮೀಳಾ ಅವರ ರೀತಿ ಎಲ್ಲರಿಗೂ ಅನುಕರಣೀಯವಾಗುವಂಥದ್ದು.

'ಕಲೆ, ಅಭಿನಯವನ್ನೇ ಜೀವನ'ಎಂದು ತಿಳಿದ ವ್ಯಕ್ತಿತ್ವ ಅವರದು. ಅದಕ್ಕಾಗಿ ಜೀವನವನ್ನು ಮುಡುಪಾಗಿಟ್ಟವರು. ಬಾಗಲಕೋಟೆಯಲ್ಲಿ 'ಪ್ರಜಾಸರ್ಕಾರ'ವನ್ನು ಪ್ರಯೋಗಿಸುತ್ತಿದ್ದಾಗ ಒಂದು ದಿನ ಸಂಜೆ ಪ್ರಮೀಳಾ ಅವರ ತಂದೆ ತೀರಿಕೊಂಡ ಸುದ್ದಿ ಬಂದು ತಲುಪಿತು. ಆಗ ಬಾಗಲಕೋಟೆಯಿಂದ ಗುಡೂರಿಗೆ ಬಂದು, ತಂದೆಯ

ಶವಸಂಸ್ಕಾರದಲ್ಲಿ ಪಾಲ್ಗೊಂಡು ಪುನ: ಬಾಗಲಕೋಟೆಗೆ ತಿರುಗಿ ಬಂದು ರಾತ್ರಿ ಒಂಬತ್ತು ಗಂಟೆಗೆ ಬಣ್ಣ ಹಚ್ಚಿಕೊಂಡು ನಟನೆಗೆ ಸಿದ್ಧರಾದರು. ಅವರ ದೃಷ್ಟಿಯಲ್ಲಿ ವಾಸ್ತವಿಕ ಬದುಕಿಗಿಂತ ಕಲಾಜೀವನ ಶ್ರೇಷ್ಠವಾಗಿತ್ತೆಂಬುದಕ್ಕೆ ಈ ಘಟನೆ ಒಂದು ಉದಾಹರಣೆ.

ನನ್ನ ವೈಯಕ್ತಿಕ ಜೀವನದಲ್ಲಿ ನೋವು-ದು:ಖಗಳನ್ನು ಕಂಡಿದ್ದೇನೆ ಹೊರತು, ಕಲಾಜೀವನದಲ್ಲಿ ಎಂದೂ ನೋವು ಉಂಡಿಲ್ಲ. ಬದಲಾಗಿ ಸಂತೋಷವನ್ನು, ಗೌರವವನ್ನು ಕಂಡವಳು' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಅಭಿನಯವನ್ನೇ ಉಸಿರಾಗಿಸಿಕೊಂಡ ಪ್ರಮೀಳಮ್ಮನವರಿಗೆ ಅದುವೇ ಅವರ ಸ್ವತ್ತಾಗಿತ್ತು. ತಮ್ಮ ನಟನೆಗೆ ಯಾರಿಂದಲಾದರೂ ವಿರೋಧ, ತೊಂದರೆ ಎದುರಾದರೆ ಸಹಿಸಿಕೊಳ್ಳದವರು. ಅದಕ್ಕೆ ಒಂದು ಸಂದರ್ಭವನ್ನು ಇಲ್ಲಿ ಉದಾಹರಿಸುವುದು ಸೂಕ್ತವೆನಿಸುತ್ತದೆ.

ಪ್ರಮೀಳಮ್ಮನವರಿಗೆ ಪಾರ್ಶ್ವವಾಯು ಬಂದ ಮೇಲೆ ಮಗಳು ಅಮೀನಾ, ಅಳಿಯ ಮಹಮ್ಮದ ಅವರ ಮನೆಯಲ್ಲಿಯೇ ಇದ್ದಾರೆ. ಒಮ್ಮೆ ಅಳಿಯ, ಅತ್ತೆಯವರ ದು:ಸ್ಥಿತಿ ಕಂಡು 'ಇನ್ಮುಂದೆ ಅಭಿನಯಿಸುವುದನ್ನು ಬಿಟ್ಟುಬಿಡಿ, ನಾವಿಲ್ಲವೆ? ದುಡಿದುಕೊಂಡು ಬಂದು ಹಾಕುತ್ತೇವೆ, ನಿಶ್ಚಿಂತೆಯಿಂದ ಕುಳಿತು ಉಣ್ಣಿರಿ' ಎಂದನಂತೆ. ಆಗ ಪ್ರಮೀಳಮ್ಮನವರು ಅಳಿಯನಿಗೆ 'ಸಾಯಿ ಎಂದರೆ ಸಾಯುತ್ತೇನೆ. ಆದರೆ ರಂಗಭೂಮಿಯಲ್ಲಿ ಅಭಿನಯಿಸುವುದನ್ನು ಬಿಡಿ ಎಂದು ಹೇಳಬೇಡಿ. ಅಭಿನಯವೆ ನನ್ನ ಉಸಿರು ಎಂದರಂತೆ ಅಭಿನಯ ಕಲೆಯ ಮೇಲಿರುವ ಅವರ ಪ್ರೀತಿ, ಗೌರವ, ಅಭಿಮಾನಕ್ಕೆ ಈ ಪ್ರಸಂಗ ಉತ್ತಮ ಸಾಕ್ಷಿ. 'ಅಭಿನಯವೇ ಜೀವನ, ಅದುವೇ ಉಸಿರು, ಅದು ಇರುವವರೆಗೂ ಅಭಿನಯಿಸುತ್ತೇನೆ' ಎನ್ನುವ ಪಮೀಳಮ್ಮನವರ ಪ್ರತಿಜ್ಞೆ ಎಲ್ಲ ಕಲಾವಿದರಿಗೆ ಮಾದರಿಯಾಗಬೇಕು.

ನಾನು ಪ್ರಮೀಳಮ್ಮನವರ ಹತ್ತಿರ ವಿಷಯ ಸಂಗ್ರಹಣೆಗೆಂದು ಹೋದಾಗ ವೃತ್ತಿ ನಾಟಕ ಹಾಗೂ ಹವ್ಯಾಸಿ ನಾಟಕ, ವೃತ್ತಿ ಕಲಾವಿದ ಮತ್ತು ಹವ್ಯಾಸಿ ಕಲಾವಿದ, ವೃತ್ತಿ ಕಂಪನಿ ಹಾಗೂ ಹವ್ಯಾಸಿ ಕಂಪನಿ-ಇವುಗಳ ಬಗ್ಗೆ ನಿಮ್ಮ ಅನಿಸಿಕೆ ಏನು ಎಂದು ಕೇಳಿದಾಗ, ಅವರು 'ನಾಟಕ ನಾಟಕನೆ, ಕಲಾವಿದ ಕಲಾವಿದನೆ, ಕಂಪನಿ, ಕಂಪನಿಯೆ ಎಂದು, ಅವನ್ನು ಸಮಾನವಾಗಿ ಕಾಣಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಇಲ್ಲಿ ಉಲ್ಲೇಖಿಸಿದ ದೃಷ್ಟಾಂತಗಳು ಪ್ರಮೀಳಮ್ಮನವರ ಮಹೋಜ್ವಲ ವ್ಯಕ್ತಿತ್ವಕ್ಕೆ ನಿದರ್ಶನಗಳಾಗಿವೆ.

■

## ದೃಶ್ಯ-೬
# ಮಂಗಳ (ಸಮಾರೋಪ)

ಕನ್ನಡ ರಂಗಭೂಮಿಯ ಚರಿತ್ರೆಯಲ್ಲಿ ಮರೆಯಲಾಗದ ಕಲಾವಿದೆಯರಲ್ಲಿ ಗುಡೂರು ಪ್ರಮೀಳಮ್ಮನವರು ಒಬ್ಬರು. ಬಡತನ ಕುಟುಂಬದಲ್ಲಿ ಜನಿಸಿದರೂ ತನ್ನ ಪ್ರತಿಭಾ ಶ್ರೀಮಂತಿಕೆಯಿಂದ ಅಮೋಘವಾಗಿ ಅಭಿನಯಿಸಿ ರಂಗಭೂಮಿಯನ್ನು ಬೆಳಗಿದ ಅಪ್ರತಿಮ ನಟಿ. ರಂಗ ಸಾಮ್ರಾಜ್ಞಿಯಾಗಿ ಆರುವರೆ ದಶಕಗಳ ಕಾಲ ನಟಿಸಿದ ಪಾತ್ರಗಳು ವೈವಿಧ್ಯಮಯವಾದವುಗಳು. ನಾಡಿನ ಏಳೆಂಟು ಪ್ರತಿಷ್ಠಿತ ವೃತ್ತಿ ಕಂಪನಿಗಳಲ್ಲಿ, ಹಲವಾರು ಹವ್ಯಾಸಿ ಮಂಡಳಿಗಳಲ್ಲಿ ನಾನಾ ಪಾತ್ರಗಳನ್ನು ಮಾಡಿ ರಂಗಪ್ರೇಮಿಗಳ ಮನ ಗೆದ್ದವರು. ತಮ್ಮ ಅದ್ಭುತ ಅಭಿನಯದಿಂದಾಗಿ ಅನೇಕ ವೃತ್ತಿಕಂಪನಿಗಳ ಕಲೆಕ್ಷನ್ ಹೆಚ್ಚಿಸಿ, ಅವುಗಳ ಆರ್ಥಿಕ ಭದ್ರತೆಗೆ ಕಾರಣರಾದವರು.

ಪ್ರಮೀಳಮ್ಮನವರು ಅಭಿನಯಿಸಿದ ಒಂದೊಂದು ಪಾತ್ರವೂ ಸಹ ಒಂದೊಂದು ಇತಿಹಾಸವನ್ನು ನಿರ್ಮಿಸಿವೆ. ಸ್ತ್ರೀ ಪಾತ್ರಗಳಲ್ಲಿ 'ಸ್ತ್ರೀರತ್ನ'ದ ಪುಷ್ಪಾ, 'ಹಡೆದವ್ವ' ನಾಟಕದ ಮೀರಾ, 'ಅತ್ತೆಸೊಸೆ'ಯಲ್ಲಿ ಉಷಾ, 'ಅಕ್ಕ-ತಂಗಿ'ಯಲ್ಲಿ ಸಾವಿತ್ರಿ, 'ಬಾಸಿಂಗಬಲ'ದಲ್ಲಿ ಕುಸುಮಾ, 'ಸತಿಪತಿ'ನಾಟಕದಲ್ಲಿ ಸುಶೀಲಾ, 'ಬಸ್ ಕಂಡೆಕ್ಟರ್'ದಲ್ಲಿ ಉಮಾ, ಗರೀಬಿ ಹಟಾವೋ'ದಲ್ಲಿ ಸರೋಜಾ, 'ಏರಿದ ನಂಜು' ನಾಟಕದ ಊರ್ಮಿಳಾ, 'ಸಿಂಧೂರ ಲಕ್ಷ್ಮಣ'ದಲ್ಲಿ ನರಸವ್ವ, 'ಚನ್ನಪ್ಪಚನಗೌಡ'ದ ಈರಮ್ಮ, 'ಹೈಬ್ರಿಡ್ ಹೆಣ್ಣು' ನಾಟಕದ ಸುಮಿತ್ರಾ ದೇಸಾಯಿ, 'ಜಹಾಗೀದಾರ ಜಗಳ' ನಾಟಕದ ಕಾತ್ಯಾಯನಿ ದೇಸಾಯಿ ಪಾತ್ರಗಳು ಇವರಿಗೆ ಹೆಸರು ತಂದಿವೆ. ಕೇವಲ ಸ್ತ್ರೀ ಪಾತ್ರಗಳಲ್ಲಿ ಮಾತ್ರ ಯಶಸ್ಸು ಕಾಣದೆ, ಪುರುಷ ಪಾರ್ಟುಗಳನ್ನು ಸವಾಲಾಗಿ ಸ್ವೀಕರಿಸಿ 'ರಕ್ತರಾತ್ರಿ'ಯ ಅಶ್ವತ್ಥಾಮ, ದುರ್ಯೋಧನ, 'ಗೌಡ್ರ ಗದ್ಲ'ದ ದೇವೇಗೌಡ ಪಾತ್ರಗಳನ್ನು ಕಲಾವಿದರು ನಾಚುವಂತೆ ಮಾಡಿದ ಹಿರಿಮೆ ಅವರದು.

ನಾಟಕ ನಿರ್ದೇಶಕಿಯಾಗಿಯೂ ಕಂಪನಿಯ ಯಜಮಾನಿಯಾಗಿಯೂ ಕನ್ನಡ ರಂಗಭೂಮಿಗೆ ನಿಃಸ್ವಾರ್ಥ ಸೇವೆ ಸಲ್ಲಿಸಿದವರು. ಎಲ್ಲಕ್ಕೂ ಮಿಗಿಲಾಗಿ ಓರ್ವ ಶ್ರೇಷ್ಠ ನಟಿಯಾಗಿ ಭಾವನೆಗಳಿಗೆ ತಕ್ಕಂತೆ ನಟಿಸಿದುದು ಪಾತ್ರದ ಅಂತರಂಗವನ್ನೊಕ್ಕು ಪಾತ್ರವೇ ತಾವಾಗಿ ಅಭಿನಯಿಸಿದುದು ಅವರ ನಟನೆಯ ವೈಶಿಷ್ಟ್ಯವಾಗಿದೆ.

ನಟನೆಯೇ ಅವರ ಬದುಕಾಗಿತ್ತು. ಅದಕ್ಕಾಗಿಯೇ ವೈಯಕ್ತಿಕ ಜೀವನಕ್ಕಿಂತ ಅಭಿನಯಕ್ಕೆ ಹೆಚ್ಚು ಮಹತ್ವಕೊಟ್ಟವರು. ನಿಜ ಜೀವನದ ಕಷ್ಟ ಕೋಟಲೆಗಳನ್ನೆಲ್ಲ ಮರೆತು ಕಲಾಲೋಕದಲ್ಲಿ ರಸಾನುಭವ ಹೊಂದಿದರು. ಅವರೇ ಹೇಳುವಂತೆ 'ನನ್ನ ಕಲಾಜೀವನದಲ್ಲಿ ನಾನೆಂದೂ ಕಣ್ಣೀರು ಹಾಕಿಲ್ಲ, ಸದಾ ನಗುತ್ತಲೆ ಇದ್ದವಳು. ಅಭಿನಯ ಕಲೆಯಿಂದ ನನಗೆ ತೃಪ್ತಿ ಸಿಕ್ಕಿದೆ, ಪ್ರಶಸ್ತಿ-ಪುರಸ್ಕಾರಗಳು, ಮಾನ-ಸನ್ಮಾನಗಳು ಲಭಿಸಿವೆ, ಆದರಿಂದಲೇ ಜೀವನ ಸಾಫಲ್ಯವಾಗಿದೆ, ಅದುವೇ ನನಗೆ ಮುಕ್ತಿ ತೋರಬಹುದೆಂದು ಭಾವಿಸಿರುವೆ' ಎನ್ನುವ ಪ್ರಮೀಳಮ್ಮನವರ ಮಾತುಗಳು ಪ್ರತಿಯೊಬ್ಬ ಕಲಾವಿದರಿಗೂ ಮಾರ್ಗದರ್ಶಕ ಸೂತ್ರಗಳಂತಿವೆ.

ಕಲೆಗಾಗಿ ಜೀವನವನ್ನೇ ಮುಡಾಪಾಗಿಟ್ಟ ಜೀವ ಅದು. ಜೀವನ ಮುಸ್ಸಂಜೆಯ ಸಂದರ್ಭದಲ್ಲೂ ಸಿನೇಮಾ, ಕಿರುತೆರೆಗಳಲ್ಲಿಯೂ ಅಭಿನಯಿಸಿ ಪ್ರೇಕ್ಷಕರು ಹುಬ್ಬೇರಿಸುವಂತೆ ಮಾಡಿದವರು. ಈಗ ಸುಮಾರು ೮೦ರ ಆಸುಪಾಸಿನಲ್ಲಿರುವ ಪ್ರಮೀಳಮ್ಮ ನಡೆದಾಡುವ ಸ್ವಾಸ್ಥ್ಯ ಕಳೆದುಕೊಂಡಿದ್ದರೂ ನಾಟಕದ ಬಗೆಗಿನ ಉತ್ಸಾಹ ಕಳೆದುಕೊಂಡಿಲ್ಲ. ತಮ್ಮ ಅಭಿನಯ ಬದುಕಿನ ಎಲ್ಲ ಘಟನೆಗಳನ್ನು ಅದ್ಭುತವಾಗಿ ಹೇಳುತ್ತಾರೆ. ಅವರ ಸ್ಮರಣ ಶಕ್ತಿ ಅದ್ಭುತವಾದುದು. ತಾವು ನಟಿಸಿದ ವೃತ್ತಿ ಕಂಪನಿಗಳು, ಹವ್ಯಾಸಿ ಮಂಡಳಿಗಳು, ಅಭಿನಯಿಸಿದ ನಾಟಕಗಳು, ಅದರಲ್ಲಿನ ಪಾತ್ರಗಳು, ಇವೆಲ್ಲಕ್ಕಿಂತ ಹೆಚ್ಚಾಗಿ ಸಂಭಾಷಣೆಯನ್ನು ಸರಿಶುದ್ಧವಾಗಿ, ಸ್ಫುಟವಾಗಿ, ತಪ್ಪು ಇಲ್ಲದಂತೆ ಹೇಳುವ ಅವರ ನೆನಪಿನ ಶಕ್ತಿ ನಮ್ಮೆಲ್ಲರಿಗೂ ಅಚ್ಚರಿಯನ್ನುಂಟು ಮಾಡದೆ ಇರದು.

ಪ್ರಮೀಳಮ್ಮ ತಮ್ಮ ನಟನೆಯಿಂದ ಕಲಾಸೇವೆಗೈದರು. ಅಲ್ಲದೆ, ೨೦೦೫ರಲ್ಲಿ ಬಾಗಲಕೋಟೆಯ 'ಜಿಲ್ಲಾ ಆಡಳಿತ'ವು ಹಮ್ಮಿಕೊಂಡ 'ಜಲಜಾಗೃತಿ ಅಭಿಯಾನ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ನೀರಿನ ಅವಶ್ಯಕತೆ, ಮಹತ್ವದ ಕುರಿತು ಜನತೆಯಲ್ಲಿ ಜಾಗೃತಿ ಮಾಡುವ ಮೂಲಕ ಸಾಮಾಜಿಕ ಸೇವೆಯನ್ನು ಮಾಡಿದರು. ಅವರ ಈ ಸೇವೆಯನ್ನು ಮೆಚ್ಚಿ ಬಾಗಲಕೋಟೆ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಕೆ.ಎಸ್. ಪ್ರಭಾಕರ್ ಅವರು ವೃದ್ಧಾಪ್ಯವೇತನ ಸಿಗುವಂತೆ ಮಾಡಿದರು.

ತಾನು ಶ್ರೇಷ್ಠ ಕಲಾವಿದೆಯಾಗಿ ಹೊರಹೊಮ್ಮಲು ಕಾರಣರಾದ ಗುರುಗಳನ್ನು, ಹಿರಿಯರನ್ನು, ಸಹಾಯ ಮಾಡಿದವರನ್ನು ಗೌರವಿಸುವ, ಸ್ಮರಿಸುವ ಆದರ್ಶತನ ಅವರದು. ಹತ್ತಾರು ಪ್ರಶಸ್ತಿಗಳು, ಅನೇಕ ಪುರಸ್ಕಾರಗಳು, ಗೌರವ ಸನ್ಮಾನಗಳು ದೊರೆತರೂ ಸ್ವಲ್ಪೂ ಬಿಗುಮಾನ, ಅಹಂಕಾರ ಅವರಲ್ಲಿಲ್ಲ. ಎಲ್ಲರೊಂದಿಗೆ ಆತ್ಮೀಯತೆಯೊಂದಿಗೆ ಬೆರೆಯುವ, ಪ್ರೀತಿಯಿಂದ ಮಾತನಾಡುವ ಅವರ ಸ್ವಭಾವವೂ ಮೆಚ್ಚುವಂಥದ್ದು.

ಕನ್ನಡ ರಂಗಭೂಮಿಗೆ ಅಮೂಲ್ಯ ಕೊಡುಗೆ ನೀಡಿದ ಪ್ರಮೀಳಮ್ಮನವರ ಸದ್ಯದ ಸ್ಥಿತಿ ಚಿಂತಾಜನಕವಾಗಿದೆ. ಪಾರ್ಶ್ವವಾಯುವಿನಿಂದ ಕಾಲುಗಳ ಸ್ವಾಸ್ಥ್ಯ ಕಳೆದುಕೊಂಡು ನಡೆಯಲಾಗದೆ ಮೂಲೆ ಗುಂಪಾಗಿದ್ದಾರೆ. ಆ ಕಲಾವಿದೆಯ ಚಿಕಿತ್ಸೆಗೆ ಸರ್ಕಾರವಾಗಲಿ, ಯಾವುದೇ ಸಂಘ-ಸಂಸ್ಥೆಗಳಾಗಲಿ ನೆರವಿಗೆ ಬರದೆ ಇದ್ದುದು ದುರದುಷ್ಟಕರ ಸಂಗತಿ. ಆರುವರೆ ದಶಕಗಳವರೆಗೆ ರಂಗಮಂಟಪದಲ್ಲಿ ನಗುತ್ತ ನಟಿಸಿ, ಪ್ರೇಕ್ಷಕರನ್ನು ನಗಿಸಿ ನಲಿಸಿದ ಪ್ರಮೀಳಮ್ಮನವರ ಬಾಳಿನಲ್ಲಿ ಈಗ ನಗುವಿಲ್ಲ. ಬದಲಾಗಿ ಅಳುವು ತುಂಬಿಕೊಂಡುದುದು ಖೇದಕರ. ತಮ್ಮ ಮನೋಜ್ಞ ಅಭಿನಯದಿಂದ ಸಾಮಾಜಿಕರ ಹೃನ್ಮಂದಿರಗಳಲ್ಲಿ ಚಿರಸ್ಥಾಯಿಯಾಗಿ ನೆಲೆಸಿದ ಅವರಿಗೆ ಇರಲು ಸ್ವಂತ ನೆಲೆ (ಸೂರು) ಇಲ್ಲದುದು ದುಃಖದ ವಿಷಯ. ಯಾರ ನೆರವು ಇಲ್ಲದೆ, ಸ್ವತಂತ್ರ ಮನೆ ಇಲ್ಲದೆ ಮಗಳು-ಅಳಿಯನ ಮನೆಯಲ್ಲಿ ಇರಬೇಕಾಗಿ ಬಂದುದು ಅವರ ದೌರ್ಭಾಗ್ಯವೇ ಎನ್ನಬೇಕು.

ಪ್ರಮೀಳಮ್ಮನವರ ನಿಃಸ್ವಾರ್ಥ ಸೇವೆಗೆ, ಅವಿಸ್ಮರಣೀಯ ಕೊಡುಗೆಗೆ ನಮ್ಮ ಸರ್ಕಾರ, ಇತರೆ ಸಾಂಸ್ಕೃತಿಕ ಸಂಘ-ಸಂಸ್ಥೆಗಳು ಸ್ಪಂದಿಸಬೇಕಾದ ಅಗತ್ಯತೆ ಇದೆ. ಅವರ ಚಿಕಿತ್ಸೆಗಾಗಿ ಆರ್ಥಿಕ ನೆರವು ಸಿಕ್ಕರೆ, ಅದರಿಂದ ಅವರು ಗುಣಮುಖರಾಗಿ ಇನ್ನಷ್ಟು ಕಾಲ ನೆಮ್ಮದಿಯಿಂದ ಬದುಕಬಹುದಾಗಿದೆ. ಪ್ರಮೀಳಮ್ಮನವರ ಎರಡು ಮಹದಾಸೆಗಳೆಂದರೆ- ಒಂದು, ಸ್ವಂತ ಮನೆ, ಇನ್ನೊಂದು, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯ ಕನಸು. ಸರ್ಕಾರ ಈ ಮಹಾನ್ ಕಲಾವಿದೆಗೆ ಸ್ವತಂತ್ರ ಮನೆಯೊಂದನ್ನು ನಿರ್ಮಿಸಿಕೊಟ್ಟು, ಬರುವ ವರ್ಷದಲ್ಲಿ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸುವ ಮೂಲಕ ಅವರ ಕನಸನ್ನು ನನಸುಗೊಳಿಸಿ, ತನ್ನ ಘನತೆಯನ್ನು ಹೆಚ್ಚಿಸಿಕೊಳ್ಳುತ್ತದೆ ಎನ್ನುವುದು ನನ್ನ ಸದಾಶಯವಾಗಿದೆ.

■

# ಅನುಬಂಧ - ೧

## ಪ್ರಮೀಳಮ್ಮ ಗುಡೂರು ಅವರ ಜೀವನದ ಪ್ರಮುಖ ಕಾಲಘಟ್ಟಗಳು

- ಜನನ - ೦೧-೦೧-೧೯೩೬
- ಸ್ಥಳ - ಗುಡೂರು
- ತಂದೆ - ತಾಯಿಗಳು - ಫಕ್ರುದ್ದೀನ್, ಇಮಾಮಬು
- ವಿದ್ಯಾಭ್ಯಾಸ - ಮೂರನೆಯ ತರಗತಿಯವರೆಗೆ
- ಬಣ್ಣದ ಬದುಕಿಗೆ ಪ್ರವೇಶ - ೧೯೫೮ರಲ್ಲಿ 'ವಸಂತ ಕಲಾ ನಾಟ್ಯ ಸಂಘ ಗದಗ' ಮೂಲಕ
- ಶ್ರೀಯಡೆಯೂರು ಸಿದ್ದಲಿಂಗೇಶ್ವರ ನಾಟ್ಯಸಂಘ ಪಡೇಸೂರು - ೧೯೬೦
- ಶ್ರೀಹುಚ್ಚೇಶ್ವರ ನಾಟ್ಯಸಂಘ ಕಮತಗಿ - ೧೯೬೧
- ಭಾವಭಾಗ್ಯಶ್ರೀ ಪ್ರಶಸ್ತಿ - ೧೯೬೬
- ನಾಟ್ಯ ಸರಸ್ವತಿ ಪ್ರಶಸ್ತಿ - ೧೯೬೭
- ಮಿತ್ರಕಲಾ ಮಂಡಳಿ ರಾಯಚೂರ ಅವರಿಂದ ಸನ್ಮಾನ - ೧೯೭೪
- ಶ್ರೀ ಶೈಲ ಮಲ್ಲಿಕಾರ್ಜುನ ನಾಟ್ಯಸಂಘ, ಸುಳ್ಳ - ೧೯೭೮
- ಶ್ರೀ ಸಂಗಮೇಶ್ವರ ನಾಟ್ಯಸಂಘ, ಗುಡಗೇರಿ - ೧೯೭೯
- ಶ್ರೀ ಶೈಲ ಮಲ್ಲಿಕಾರ್ಜುನ ನಾಟ್ಯಸಂಘ, ಸೂಡಿ - ೧೯೮೧
- ಹವ್ಯಾಸಿ ಕಂಪನಿಗಳಲ್ಲಿ ನಟನೆ - ೧೯೮೩-೮೪
- ಶ್ರೇಷ್ಠನಟಿ ಬಹುಮಾನ - ೧೯೮೬
- 'ಶ್ರೀ ಹುಲ್ಲೇಶ್ವರ ನಾಟ್ಯಸಂಘ ಗದಗ' ಎಂಬ ಹೆಸರಿನ ಸ್ವಂತ ಕಂಪನಿ ಸ್ಥಾಪನೆ- ೧೯೮೮
- ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿ - ೧೯೯೩

- ಕಂದಗಲ್ಲ ಹನುಮಂತರಾಯರ ರಾಜ್ಯಮಟ್ಟದ ನಾಟಕೋತ್ಸವ(ಬೀಳಗಿ) ದಲ್ಲಿ ಸನ್ಮಾನ – ೧೯೯೫
- ಅಭಿನಯ ಕಲಾಧರಿತ್ರಿ ಪ್ರಶಸ್ತಿ – ೧೯೯೮
- ಪಿ.ಬಿ. ಧುತ್ತರಗಿ ರಂಗೋತ್ಸವ (ಇಲಕಲ್ಲ)ದಲ್ಲಿ ಸನ್ಮಾನ – ೨೦೦೦
- ಪಂಡಿತ ಪುಟ್ಟರಾಜ ಗವಾಯಿಗಳಿಂದ ಆಶೀರ್ವಾದ – ೨೦೦೧
- ಪೌರಾಣಿಕ ನಾಟಕೋತ್ಸವ (ಹಾರೂಗೇರಿ)ದಲ್ಲಿ ಸನ್ಮಾನ – ೨೦೦೧
- ಶಿವಕೃಪಾ ನಾಟ್ಯಮಂದಿರದ ಸುವರ್ಣ ಮಹೋತ್ಸವ (ಗುಳೇದಗುಡ್ಡ)ದಲ್ಲಿ ಸನ್ಮಾನ – ೨೦೦೩
- ವೃತ್ತಿರಂಗಭೂಮಿ ಕಲಾವಿದರ ಸಮಾವೇಶ(ಇಲಕಲ್ಲ)ದಲ್ಲಿ ಗೌರವ ಪುರಸ್ಕಾರ – ೨೦೦೫
- ಪೌರಾಣಿಕ ನಾಟಕೋತ್ಸವ (ಗುಳೇದಗುಡ್ಡ)ದಲ್ಲಿ ಸನ್ಮಾನ – ೨೦೦೫
- ಬಾಗಲಕೋಟೆ ಜಿಲ್ಲಾ ಆಡಳಿತದಿಂದ ಸತ್ಕಾರ – ೨೦೦೫
- ನಾಟಕ ನಿರ್ದೇಶನ – ೨೦೦೬
- ಕನ್ನಡ ಚಲನಚಿತ್ರರಂಗಕ್ಕೆ ಪ್ರವೇಶ – ೨೦೦೭
- ಕಲಾರತ್ನ ಪ್ರಶಸ್ತಿ – ೨೦೦೭
- ಕಿರುತೆರೆ (ದೂರದರ್ಶನ)ಗೆ ಪ್ರವೇಶ – ೨೦೦೮
- ರಂಗರತ್ನ ಪ್ರಶಸ್ತಿ – ೨೦೦೮
- ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿ ಬೆಂಗಳೂರು ಅವರಿಂದ ಗೌರವ ಸತ್ಕಾರ – ೨೦೦೮
- ಶ್ರೀ ಸಂಗಮೇಶ್ವರ ನಾಟ್ಯ ಸಂಘ ಗುಡಗೇರಿ ಕಂಪನಿಯ ೪೫ನೆಯ ವಾರ್ಷಿಕೋತ್ಸವ(ಕೂಡಲಸಂಗಮ)ದಲ್ಲಿ ಶ್ರೀಮತಿ ಪಾರ್ವತಮ್ಮ ರಾಜಕುಮಾರ ಅವರಿಂದ ಗೌರವ ಸಮರ್ಪಣೆ – ೨೦೦೮
- ಕೆ.ಬಿ.ಆರ್.ಡ್ರಾಮಾ ಕಂಪನಿ ಅವರಿಂದ ಸನ್ಮಾನ – ೨೦೦೯
- ಪ್ರತಿಷ್ಠಿತ ಡಾ.ಗುಬ್ಬಿವೀರಣ್ಣ ಪ್ರಶಸ್ತಿ – ೨೦೧೦
- ಕರ್ನಾಟಕ ಸರ್ಕಾರದ 'ವಾರ್ತಾ ಮತ್ತು ಪ್ರಚಾರ ಇಲಾಖೆ'ಯ ನಿರ್ದೇಶನದಂತೆ ಬೆಂಗಳೂರಿನ ಆಲೀವ್ಹ್ ಕಮ್ಯೂನಿಕೇಷನ್‌ದ ಶ್ರೀಮತಿ ಭಾವನಾ ಹರ್ಷಾ ಅವರ ನಿರ್ದೇಶನದಲ್ಲಿ ದಿನಾಂಕ ೧೭-೧೧ ೨೦೧೧ರಂದು ಪ್ರಮೀಳಮ್ಮ ಗುಡೂರ ಅವರ ಸಾಕ್ಷ್ಯಚಿತ್ರವನ್ನು ಮಾಡಲಾಯಿತು.

## ಅನುಬಂಧ - ೨

# ಪ್ರಮೀಳಮ್ಮನವರ ಭಾವಚಿತ್ರಗಳು



ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ (೧೯೯೩ರಲ್ಲಿ)ಯನ್ನು ಡಾ. ಚಂದ್ರಶೇಖರ ಕಂಬಾರ ಅವರಿಂದ ಸ್ವೀಕರಿಸುತ್ತಿರುವುದು. ಆ ಸಂದರ್ಭದಲ್ಲಿ ಶ್ರೀ ಏಣಗಿ ಬಾಳಪ್ಪ ಹಾಗೂ ಶ್ರೀಮತಿ ಚಿಂದೋಡಿ ಲೀಲಾ ಹಾಜರಿದ್ದರು.



ಸನ್ಮಾನ್ಯ ಶ್ರೀ ಧರ್ಮಸಿಂಗ್ ಅವರಿಂದ ಸನ್ಮಾನ ಸ್ವೀಕರಿಸುತ್ತಿರುವ ಪ್ರಮೀಳಮ್ಮ, ಚಿತ್ರದಲ್ಲಿ ಚಿತ್ರನಟಿ ಮಾಲಶ್ರೀ ಇದ್ದಾರೆ.



ಗದುಗಿನ ತೋಂಟದಾರ್ಯಮಠದ ಡಾ. ಸಿದ್ದಲಿಂಗ ಯತಿಗಳಿಂದ
ಆಶೀರ್ವಾದ ಪಡೆಯುತ್ತಿರುವ ದೃಶ್ಯ



'ಲೋಕೇಶ ನೆನಪು' ಕಾರ್ಯಕ್ರಮದಲ್ಲಿ ಡಾ. ಪುಟ್ಟರಾಜ ಗವಾಯಿಗಳೊಂದಿಗೆ



‘ಲೋಕೇಶ ನೆನಪು’ ಕಾರ್ಯಕ್ರಮದಲ್ಲಿ ಸನ್ಮಾನಗೊಳ್ಳುತ್ತಿರುವ ನಟಿ ಪ್ರಮೀಳಮ್ಮ,
ಚಿತ್ರದಲ್ಲಿ ಜಯಂತಿ ಹಾಗೂ ಗಿರಿಜಾಲೋಕೇಶ




ಚಿತ್ರನಟಿ ಜಯಂತಿ ಅವರಿಂದ ಪುರಸ್ಕಾರಗೊಳ್ಳುತ್ತಿರುವ ಸನ್ನಿವೇಶ.



ಕೂಡಲಸಂಗಮದಲ್ಲಿ ಪಾರ್ವತಮ್ಮ ರಾಜಕುಮಾರ ಅವರಿಂದ ಪುರಸ್ಕಾರ ಚಿತ್ರದಲ್ಲಿ ಗುಡಗೇರಿಯ ಎನ್. ಬಸವರಾಜ ಇದ್ದಾರೆ.




‘ಸಿಂಧೂರ ಲಕ್ಷ್ಮಣ’ ನಾಟಕದ ನರಸವ್ವನ ಪಾತ್ರದಲ್ಲಿ



‘ಗೌಡ್ರ ಗದ್ಲ’ ನಾಟಕದ ‘ದೇವೇಗೌಡನ’ ಪಾತ್ರದಲ್ಲಿ ಪ್ರಮೀಳಮ್ಮ



‘ಚನ್ನಪ್ಪ ಚನೆಗೌಡ’ ನಾಟಕದ ಈರಮ್ಮ



ನಟ, ನಿರ್ದೇಶಕ ಸಿಹಿಕಹಿ ಚಂದ್ರು ಅವರೊಂದಿಗೆ



ಪ್ರಮೀಳಮ್ಮ ಕುಟುಂಬದ ಸದಸ್ಯರೊಂದಿಗೆ



ಪ್ರಶಸ್ತಿಗಳೊಂದಿಗೆ ಪ್ರಮೀಳಮ್ಮ



ಪ್ರಮೀಳಮ್ಮನವರೊಂದಿಗೆ ಲೇಖಕ ಡಾ. ಮುರ್ತುಜಾ ಬ. ಒಂಟಿ